|| ಶ್ರೀಃ ||

" ಸಿದ್ಧಿಂ ಸರ್ವಾಣಿಭೂತಾನಿ ಭೂತಾನಾಂ ಚೈವ ಯಃಪ್ರಭುಃ |
ದಾಸ್ಯನ್ತಿ ಮಮಯೇಚಾನ್ಯೇ ಹ್ಯದೃಷ್ಟಾಃ ಪಥಿಗೋಚರಾಃ || "

ಸಚ್ಚರಿತಸುಧಾರ್ಣವಃ

ಪ್ರಥಮಪ್ರಕರಣ.

ಪ್ರಥಮಲಹರಿ - ಪೀಠಿಕೆ.

ಶ್ರೇಯೋಭಿವೃದ್ಧಿಯನ್ನು ಹೊಂದಲೆಳಸುವ ಪ್ರತಿಯೊಬ್ಬನೂ ಸದಾಚಾರಿಯಾಗಿಯೂ ಸತ್ಯಸಂಧನಾಗಿಯೂ ವರ್ತಿಸಬೇಕಾದುದು ಅಗತ್ಯವು. ಹಾಗೆ ವರ್ತಿಸುವಾತನು ತನ್ನ ಮನಸ್ಸನ್ನು ದೃಢಪಡಿಸಿಕೊಳ್ಳುವುದಕ್ಕಾಗಿ ಅಭ್ಯಾಸವನ್ನು ಕೈಕೊಳ್ಳುವುದು ತನ್ನ ಮೊದಲನೆಯ ಪಾಠವೆಂದು ತಿಳಿಯಬೇಕು. ಹಾಗೆ ಅಭ್ಯಾಸಮಾಡುವಾಗ ಒಂದು ಗುರಿಯಿಡುವುದು ಮುಖ್ಯವು. ಗುರಿಯಿಲ್ಲದೆ—ಎಂದರೆ, ನಿರ್ಧರವಾದ ಫಲೋದ್ದೇಶವಿಲ್ಲದೆ,—ಮಾಡುವ ಯಾವ ಕಾರ್ಯವಾದರೂ ತೃಪ್ತಿಕರವಾಗದೆ - ಎಂದರೆ, ನಿರ್ದಿಷ್ಟಫಲವನ್ನು ಹೊಂದದೆ, ಅರ್ಧದಲ್ಲಿಯೇ ಕೆಟ್ಟುಹೋಗುವುದು. ಗುರಿಯನ್ನು ಹಿಡಿದು [ನಮ್ಮ ಕಾರ್ಯಕ್ಕೆ ಇಂತಹದೇ ಒಂದು ಫಲವಾಗಬೇಕೆಂದು ಸಂಕಲ್ಪಮಾಡಿ] ಅದನ್ನು ಪಡೆಯಲು ಮಾಡುವ ಶ್ರಮಕ್ಕೆ, ಒಂದು ಆದರ್ಶ (ಉದಾಹರಣೆ) ವನ್ನಿರಿಸಿಕೊಂಡು ಅದೇ ಮೇಲುಪಂಕ್ತಿಯಾಗಿ ಭಾವಿಸಿ, ಅದರಂತೆ ನಡೆವುದಾದರೆ, ಆ ಗುರಿಯನ್ನು ಮುಟ್ಟಲಾದೀತು. [ಇಚ್ಛಿತ ಫಲಸಿದ್ಧಿಯಾಗುವುದು.] ಹೇಗೆಂದರೆ, ಒಂದು ಸಮುದ್ರವನ್ನು ಅಥವಾ ಒಂದು ದೊಡ್ಡ ಪ್ರವಾಹವನ್ನು ದಾಟಿ, ತೀರಪ್ರದೇಶದಲ್ಲಿರುವ ಭವನವನ್ನು ಮುಟ್ಟಬೇಕೆಂದು ಗಟ್ಟಿಮನಸ್ಸುಮಾಡಿ, ಅದಕ್ಕೆ ತಕ್ಕಂತಹ ಬಲವಾದ ಹಡಗನ್ನು-

ಹರಿಗೋಲನ್ನು ಹತ್ತಿ ಎಚ್ಚರಿಕೆಯಿಂದದನ್ನು ನಡೆಯಿಸಿದರೆ, ನಿರಾಯಾಸವಾಗಿ ಗುರಿಯಿಟ್ಟ ಸ್ಥಳಕ್ಕೆ ಹೋಗಬಹುದು. ಒಂದುವೇಳೆ ಭವನವನ್ನು ಸೇರಲಾಗದಿದ್ದರೆ, ತೀರಪ್ರದೇಶವನ್ನಾದರೂ ಸಮೀಪಿಸಬಹುದು. ಹಾಗಿಲ್ಲದೆ ಸಮುದ್ರಮಧ್ಯದಲ್ಲಿ ಕಾಣುವ ಒಂದು ನಡುಗಡ್ಡೆಯನ್ನು ಕಂಡು ಅದೇ ಪ್ರಾಪ್ಯಸ್ಥಾನವೆಂದು ಭ್ರಮಿಸಿ ಅಲ್ಲಿಗೆ ಹೋಗಿ ಸೇರಿದರೆ ಸಾಕೆಂದು ನಂಬಿ ಮಧ್ಯದಲ್ಲಿರುವ ಪ್ರವಾಹವನ್ನು ದಾಟಬೇಕೆಂದು ಸಾಹಸಮಾಡುವವನಿಗೆ ಆತನ ಮನಸ್ಸಿನ ಭ್ರಮೆಗೂ ಪ್ರಯತ್ನದ ಅಕ್ರಮಕ್ಕೂ ತಕ್ಕಂತೆ ಹಿಡಿದಿರುವ ಹರಿಗೋಲು ನಡುದಾರಿಯಲ್ಲಿಯೇ ಒಡೆದುಹೋಗಬಹುದು; ಅಥವಾ ಆ ನಡುಗಡ್ಡೆಯು ಬಳಿಗೆ ಹೋಗುವುದರೊಳಗೆ ಅದೇ ಮುಳುಗಿಯೂ ಹೋಗಬಹುದು. ಆದುದರಿಂದಲೇ, ಯಾವಾಗಲೂ ಒಂದು ಉತ್ತಮ ಧ್ಯೇಯವನ್ನಿರಿಸಿ-ಬಲವಾದ ಗುರಿಯಿರಿಸಿಕೊಂಡು ಕಾರ್ಯಪ್ರವರ್ತಕರಾದರೆ, ಉತ್ತಮ ಧ್ಯೇಯವನ್ನು ಹಿಡಿದು ಮಾಡುವ ಪ್ರಯತ್ನ-ಶ್ರಮ-ವು-ಉತ್ತಮರೀತಿಯಿಂದ ನಡೆದು ಬಂದು ಪರಿಣಾಮದಲ್ಲಿ ತಕ್ಕಂತೆ ಉತ್ತಮೋತ್ತಮ ಫಲವನ್ನೇ ಹೊಂದುವಂತಾಗುವುದು.

ಹಾಗೆಯೇ ಸದಾಚಾರಿಗಳಾಗಿ ಸತ್ಪುರುಷರಲ್ಲಿ ಪರಿಗಣಿತರಾಗಬೇಕೆಂದರೆ, ಸತ್ಪುರುಷಕೋಟಿಯಲ್ಲಿ ಅಗ್ರಗಣ್ಯರಾಗಿ ಪೂಜಿಸಲ್ಪಡುತ್ತಿರುವ ನಮ್ಮ ಆರ್ಯಮಹಾಮಹಿಮರ ಪವಿತ್ರ ಚರಿತ್ರಗಳನ್ನು ಆದರ್ಶವಾಗಿಟ್ಟುಕೊಂಡು ಅವರಂತೆ ಸತ್ಪುರುಷಸಮಾಜದಲ್ಲಿ ಪರಿಗಣಿತರಾಗಬೇಕೆಂಬ ಆಸಕ್ತಿಯಿಂದ-ಜಾಗರೂಕರಾಗಿದ್ದು, ಅವರ ನಡೆನುಡಿಗಳನ್ನು ಬಾರಿಬಾರಿಗೂ ಸ್ಮರಿಸಿ, ತಕ್ಕಮಟ್ಟಿಗೂ ಅದರಂತೆ ತಮ್ಮ ನಡೆನುಡಿಗಳನ್ನು ಕ್ರಮಪಡಿಸಿಕೊಳ್ಳುವವರು ನಿಸ್ಸಂಶಯವಾಗಿಯೂ ಸತ್ಪುರುಷರೆಂದು ಪರಿಗಣಿಸಲ್ಪಡುವರು.

ಅದಕ್ಕೆಂದೇ—ನಮ್ಮವರ ಹಿತಕ್ಕೆಂದೇ-ತಮ್ಮ ಗುಣಗಳಿಂದ ದೇವಾಂಶಸಂಭೂತರೆನಿಸಿದ ಅನೇಕ ಮಹನೀಯರು ಅನೇಕಾನೇಕ ವಿಘ್ನಗಳಿಗೆ ಸಿಕ್ಕಿದರೂ ಧೃತಿಗೆಡದೆ ಶಾಂತಿಯಿಂದಲೂ ಧೈರ್ಯಸಾಹಸಗಳಿಂದಲೂ ತಮ್ಮ ಜೀವನ ನೌಕೆಯನ್ನು ಉತ್ತಮರೀತಿಯಿಂದ ನಡೆಯಿಸಿ, ತಮ್ಮ ನಡೆನುಡಿಗಳನ್ನು ಮಾದರಿಯಾಗಿರಿಸಿ ಕೀರ್ತಿಶೇಷರಾಗಿರುವರು.

ಅಷ್ಟೇಕೆ—ಸಾಕ್ಷಾತ್ ಭಗವಂತನು ಕೂಡ, ಮಾನುಷಾವತಾರವೆತ್ತಿ ಲೋಕಕ್ಷೇಮಕ್ಕಾಗಿ ಲೋಕಾದರಣೀಯವೂ ಉತ್ತಮವಾದ ಆದರ್ಶವೂ ಆದ ರೀತಿಯಿಂದ ನಡೆದು ನಮ್ಮೆಲ್ಲರನ್ನೂ ಎಚ್ಚರಿಸಿರುವನು. ಲೋಕಾದರವೂ ಸನ್ಮಾನವೂ ಉಂಟಾಗಬೇಕಾದರೆ, ಶ್ರೀಮಂತಿಕೆಯಾಗಲೀ ಪರಾಕ್ರಮ-ಸಾಹಸಗಳಾಗಲೀ ಕಾರಣವಲ್ಲ; ಸದ್ಗುಣ ಸದಾಚಾರಗಳೇ ಪೂಜ್ಯತೆಯನ್ನುಂಟುಮಾಡುವುವು. ಅವುಗಳ ಪ್ರಭಾವದಿಂದಲೇ ನಮ್ಮ ಆರ್ಯ ಮಹನೀಯರು ಆಚಂದ್ರಾರ್ಕವಾದ ಯಶಶ್ಶರೀರದಿಂದ ಪ್ರಕಾಶಿಸುತ್ತಿರುವರು. ಅಭ್ಯುದಯಾಕಾಂಕ್ಷಿಗಳಾದ ನಾವು ಅವರನ್ನು ಆದರ್ಶವಾಗಿ ವರಿಸದೆ, ನಿಜತತ್ತ್ವವನ್ನರಿಯದ ಡಾಂಭಿಕರ, ದುರಹಂಕಾರಿಗಳ,--ವಿಚಾರಶೂನ್ಯರಾದ ನಾಸ್ತಿಕರ ಮಾತಿಗೆ ಮರುಳಾಗಿ ಅವರೇ ಉತ್ತಮ ಪುರುಷರೆಂದೂ, ಅವರ ಆಚಾರ-ವಿಚಾರಗಳೇ ನಮಗೆ ಅನುಕರಣೀಯವೆಂದೂ ನಂಬಿ ನಡೆದರೆ ಅಭ್ಯುದಯಕ್ಕೆ ಪ್ರತಿಯಾಗಿ ಅಧೋಗತಿಯೇ ಪ್ರಾಪ್ತವಾಗಿ ಅಸುಖ-ಅಶಾಂತಿ-ಅಪನಿಂದೆಗಳಿಗೆ ಎಡೆಯಾಗಿ ಕೊರಗಬೇಕಾಗುವುದು.

ಆದುದರಿಂದ, ಸನ್ಮಾರ್ಗಾವಲಂಬಿಗಳಾಗಿ ಇಹಪರಶ್ರೇಯೋಭಿವೃದ್ಧಿ ವೈಭವಂಗಳನ್ನು ಪಡೆಯಬೇಕೆಂದು ಆಶಿಸುತ್ತಿರುವ ನನ್ನ ಸೋದರೀ ಸೋದರರೇ! ಮಾತಾಪಿತೃಭಕ್ತಿ, ಗುರು-ದೈವಸೇವಾ ತತ್ಪರತೆ, ಆಶ್ರಿತವಾತ್ಸಲ್ಯ, ಭ್ರಾತೃಸ್ನೇಹ, ಕರ್ತವ್ಯದಕ್ಷತೆ, ದೇಶಪ್ರೇಮ, ವಂಶಗೌರವ-ಸ್ವರೂಪ, ಸ್ವಕರ್ತವ್ಯ ತತ್ಪರತೆಗಳು, ನಿಮಗೆ ನಿತ್ಯಾನುಷ್ಠಾನ ವಿಷಯಗಳಾಗಿರುವುವೆಂದು ದೃಢವಾಗಿ ನಂಬಿ, ಆ ಉತ್ತಮ ಸ್ವರ್ಗೀಯ-ಗುಣಗಳನ್ನು ನೀವು ಪಡೆಯಲು ಶ್ರೀರಾಮನೇ ಆದಿಯಾದ ಮಹಾಪುರುಷರ "ಆರ್ಯಮಹಿಳಾಮಣಿಯರ" ಪವಿತ್ರ ಚರಿತ್ರವನ್ನು ಮಾರ್ಗದರ್ಶಕವಾಗಿಟ್ಟುಕೊಂಡು ನಡೆದರೆ ನಿಮಗೆ ಸಕಲ ಶ್ರೇಯಸ್ಸುಗಳೂ ಉಂಟಾಗುವುವು. ಆದುದರಿಂದ ನಿಮಗೆ ಮುಂದೆ ಕ್ರಮವಾಗಿ ಅವರ ಜೀವನ ಚರಿತೆಗಳನ್ನು ಮುಂದಿಡುವೆವು.

ದ್ವಿತೀಯ ಲಹರಿ.

(ಮಾತಾಪಿತೃಭಕ್ತಿ - ಪಿತೃವಾಕ್ಯಪರಿಪಾಲನೆ.)

ರಘುರಾಮ - ಭಾರ್ಗವರಾಮ.

ಪ್ರಿಯಸೋದರ-ಸೋದರಿಯರೇ,—

ಸಕಲ ಮಂತ್ರಗಳಿಗೂ ಪ್ರಣವ (ಓಂಕಾರ) ಮಂತ್ರವು ಪ್ರಧಾನವೆನ್ನಿಸುವಂತೆ ಸಕಲ ಸದ್ಗುಣಗಳಿಗೂ,—ಮಾತಾಪಿತೃಭಕ್ತಿಯೇ ಪ್ರಧಾನ ಗುಣವೆನ್ನಿಸುವುದು ; ಅದರಲ್ಲಿಯೂ, ಜನ್ಮವನ್ನುಂಟುಮಾಡಿದ ಜನಕನ ಮನಸ್ಸಂತೋಷಪಡಿಸುವುದು ತನೂಜಾತರ ಮುಖ್ಯಧರ್ಮವು. ಇದನ್ನು ಜಗತ್ತಿಗೇ ಎತ್ತಿ ತೋರಿಸುವುದಕ್ಕಾಗಿ,—ಪಿತೃವಾಕ್ಯ ಪರಿಪಾಲನೆಯೇ ಪರಮಧರ್ಮವೆಂದು ಸಾಧಿಸಲು-ರಘುರಾಮ ಭಾರ್ಗವರಾಮರು ಸ್ವಸುಖಾಭಿಲಾಷೆಯನ್ನೂ ತೊರೆದು, ತಮ್ಮ ಅನನ್ಯಸಾಧಾರಣಗುಣವಾದ ಮಾತಾಪಿತೃಭಕ್ತಿಯನ್ನು ದಿಕ್ಪ್ರಕಾಶಗೊಳಿಸಿದರು. ಹೇಗೆನ್ನುವಿರಲ್ಲವೇ ? ಶ್ರೀರಾಮಚಂದ್ರನು, ಕೋಸಲಾಧೀಶನಾದ ದಶರಥಮಹಾರಾಜನ ಪಟ್ಟಮಹಿಷಿಯ ಏಕಮಾತ್ರಪುತ್ರನೂ ಪುತ್ರಜ್ಯೇಷ್ಠನೂ, ಲೋಕೋತ್ತರ ಗುಣಸಂಪನ್ನನೂ ಮಾತಾಪಿತರ ಪರಮಪ್ರೀತಿಪಾತ್ರನೂ ಆಗಿದ್ದನು. ಆತನು ತನ್ನ ಸ್ವರ್ಗೀಯ ಗುಣಗಳಿಂದ ಸಕಲ ಪ್ರಜೆಗಳ ಪ್ರೀತಿಗೂ ಆಧಾರಸ್ವರೂಪನೂ ದೇವ, ಮುನಿಗಣಗಳಿಂದಲೂ ಸ್ತುತಿಸಲ್ಪಡುವವನೂ ಆಗಿ ಲೋಕಾಭಿರಾಮನೆನ್ನಿಸಿದವನು. ಇಂತಹ ಸದ್ಗುಣಸಂಪನ್ನನಾದ ಪುತ್ರರತ್ನವನ್ನು ನೋಡಿ ದಶರಥಮಹಾರಾಜನು ಅತ್ಯುತ್ಸಾಹದಿಂದ, ಪುತ್ರನಿಗೆ ಯುವರಾಜಪಟ್ಟಾಭಿಷೇಕಮಾಡಿ, ತನ್ನ ಭಾರವನ್ನು ಆತನಿಗೆ ವಹಿಸಿ, ತಾನು ವಿಶ್ರಾಂತಿಸುಖವನ್ನು ಹೊಂದಬೇಕೆಂದು ಬಯಸಿ ತನ್ನ ಬಯಕೆಯನ್ನು ತನ್ನ ಪ್ರಜೆಗಳಿಗೂ ತಿಳಿಯಪಡಿಸಿ, ಅವರ ಉತ್ಸಾಹ ಸೂಚಕವಾದ ಅನುಮತಿಯನ್ನು ಪಡೆದು, ಪುತ್ರನ ಪಟ್ಟಾಭಿಷೇಕಕ್ಕಾಗಿ ಸನ್ನಾಹಗೊಳಿಸುತ್ತಿದ್ದನು.

ಪುತ್ರನು ಯುವರಾಜನಾಗುವನೆಂದು ಪಟ್ಟಮಹಿಷಿಯಾದ ಕೌಸಲ್ಯಾದೇವಿಯೂ-ಸಹ ಮಾತೃವರ್ಗೀಯರಾದ ಸುಮಿತ್ರಾ ಕೈಕೇಯಿ ಮೊದಲಾಗಿ, ದಶರಥರಾಯನ 60,000 ಸಾವಿರ ಮಹಿಷಿಯರೂ ಸಂತೋಷೋತ್ಸಾಹದಿಂದ ಉತ್ಸವದ ದಿನವನ್ನು ಇದಿರುಗೊಳ್ಳುತ್ತಿದ್ದರು ಜನಕಮಹಾರಾಯನ ಪ್ರೇಮಪುತ್ರಿಯೂ, ದಶರಥರಾಯನ ಅಭಿಮಾನಾಸ್ಪದೆಯಾದ ಪುತ್ರವಧುವೂ ಶ್ರೀರಾಮಚಂದ್ರನ ಭಾರ್ಯೆಯೂ ಸಕಲಕಲ್ಯಾಣಗುಣಪರಿಪೂರ್ಣೆಯೂ ಆದ ಜಾನಕೀದೇವಿಯು, ತನ್ನ ಪತಿಯು ಯುವರಾಜನಾಗುವನೆಂಬ ಆಶೆಯಿಂದ, ಇಷ್ಟದೈವವನ್ನು ಪೂಜಿಸಿ, ಗುರುಜನರನ್ನು ಭಕ್ತಿಯಿಂದ ಸೇವಿಸಿ, ಸಾಧುಸಜ್ಜನರನ್ನು ಆದರಿಸಿ, ಸತ್ಕರಿಸಿ, ಯಥೇಷ್ಟವಾದ ದಾನ ಧರ್ಮಗಳನ್ನು ಮಾಡಿ, ವ್ರತಸ್ಥೆಯಾಗಿ ಶುಭಮಹೋತ್ಸವವನ್ನು ಇದಿರುಗೊಳ್ಳಲು ಸಿದ್ಧವಾಗಿದ್ದಳು.

ಸತ್ಪುತ್ರನೂ ಪ್ರಭುವರನೂ ದಯಾಪೂರ್ಣನೂ ಆದ ಶ್ರೀರಾಮಚಂದ್ರನು ಕೂಡ, ತಂದೆಯ ಭಾರವನ್ನು ಪರಿಹರಿಸುವುದಕ್ಕೂ, ತಾಯಿಯರ ಅಭಿಲಾಷೆಯನ್ನು ಸಲ್ಲಿಸುವುದಕ್ಕೂ, ಪ್ರಜೆಗಳ ಇಷ್ಟಾರ್ಥಗಳನ್ನು ಸಲ್ಲಿಸಿ, ದುಷ್ಟನಿಗ್ರಹ ಶಿಷ್ಟಪರಿಪಾಲನರೂಪವಾದ ತನ್ನ ಕರ್ತವ್ಯವನ್ನು ನೆರವೇರಿಸಲಿಕ್ಕೂ ತನ್ನ ಭಾರ್ಯೆಯ ನೈಸರ್ಗಿಕ-ಸ್ವರ್ಗೀಯವಾದ-ಕೋಮಲಗುಣಗಳನ್ನು ದಿಕ್ಪ್ರಕಾಶಗೊಳಿಸಲಿಕ್ಕೂ ಸಂಕಲ್ಪಿಸಿ, ಇಷ್ಟೆಲ್ಲ ಕಾರ್ಯಸಿದ್ಧಿಗೂ ಅವಕಾಶವನ್ನು ಕೊಡುವ ಯುವರಾಜಪದವಿಯನ್ನು ಹೊಂದಲು ಸಂತೋಷದಿಂದ ಒಪ್ಪಿ, ಮಹತ್ತರವಾದ ಉತ್ತರವಾದಿತ್ವದ ಅಧಿಕಾರವನ್ನು ವಹಿಸಲು, ತಕ್ಕಂತೆ ಸಂಕಲ್ಪಪೂರ್ವಕವಾಗಿ ವ್ರತಸ್ಥನಾಗಿದ್ದನು. ಆತನ ತಮ್ಮನಾದ ಲಕ್ಷ್ಮಣನು ತನ್ನ ಹಿರಿಯಣ್ಣನೂ ಲೋಕಾಭಿರಾಮನೂ ಆದ ಶ್ರೀರಾಮನು ಯುವರಾಜನಾಗುವನೆಂಬ ಸಂಭ್ರಮದಿಂದಲೂ ಪ್ರಜೆಗಳು ತಮ್ಮ ಅರಸನು ವೃದ್ಧನಾದುದರಿಂದ, ಇನ್ನು ಮುಂದೆ ನವಯೌವ್ವನಸಂಪನ್ನನೂ ಸುಗುಣಾರಾಮನೂ ಆದ ಶ್ರೀರಾಮನು ತಮಗೆ ಅರಸನಾಗುವನೆಂದು ಆಶೆಯಿಂದಲೂ-ಹೀಗೆ ಸಕಲರೂ ಸಂತೋಷ-ಕೌತುಕಗಳಿಂದ ಉತ್ಸವದಿನವನ್ನಿದಿರುನೋಡುತ್ತಿದ್ದರು.

ಮಾತ್ಸರ್ಯದಂತಹ ಮಹಾ ಘಾತಕತನವು ಪೃಥ್ವಿಯಲ್ಲಿ ಮತ್ತೊಂದಿರಲಾರದು. ಮಾತ್ಸರ್ಯವೇ ಮೂರ್ತೀಭವಿಸಿದಂತೆ ಮಂಥರೆಯೆಂಬ ಕುಬ್ಜೆಯೊಬ್ಬಳು, ತನ್ನ ಒಡತಿಯೂ, ದಶರಥರಾಯನ ಪ್ರೀತಿಪಾತ್ರಳೂ ಕನಿಷ್ಠಪತ್ನಿಯೂ ಆದ ಕೈಕೇಯಿಗೆ ಹಲವುಬಗೆಯಾಗಿ ಬೋಧಿಸಿ ಅವಳ ಮನಸ್ಸನ್ನು ಕೆಡಿಸಿ, ಕಡೆಗೆ ಅವಳು, ಹಿಂದೆಯೆಂದೋ ರಾಯನು ಕೊಟ್ಟಿದ್ದ ಎರಡು ವರವಾಗಿ, ಈಗ ರಾಮನಿಗೆ ಹದಿನಾಲ್ಕುವರ್ಷ ವನವಾಸವನ್ನೂ ತನ್ನ ಮಗನಾದ ಭರತನಿಗೆ ಯುವರಾಜಪಟ್ಟಾಭಿಷೇಕವನ್ನೂ ಮಾಡಿಕೊಡಲು ನಿರ್ಬಂಧಿಸಿದಳು. ಸೂನೃತವ್ರತಿಯಾದ ದಶರಥರಾಯನು ಯೋಗ್ಯನಾದ ರಾಮನನ್ನು ಕಾಡಿಗೆ ಅಟ್ಟಿ, ಅವನ ತಮ್ಮನಾದ ಭರತನಿಗೆ ರಾಜ್ಯಪದವಿಯನ್ನಿತ್ತರೆ ಲೋಕಾಪವಾದಕ್ಕೂ ಸಂಪ್ರದಾಯ ವಿರೋಧಾಚರಣದ ದೋಷಕ್ಕೂ ಗುರಿಯಾಗುವೆನೆಂದೂ, ಹಾಗೆ ಮಾಡದೆ ಬಿಟ್ಟರೆ ವಚನಭ್ರಷ್ಟತೆಯ ಮಹಾ ಪಾತಕಕ್ಕೂ ಕೃತಘ್ನತೆಗೂ ಎಡೆಯಾಗುವೆನೆಂದೂ—ಹೀಗೆ ಉಭಯವಿಧವಾದ ಧರ್ಮಸಂಕಟದಲ್ಲಿ ಸಿಕ್ಕಿ ಹಲುಬುತ್ತಿದ್ದನು. ಮಂಥರಾಪ್ರೇರಿತಳಾದ ಕೈಕೇಯಿಯಾದರೋ, ಸುಟ್ಟಗಾಯದಮೇಲೆ ಕತ್ತಿಯಪೆಟ್ಟು ಹಾಕಿದಂತೆ ನಿಷ್ಠುರವಾದ ವಾಕ್ಯಗಳಿಂದ ದಶರಥಮಹಾರಾಯನನ್ನು ಕ್ಷಣಕ್ಷಣಕ್ಕೂ ನೋಯಿಸುತ್ತಿದ್ದಳು. ಶ್ರೀರಾಮನಾದರೋ ರಾಜ್ಯಭಾರವನ್ನು ವಹಿಸುವ ಸನ್ನಾಹದಿಂದ ಪಿತನಿಗೆ ನಮಸ್ಕರಿಸಲು ಬಂದು ನೋಡಿದಾಗ ದಶರಥಮಹಾರಾಯನ ಮೂರ್ಛಾಸ್ಥಿತಿಯನ್ನೂ ಕೈಕೇಯಿಯ ಕ್ರೂರವಾಕ್ಯಗಳನ್ನೂ ನೋಡಿ, ಕೇಳಿ, ತಂದೆಯು ಸತ್ಯಸಂಕಲ್ಪನೂ, ಸೂನೃತವ್ರತಿಯೂ ಧರ್ಮಾತ್ಮನೂ ಎನ್ನಿಸುವಂತೆ ನಡೆಯದಿದ್ದರೆ ತಾನು ಆತನ ಪುತ್ರನಾಗಿ ಹುಟ್ಟಿದುದು ವ್ಯರ್ಥವಾಗುವುದೆಂದು ತಿಳಿದು, ಅದೇ ನಿಮಿಷದಲ್ಲಿಯೇ ತಂದೆಯನ್ನು ಪರಿಪರಿಯಾಗಿ ಸಂತೈಸಿ, ಸಹಮಾತೃವಾದ (ಬಲತಾಯಿ) ಕೈಕೆಗೆ ಭರವಸೆಯನ್ನಿತ್ತು, ಅಲ್ಲಿ ನಿಲ್ಲದೆ, ಪುರಜನರೆಲ್ಲರೂ ಅಭಿಷಿಕ್ತನಾಗಿ ಬರುವ ರಾಮನನ್ನು ನೋಡಬೇಕೆಂಬ ಸಂಭ್ರಮದಲ್ಲಿರುವಾಗಲೇ ಪಾದಚಾರಿಯಾಗಿ ಬಂದು, ಪತ್ನಿಯಾದ ಶ್ರೀ ಜಾನಕೀದೇವಿಗೆ ಸಂಗತಿಯನ್ನು ತಿಳಿಸಲು, ಜಾನಕಿಯು ನಿರುತ್ಸಾಹಳಾದರೂ, ಪತಿಗತಿಯನ್ನು ಅನುಸರಿಸುವುದೇ ಸತಿಯರಿಗೆ ನಿಸರ್ಗವ್ರತವೆಂದು ಮನಸ್ಸಮಾಧಾನ

ಹೊಂದಿ, ಪತಿಯನ್ನು ಅನೇಕವಿಧವಾಗಿ ಪ್ರಾರ್ಥಿಸಿ ಸಮ್ಮತಿಪಡಿಸಿ ತಾನೂ ಆತನೊಡನೆ ವನವಾಸಕ್ಕೆ ತೆರಳಲು ಅನುವಾದಳು. ಲಕ್ಷ್ಮಣನು, ತನ್ನ ತಂದೆಯು ಹೀಗೆ ಪತ್ನೀಮೋಹದಿಂದ ಲೋಕಾಚಾರವನ್ನು ಮೀರುವನೆಂದು ಅಸಮಾಧಾನಹೊಂದಿದರೂ ಅಣ್ಣನ ಮನಸ್ಸು ಖತಿಗೊಳ್ಳುವುದೆಂಬ ಶಂಕೆಯಿಂದ ಹೆಚ್ಚಾಗಿ ಮಾತಾಡದೆ, ಅಣ್ಣನ ಹಿಂದೆಯೇ ತಾನೂ ಕಾಡಿಗೆ ಹೊರಡಲು ಮುಂದಾಗಿ ನಿಂತನು.

ವಸ್ತ್ರಾಲಂಕಾರಗಳಿಂದ ವಿಭೂಷಿತರಾಗಿ ತಮ್ಮನ್ನು ನಮಸ್ಕರಿಸಲು ಸೀತಾರಾಮರು ಬರುವರೆಂದು ಕುತೂಹಲಗೊಂಡಿದ್ದ ಕೌಸಲ್ಯಾ ಸುಮಿತ್ರೆಯರೂ ಇತರ ಮಾತೆಯರೂ, ವನವಾಸಕ್ಕಾಗಿ ತೆರಳಲು, ಸಹಮಾತೃವಾದ ಕೈಕೇಯಿಯಿಂದ ಆಜ್ಞಾಪಿತರಾಗಿ ನಾರುಮಡಿಯುಟ್ಟು, ಪಿತನ ಸಂಕಟವನ್ನು ನೋಡಿ ಸಹಿಸಲಾರದಿದ್ದರೂ ಪಿತೃವಾಕ್ಪರಿಪಾಲನಿಗಾಗಿ ಕೇವಲ-ಪಿತನನ್ನು ಸತ್ಯಸಂಕಲ್ಪನೆನ್ನಿಸುವುದಕ್ಕಾಗಿ, ಆತನಮುಂದೆ ಬಹಳಹೊತ್ತು ನಿಲ್ಲಲಾರದೆ, ಸೀತಾಲಕ್ಷ್ಮಣರೊಡನೆ ಮಾತೆಯರನ್ನು ವಂದಿಸಿ-ಅಪ್ಪಣೆ ಪಡೆಯಬೇಕೆಂದು ಬಂದಾಗ ಆತನನ್ನು ನೋಡಿ ಅವರ ಚಿತ್ತವೃತ್ತಿ ಹೇಗಾಗಿರಬಹುದೋ ಊಹಿಸಿ ತಿಳಿಯಬೇಕಲ್ಲದೆ ಹೇಳಿತೀರದು. ಅದರಲ್ಲಿಯೂ ಕೌಸಲ್ಯಾದೇವಿಯ, ಕ್ರೋಧ-ಮನಃಖೇದಗಳನ್ನು ವಿವರಿಸುವಂತಿರಲಿಲ್ಲ. ಶ್ರೀರಾಮನಿಗೆ ಪಾಪ, ಇತ್ತ ಮಾತೃಭಕ್ತಿ-ಪ್ರೇಮ, ಅತ್ತ ಜನ್ಮದಾತಾರನಾದ ಪಿತನನ್ನು ಉದ್ಧರಿಸಬೇಕೆಂಬುವ ಅಸಾಧಾರಣವಾದ ಪಿತೃಭಕ್ತಿ ಗೌರವ - ಇವೆರಡೂ ಬಾಧಿಸುತ್ತಿರಲು, ಲಕ್ಷ್ಮಣನು ಕೌಸಲ್ಯಾದೇವಿಯ ಶೋಕಾತಿರೇಕವನ್ನು ನೋಡಿ ಉದ್ರೇಕಹೊಂದಿ ತಂದೆಯು ವಿವೇಕತಪ್ಪಿದನೆಂದು ಹೇಳುತ್ತಲಿದ್ದ ನಿಷ್ಠುರಗಳನ್ನು ಕೇಳಿ ಇವುಗಳಿಂದ ಬಹುವಾಗಿ ತಾಡಿತನಾಗಿದ್ದರೂ ಎಲ್ಲಕ್ಕಿಂತಲೂ ಪಿತೃವಾಕ್ಯ ಪರಿಪಾಲನವೇ ಪ್ರಧಾನವೆಂದು ನಿರ್ಧರಿಸಿ, ತಾಯಿಯರನ್ನು ಹಲವು ಬಗೆಯಾದ ನಯವಿನಯ-ನೀತಿವಚನಗಳಿಂದ ಸಮಾಧಾನಗೊಳಿಸಿ, ಅವರ ಅಪ್ಪಣೆ ಹೊಂದಿ, ತನ್ನ, ತನ್ನ ಅನುಜಾತನಾದ ಲಕ್ಷ್ಮಣನ, ಮತ್ತು ಪತ್ನಿಯಾದ ಸೀತಾ (ಜಾನಕೀ) ದೇವಿಯ-ಸಮಸ್ತ ವಸ್ತ್ರಾಭರಣಗಳನ್ನೂ ದಾನಮಾಡಿ, ಪುರಜನ ಪರಿವಾರವೆಲ್ಲವೂ ತನ್ನನ್ನೇ ಅನುಸರಿಸಿ ಗೋಳಿಡುತ್ತಾ ಬರುತ್ತಿರಲು ಅಯೋಧ್ಯಾನಗರಿಯನ್ನು

ಬಿಟ್ಟು ಗುಹನ ಸಹಾಯದಿಂದ ಗಂಗಾನದಿಯನ್ನು ದಾಟಿ, ಭರದ್ವಾಜಾಶ್ರಮವನ್ನು ಸಾರಿ, ಆತನ ಆಶೀರ್ವಾದ ಹೊಂದಿ, ಚಿತ್ರಕೂಟ ಪರ್ವತವನ್ನೇರಿ ಪರ್ಣಶಾಲೆಯನ್ನು ನಿರ್ಮಿಸಿಕೊಂಡು ಅಲ್ಲಿ ಸುಖದಿಂದಿದ್ದನು.

ಇತ್ತ ರಾಮನು, ಅನುಜ, ಭಾರ್ಯಾಸಮೇತ ವನವಾಸಕ್ಕೆ ತೆರಳಲು ದಶರಥಮಹಾರಾಜನು ಪುತ್ರವಿರಹಸಂತಪ್ತನಾಗಿ ಪ್ರಾಣಬಿಟ್ಟನು. ಮಂತ್ರಿಪುರೋಹಿತರು ಭರತನನ್ನು ಕರತರಿಸಿ, ಆತನಿಂದ ರಾಯನಿಗೆ ಉತ್ತರಕ್ರಿಯೆಗಳನ್ನು ನೆರವೇರಿಸಿ, ರಾಜ್ಯಭಾರವನ್ನು ವಹಿಸುವಂತೆ ಬಲಾತ್ಕರಿಸಿದರು. ಭರತನು ಭ್ರಾತೃಸ್ನೇಹಗೌರವದಿಂದಲೂ ಧರ್ಮಶ್ರದ್ಧೆಯಿಂದಲೂ ಅದನ್ನೊಪ್ಪದೆ, ಶ್ರೀರಾಮನನ್ನು ಕರತಂದು ಪಟ್ಟಾಭಿಷೇಕಮಾಡಿಸಬೇಕೆಂದು ಸಂಕಲ್ಪಿಸಿ ಮಾತೆಯರೊಡನೆಯೂ ಮಂತ್ರಿಪುರೋಹಿತ-ಪರಿವಾರಸಹಿತ ಹೊರಟು, ಭರದ್ವಾಜಾಶ್ರಮವನ್ನು ಸೇರಿ ಜಟಾವಲ್ಕಲಧಾರಿಯಾಗಿದ್ದ ಅಣ್ಣನನ್ನು ನೋಡಿ ದುಃಖವನ್ನು ತಡೆಯಲಾರದೆ ಕಣ್ಣೀರು ಸುರುಸುತ್ತಾ ತಂದೆಯ ಮರಣವಾರ್ತೆಯನ್ನೂ ತಿಳಿಸಿ ಪುರಿಗೆ ಹಿಂತಿರುಗಿ ಬರಲು ಎಷ್ಟೋ ಬಗೆಯಾಗಿ ಪ್ರಾರ್ಥಿಸಿದನು. ಶ್ರೀರಾಮನು, ತನ್ನಿಂದಲೇ ತನ್ನ ತಂದೆಯು ಮೃತಿಹೊಂದಿದನೆಂದು ಶೋಕಿಸಿ ತಂದೆಗೆ ಸಲಿಲಕ್ರಿಯೆಯನ್ನೂ ಮಾಡಿ, ತಾಯಿಯರನ್ನು ವಂದಿಸಿ, ಮಂತ್ರಿ ಪುರೋಹಿತರನ್ನು ಸಂತೈಸಿ, ಭರತನಿಗೆ ಅನೇಕ ವಿಧವಾಗಿ ಹೇಳಿ, ಪಿತನನ್ನು ಸೂನೃತವ್ರತಿಯೆನ್ನಿಸಬೇಕಲ್ಲದೆ ವಚನಭ್ರಷ್ಟನನ್ನಾಗಿ ಮಾಡುವುದು ಅಧರ್ಮವೆಂದೂ ಅದರಿಂದ 14 ವರ್ಷವನವಾಸ ಮಾಡಿ, ಮರುದಿನವೇ ಬಂದು ಸೇರುವೆನೆಂದೂ ಆವರೆಗೆ ರಾಜ್ಯವನ್ನು ಅನಾಯಕವಾಗಿ ಮಾಡದೆ, ಮಾತಾಪಿತೃಗಳ ಅಭಿಮತ ಆಜ್ಞಾವಚನಗಳಂತೆ ರಾಜ್ಯಪರಿಪಾಲನ ಮಾಡುತ್ತಿರಬೇಕೆಂದೂ ಭರತನಿಗೆ ಹೇಳಿ, ಆತನ ನಿರ್ಬಂಧವನ್ನು ಮೀರಲಾರದೆ ತನ್ನ ಪಾದುಕೆಯನ್ನಿತ್ತು ಹಿಂತಿರುಗಿ ಕಳುಹಿದನು. ಭರತನು ಜಟಾವಲ್ಕಲಧಾರಿಯಾಗಿ ರಾಮನನ್ನು ಬಿಟ್ಟು ತಾನು ಅಯೋಧ್ಯಾನಗರ ಪ್ರವೇಶ ಮಾಡಲೊಲ್ಲೆನೆಂದು ದೃಢಸಂಕಲ್ಪಮಾಡಿ, ಕಡೆಗೆ ಅಣ್ಣನ ಮಾತನ್ನು ಮೀರಲಾರದೆ ಆತನ ಪಾದುಕೆಗಳನ್ನು ಪಲ್ಲಕ್ಕಿಯಲ್ಲಿರಿಸಿ, ವೈಭವದೊಡನೆ ಉತ್ಸವಮಾಡಿಸಿ ಕೊಂಡು

ಬಂದು ನಂದೀಗ್ರಾಮದಲ್ಲಿ ನೆಲಸಿ, ಶ್ರೀರಾಮ ಪಾದುಕೆಯ ಅಂಕಿತದಿಂದ ವಿತರಣೆಯಾಗಿ ರಾಜ್ಯಭಾರವನ್ನು ಮಾಡುತ್ತಾ ಶ್ರೀರಾಮಚಂದ್ರನ ಪುನರಾಗಮನ ನಿರೀಕ್ಷಣೆಯಲ್ಲಿದ್ದನು.

ಪ್ರಿಯಸೋದರರೇ !

ಶ್ರೀರಾಮಚಂದ್ರನು, ದಶರಥರಾಯನೊಬ್ಬನ ಮಾತನ್ನು ಉಳಿಸುವುದಕ್ಕಾಗಿ ಸಕಲ ಸುಖಭೋಗ ಸಂಪದ್ವೈಭವಗಳನ್ನೂ ಬಿಟ್ಟುಕೊಟ್ಟು ಕಾಡಿಗೆ ಹೊರಟನು. ಮಂತ್ರಿಪುರೋಹಿತರು, ಸಕಲಪ್ರಜೆಗಳೂ, ರಾಮನೇ ರಾಜನಾಗಬೇಕೆಂದು ಆಶಿಸುತ್ತಿದ್ದರು. ಆದರೂ ಆತನು ಮನಸ್ಸಿನಿಂದಲಾದದೂ ರಾಜ್ಯಲೋಭಕ್ಕೆ ಎಡೆಗೊಡಲಿಲ್ಲ. ಸುಕುಮಾರಿಯಾದ ಸೀತಾದೇವಿಯು ತನ್ನಿಂದ, ವನವಾಸದ ಕಷ್ಟಕ್ಲೇಶಗಳಿಗೆ ಗುರಿಯಾಗುವಳೆಂದು ತಿಳಿದರೂ, ಪತ್ನೀಪ್ರೇಮದಿಂದ ಧೃತಿಗೆಡಲಿಲ್ಲ, ಕಡೆಗೆ, ಭರತನು, ಬಂದು ಕಾಲುಹಿಡಿದು ಕಾಡಿಬೇಡಿದಾಗಲೂ ತನ್ನ ಸಂಕಲ್ಪವನ್ನು ಸ್ವಲ್ಪವಾದರೂ ಬಿಡಲಿಲ್ಲ. ಆಗ, ರಾಮಚಂದ್ರನು ಮನಸ್ಸು ಮಾಡಿದ್ದರೆ ಆಕ್ಷಣದಲ್ಲಿಯೇ ಶ್ರೀರಾಮನಿಗೆ ಪಟ್ಟಾಭಿಷೇಕಮಾಡಿ, ತಂದೆಯ ಮಾತನ್ನು ನಡೆಯಿಸಲು ತಾನು, ವನವಾಸಮಾಡಿ ಬರುವುದಕ್ಕೆ ಕೂಡ ಭರತನು ಸಿದ್ಧನಾಗಿದ್ದನು. ಆದರೆ ಪಿತೃಭಕ್ತನಾದ ರಾಮಚಂದ್ರನು ಆಶೆಗೆ ಲೇಶವೂ ಅವಕಾಶಕೊಡದೆ, ತನ್ನ ಸೇವೆಗಾಗಿ ಕೈಕಟ್ಟಿಕೊಂಡು ನಿಂತಿದ್ದ ರಾಜ್ಯಲಕ್ಷ್ಮಿಯನ್ನು ನಿರಾಕರಿಸಿ, ತನ್ನ ತಂದೆಯು, ತನ್ನ ತಾಯಿಯಾದ ಕೈಕೇಯಿಗೆ ಕೊಟ್ಟಿದ್ದ ವಚನವನ್ನು ನೆರವೇರಿಸುವುದೇ ತನಗೆ ಪರಮ ಧರ್ಮವೆಂದು ದೃಢವಾಗಿ ನಂಬಿ, ವನವಾಸವನ್ನೇ ವರಿಸಿದನು.

ತಂದೆಯ ಮಾತನ್ನು ನಡೆಯಿಸಿಕೊಡುವುದಕ್ಕಾಗಿ ದಂಡಕಾರಣ್ಯವನ್ನು ಹೊಕ್ಕು, ನಾರುಬಟ್ಟೆಗಳನ್ನುಟ್ಟು, ಜಟೆಯನ್ನು ಧರಿಸಿ ಅಡವಿಯೊಳಗೆ ದೊರೆಯುವ ಕಂದಮೂಲಫಲಗಳನ್ನು ಮೆಲ್ಲುತ್ತ (ತಿನ್ನುತ್ತಾ) ತಳಿರುಹಾಸಿಗೆಯಮೇಲೆ ಮಲಗುತ್ತೆ, ಎಲೆ ಮನೆಗಳಲ್ಲಿ ವಾಸಮಾಡುತ್ತ, ಅಡವಿಯಲ್ಲಿ ತಪಿಸುವ ತಾಪಸರಿಗೆ ಅಭಯವನ್ನಿತ್ತು, ರಾಕ್ಷಸರು ತಂದೊಡ್ಡಿದ ವಿಘ್ನಂಗಳೆಲ್ಲವನ್ನೂ ನಿವಾರಿಸಿ, ಕಷ್ಟಕ್ಲೇಶಗಳೆಲ್ಲವನ್ನೂ

ಸಹಿಸಿ, ಮಾಯಾಮೃಗವಾಗಿ ಬಂದು ಮರುಳುಗೊಳಿಸಿದ ಮಾರೀಚನ ಮಾಯೆಯನ್ನು ತಿಳಿಯದೆ ಬೆನ್ನಟ್ಟಿ ಹೋದಾಗ, ತಾವಿಲ್ಲದ ವೇಳೆಯಲ್ಲಿ ರಾವಣನು ಸೀತಾದೇವಿಯನ್ನು ಕದ್ದೊಯ್ಯಲು, ಅರಸಿಯನ್ನು ಅರಸುತ್ತ ಬಂದು, ಸುಗ್ರೀವನ ಸ್ನೇಹವನ್ನು ಪಡೆದು, ವಾಲಿಯನ್ನು ಕೊಂದು ಸುಗ್ರೀವನಿಗೆ ರಾಜ್ಯವನ್ನಿತ್ತು, ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ, ರಾವಣನನ್ನು ಸಮೂಲವಾಗಿ ನಾಶಮಾಡಿ, ವಿಭೀಷಣನಿಗೆ ಲಂಕಾಧಿಪತ್ಯವನ್ನಿತ್ತು ಸೀತಾದೇವಿಯನ್ನು ಪಡೆದು, ಭರತನಿಗೆ ಕೊಟ್ಟಿದ್ದ ವಚನಕ್ಕಾಗಿ ಪುಷ್ಪಕವಿಮಾನವನ್ನೇರಿ, ಸಕಾಲಕ್ಕೆ ಬಂದು, ಸೋದರರಾದ ಭರತಶತ್ರುಘ್ನರಿಗೆ ದರ್ಶನವನ್ನಿತ್ತನು. ಸತ್ಯಪರಾಕ್ರಮಿಯಾಗಿ ವನವಾಸವನ್ನು ಮುಗಿಸಿಕೊಂಡು, ಭೂಭಾರಭೂತರಾದ ರಾಕ್ಷಸರೆಲ್ಲರನ್ನೂ ನಿಗ್ರಹಿಸಿ ದೇವತೆಗಳಿಂದಲೂ ಹೊಗಳಿಸಿಕೊಂಡು ಬಂದ ರಾಮಚಂದ್ರನನ್ನು, ಸಕಲಪರಿವಾರಸಮೇತನಾದ ಭರತನು ಬಂದು ಸಂಭ್ರಮದಿಂದ ಇದಿರ್ಗೊಂಡು ಕರತಂದು, ಹದಿನಾಲ್ಕು ವರ್ಷದ ರಾಜ್ಯಭಾರ ವೃತ್ತಾಂತವನ್ನೂ ನಿವೇದಿಸಿ, ಅಣ್ಣನಿಗೆ ರಾಜ್ಯಭಾರವನ್ನು ಒಪ್ಪಿಸಿ ಕೃತಾರ್ಥನೆನಿಸಿದನು. ಭರತನ ಭ್ರಾತೃವಾತ್ಸಲ್ಯವೂ ಲಕ್ಷ್ಮಣನ ಸ್ವಾಮಿಭಕ್ತಿಯೂ, ಸೀತಾದೇವಿಯ ಪತಿಪ್ರೇಮವೂ, ವರ್ಣನೀಯ, ಲೋಕಾದರಣೀಯ ಮತ್ತು ಅನುಕರಣೀಯಗಳಾಗಿದ್ದರೂ ಸದ್ಯಕ್ಕೆ ವಿಚಾರಣೀಯ ವಿಷಯಗಳಾಗಿಲ್ಲ. ಮುಖ್ಯವಾಗಿ ರಾಮನ ಪಿತೃವಾಕ್ಯ ಪರಿಪಾಲನೆಯ ಮಹತ್ವವನ್ನು ಇಲ್ಲಿ ಉದಹರಿಸುವುದು ಮುಖ್ಯವು.

ಪ್ರಿಯಸೋದರರೇ! ಅಕ್ಕರೆಯುಳ್ಳ ಅಕ್ಕತಂಗಿಯರೇ!

ರಾಮನು, ತಂದೆಯ ನುಡಿಯನ್ನು ನಡೆಯಿಸಕೊಡಲು, ಎಷ್ಟು ಕಷ್ಟಕ್ಲೇಶಗಳನ್ನು ಸಹಿಸಿದನೆಂಬುದನ್ನು ವಿಚಾರಮಾಡಿರಿ! ಆತನು ಭಗವದವತಾರಪುರುಷನೆಂದೂ ಆದುದರಿಂದಲೇ ಅಂತಹ ಅಮಾನುಷವಾದ, ಪರಾಕ್ರಮ ಸಾಹಸಾದಿಗಳನ್ನೂ ಪ್ರದರ್ಶಿಸಿದನೆಂದೂ ನೀವು ಹೇಳುವಿರೇನು ? ಇಲ್ಲಿ, ಅವತಾರಪುರುಷನಾದ ರಾಮಚಂದ್ರನೇ ಲೋಕಕ್ಕೆಲ್ಲಾ ಉದಾಹರಣೆಯಾಗಿ ನಡೆದಿರುವುದನ್ನು ಸ್ವಪ್ನ, ಸುಷುಪ್ತಿ (ಕನಸು ನಿದ್ರೆ) ಗಳಲ್ಲಿಯೂ ನೆನವುಮಾಡಿಕೊಂಡು ಎಚ್ಚರಿಕೆಯಿಂದ, ಆತನು ಮಾಡಿ

ತೋರಿಸಿರುವ ಪಾಠದಂತೆ ನಡೆಯಲು ತೊಡಗಬೇಕು. ಪಿತನ, ಜನ್ಮವನ್ನುಂಟುಮಾಡಿದ ಸಾಕಾರದೈವಸ್ವರೂಪನಾದ ಜನಕನ, ವಾಕ್ಯವೇ ವೇದವಾಕ್ಯವೆಂದು ನಂಬಿ ನಡೆಯುವುದು ಸತ್ಪುರುಷನಿಗೆ ಕತ್ತ್ಯದು. ಹಾಗಿಲ್ಲದೆ, ಈಗ ಅಲ್ಲಿಗಲ್ಲಿಗೆ ನಾವು ನೋಡುತ್ತಿರುವಂತೆ ಪೂರ್ವಿಕರ ಆಚಾರ ವಿಚಾರಗಳನ್ನು ಅನುಕರಣಮಾಡಿದರೆ ಅಪಮಾನವೆಂದೋ, ಇಲ್ಲವೆ, ಅವರೆಲ್ಲರೂ ಮೂರ್ಖರು, ಅನಾಗರಿಕರೆಂದೋ ಅಲ್ಲಗಳೆದು, ಅವರ ಆಚಾರವಿಚಾರಗಳೆಲ್ಲವೂ ಮೌಢ್ಯತನದ - ಮೂರ್ಖಬುದ್ಧಿಯ - ಅಸಂಬದ್ಧವಾದವೆಂದು ಜರಿದು, ತಾವೇ ಬುದ್ಧಿವಂತರೆಂದೂ ತಮ್ಮ ನಡೆನುಡಿಗಳೇ ಉತ್ತಮರೀತಿಯವೆಂದೂ ಅಭಿಮಾನಪಡುವವರನ್ನು ನೋಡಿ ಅವರೇ ನಿಮ್ಮ ಮಾರ್ಗದರ್ಶಕರೆಂದೂ ಅವರ ಹೇಳಿಕೆಯಂತೆ ನಡೆವುದೇ ಏಳಿಗೆಗೆ ದಾರಿಯೆಂದೂ ತಿಳಿಯುವಿರೇನು ? ಹಾಗೆ ಮಾತ್ರಮಾಡಬೇಡಿರಿ, ಕಂಡಿರಾ ! ಬಾಲಕರೇ ! ಹಿರಿಯರನ್ನು ಅಲ್ಲಗಳೆವ ಈಗಿನವರು, ತಮ್ಮನ್ನು ತಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಮೊದಲಾಗಿ, ತಮ್ಮ ಮುಂದಿನವರೂ, ತಾವು ತಮ್ಮ ಹಿರಿಯರನ್ನು ಆಡಿಕೊಳ್ಳುವುದಕ್ಕೂ ಹತ್ತು ಮಡಿ ಹೆಚ್ಚಾಗಿ, ತಮ್ಮನ್ನು ಹಳಿದಾಡುವರೆಂಬುದನ್ನು ಮಾತ್ರ ಆಲೋಚಿಸುವುದೆಲ್ಲವೇಕೆ ? ಹಾಗೆ ಅವರು ಆ ವಿಚಾರವನ್ನು ಮನಸ್ಸಿಗೆ ತಂದರೆ, ಆಗ, ಅವರು ತಾವು ತಮ್ಮ ಹಿರಿಯರನ್ನು ಅಲ್ಲಗಳೆಯುದು ಹೇಯಕಾರ್ಯವೆಂದು ತಿಳಿದುಕೊಳ್ಳುವರಲ್ಲದೆ, ತಮ್ಮ ತನ್ಮ ತಪ್ಪನ್ನು ತಿದ್ದಿಕೊಳ್ಳಲು ಸಂಕಲ್ಪಿಸಿ, ಪರಮಾತ್ಮನಲ್ಲಿಯೂ ಗುರುಜನರ ಬಳಿಯಲ್ಲಿಯೂ ಕ್ಷಮೆಯನ್ನು ಕೇಳಿಕೊಳ್ಳುವುದರಲ್ಲಿ ಸಂಶಯವಿಲ್ಲ. ಶ್ರೀರಾಮಚಂದ್ರನು ಮನಸ್ಸುಮಾಡಿದ್ದರೆ, ಆತನಿಗೆ ಕೈಕೇಯಿಯ ಆಶಾಭಂಗಮಾಡಿ, ದಶರಥರಾಯನ ಆಶೆಯಂತೆ ಯೌವರಾಜ್ಯ ಪಟ್ಟಾಭಿಷೇಕವು ನಡೆಯಲು ಏನೂ ಅಡ್ಡಿ ಇರುತ್ತಿರಲಿಲ್ಲ. ಎಲೆಯಲ್ಲಿ ಊಟಕ್ಕೆ ಎಲ್ಲವೂ ಬಡಿಸಿ ಸಿದ್ಧವಾಗಿದ್ದಂತೆ ಸಕಲ ಸನ್ನಾಹಗಳೂ ನಡದೇ ಇದ್ದುವು. ಆದರೆ, ರಾಮನ ಗುರು ದೈವಭಕ್ತಿ, ಪಿತೃವಾಕ್ಯ ಪರಿಪಾಲನಾ ಮಹತ್ಸಂಕಲ್ಪ, ಇವೆರಡೂ, ಅಷ್ಟಕ್ಕೆ ಅವಕಾಶಕೊಡದೆ, ಪಿತೃವಾಕ್ಯಪರಿಪಾಲನೆಯ ಮುಂದೆ, ಕೋಸಲದೇಶದ ರಾಜ್ಯಪದವಿಯಲ್ಲ,

ತ್ರೈಲೋಕಾಧಿಪತ್ಯವುಕೂಡ, ಅತ್ಯಲ್ಪವೆಂದು ತೋರಿತು! ಅದರಿಂದಲೇ ರಾಮಚಂದ್ರನು ಹೆತ್ತ ತಾಯಿಯನ್ನೂ, ಅಕ್ಕರೆಯುಳ್ಳ ಬಲತಾಯಿಯರನ್ನೂ, ಎಣಿಸಲಸದಳವಾದ ಸಂಪತ್ತು ವೈಭವ, ದೇಶ, ಕೋಶ, ಮಿತ್ರ, ಬಾಂಧವ, ಪರಿಜನಗಳೇ ಮೊದಲಾದ ಸುಖಸಾಮ್ರಾಜ್ಯವನ್ನೆಲ್ಲಾ ಬಿಟ್ಟು, ವನವಾಸವೇ ವರವೆಂದು ತಿಳಿದು, ಹೊರಟುಬಿಟ್ಟನು! ಪುಣ್ಯಪುರುಷನಾದ ರಾಮನು ನಮಗಾಗಿ ಹೇಳಿರುವ ಪಾಠಗಳಲ್ಲಿ ಎಳ್ಳಷ್ಟನ್ನಾದರೂ ನಾವು ಕಲಿತುಕೊಳ್ಳದೇ ಹೋದರೆ ಫಲವೇನು, ಹೇಳಿರಿ? ಈಗಲೂ ರಾಮನ ಪಾಠದಂತೆ ಮಾತಾಪಿತೃ ಭಕ್ತರು ಇಲ್ಲದೆ ಇಲ್ಲ. ತಮ್ಮ ಹಿರಿಯರ ವಾಕ್ಯಕ್ಕೆ ಕಟ್ಟು ಬಿದ್ದು ಸ್ವಸುಖಾಭಿಲಾಷೆಯನ್ನೇ ತೊರೆದು, ತಮ್ಮ ಕಷ್ಟಕ್ಲೇಶಗಳೆಷ್ಟಾದರೂ ಸಹಿಸಿಕೊಂಡು ಹಿರಿಯರ ಅಭಿಮಾನವನ್ನು ನಡೆಯಿಸಿಕೊಡುವುದೇ ಪುರುಷಾರ್ಥವೆಂದು ನಂಬಿ ನಡೆವ ಸತ್ಪುತ್ರರು ಎಷ್ಟೋಮಂದಿ ಇರುವರು. (ಅವರ ಸುಖ, ಸಮಾಧಾನಗಳನ್ನು ಕುರಿತು ಚಿಂತಿಸದೆ, ತಮ್ಮ ಅಭಿಮಾನವನ್ನು ಮಾತ್ರ ಕಾಯ್ದುಕೊಳ್ಳುವ ಹಿರಿಯರ ವಿಚಾರವು ಮಾತ್ರ ಅಷ್ಟು ತೃಪ್ತಿಕರವಾಗಿಲ್ಲ.) ಅಂಥವರೇ ನಿಮಗೆ ಮೇಲ್ಪಂಕ್ತಿಹಾಕಿಕೊಟ್ಟವರೆಂದು ತಿಳಿಯಿರಿ, ಬಾಲಕರೇ! ಇನ್ನು ಪಿತೃವಾಕ್ಯಪರಿಪಾಲನೆಗಾಗಿ ಭಾರ್ಗವರಾಮನು ಏನುಮಾಡಿದನೆಂದು ತಿಳಿಯಲೆಳಸುವಿರಾದರೆ - ತಾಳ್ಮೆಯಿಂದ ಕೇಳಿರಿ:—

ಭೃಗುವಂಶ ಸಂಭವನಾದ ಜಮದಗ್ನಿಮಹರ್ಷಿಗೆ "ರೇಣುಕಾದೇವಿ" ಎಂಬ ಪತ್ನಿ. ಪರಮಪತಿವ್ರತೆ. ಭಾರ್ಗವರಾಮ (ಪರಶುರಾಮ) ಎಂಬ ಹೆಸರಿನಿಂದ ಮಹಾ ಪರಾಕ್ರಮಿಯೂ, ಬ್ರಹ್ಮಚರ್ಯನಿಷ್ಠಾಪರನೂ, ಪಿತೃಭಕ್ತನೂ, ಆದ ಪುತ್ರನು. ಪರಶುರಾಮನನ್ನು ಕಂಡರೆ ತಂದೆಗೆ ಅತ್ಯಂತಪ್ರೇಮವು, ಭಾರ್ಗವರಾಮನು ಕೂಡ, ತಂದೆಗೆ ಅತ್ಯಂತ ಪ್ರೇಮವು. ಭಾರ್ಗವರಾಮನು ಕೂಡ, ಪ್ರಚಂಡಶಾಸನನೂ ಬ್ರಹ್ಮತೇಜೋವಿರಾಜಮಾನನೂ ಆದ ತನ್ನ ಜನರಲ್ಲಿ ಅನಸ್ಯವಾದ ಭಕ್ತಿಭಾವವನ್ನಿರಿಸಿದ್ದನು. ರೇಣುಕಾದೇವಿಯೆಂದರೆ ಅಸಾಧಾರಣವಾದ ಪತಿಭಕ್ತಿಯುಳ್ಳವಳು. ಅನುಪಮಾನವಾದ ಸೌಂದರ್ಯ

ದಿಂದ ವಿರಾಜಿತೆ. ಆ ದೇವಿ ನದಿಯಿಂದ ತೀರ್ಥವನ್ನು ತರುತ್ತಿದ್ದಾಗ ಇದಿರಿಗೆ ಗಂಧರ್ವನೊಬ್ಬನು ಬಂದುದನ್ನು ನೋಡಿ, ಈತನು ಲಕ್ಷಣ ಸಂಪನ್ನನಾಗಿರುವನೆಂದಿಷ್ಟುಮಾತ್ರ ನೆನೆದಳು. ಅಷ್ಟಕ್ಕೇ ಅವಳ ತಪೋಬಲದಿಂದ ನಿಂತಿದ್ದ ಮಳಲಿನ ಪಾತ್ರವು ಬಿರಿದು, ನೀರು ಸುರಿದು ಹೋಯಿತು. ಮತ್ತೆ ಮೊದಲಿನಂತೆ ಮಾಡಿದರೂ ಆಗಲಿಲ್ಲ. ಆಗ ಖಿನ್ನ ಳಾಗಿ ರೇಣುಕಾದೇವಿ ಮನೆಗೆ ಬಂದು ತನ್ನ ನಿರೀಕ್ಷಣೆಯಲ್ಲಿಯೇ ಇದ್ದ ಪತಿಗೆ ಭಯದಿಂದ ನಮಸ್ಕರಿಸಿ ವರ್ತಮಾನವನ್ನು ನಿವೇದಿಸಿದಳು. ಮೊದಲೇ ಉಗ್ರಕೋಪದವನಾದ ಜಮದಗ್ನಿಯು ಪತ್ನಿಯಿಂದ ಪರಪುರುಷನ ರೂಪವರ್ಣನ ಮಾಡಲ್ಪಟ್ಟಿತೆಂದು ಅತ್ಯುಗ್ರನಾದನು. ತನ್ನ ಪುತ್ರರನ್ನು ಕರೆದನು. ಭಾರ್ಗವನು ಮತ್ತೆಲ್ಲಿಗೋ ಹೋಗಿದ್ದುದರಿಂದ, ಉಳಿದ ಪುತ್ರರು ಬಂದು, ತಂದೆಯನ್ನು ಕುರಿತು ಏನೆಂದು ವಿಚಾರ ಮಾಡಿದರು. ಜಮದಗ್ನಿಯು "ನಿಮ್ಮ ತಾಯಿಯ ಶಿರಚ್ಛೇದನಮಾಡಿರಿ" ಎಂದು ಕಟ್ಟುಮಾಡಿದುದಕ್ಕೆ ಅವರಲ್ಲಿ ಯಾರೂ ಸಮ್ಮತಿಸದೆ ಹೊರಟುಹೋದರು. ಭಾರ್ಗವರಾಮನು ಬಂದನು. ತಂದೆಯ ಅಪ್ಪಣೆಯಾಯಿತು. ತಾಯಿಯ ತಲೆಯನ್ನು ಕಡಿಯಬೇಕಾಯಿತು. ಮಾಡದಿದ್ದರೆ ತಂದೆಯ ಆಗ್ರಹಕ್ಕೆ ಪಾತ್ರನಾಗಬೇಕು. ಕೃತಘ್ನನಾಗಿ ಪುಣ್ಯಹೀನನಾಗಬೇಕು. ತಂದೆಯ ಮಾತಿನಂತೆ ನಡೆಯಬೇಕಾದರೆ ಹೊತ್ತು ಹೆತ್ತು ಸಾಕಿದ ತಾಯಿಯನ್ನು ಕೊಲ್ಲಬೇಕಾಗುವುದು. ಏನುಮಾಡಬೇಕು? ಯಾವುದು ಮುಖ್ಯವೆಂದು ಯೋಚಿಸಿದನು. ಕಡೆಗೆ ಪಿತೃವಾಕ್ಯವೇ ಉತ್ತಮವೆಂದು ತಿಳಿದುಬಂದುದರಿಂದ ತನ್ನ ಕೊಡಲಿಯನ್ನು ತೆಗೆದುಕೊಂಡುಬಂದು ತಾಯಿಯನ್ನು ಮನಸ್ಸಿನಲ್ಲಿಯೇ ವಂದಿಸಿದನು. ಧರ್ಮದೇವತೆಯನ್ನು ಧ್ಯಾನಿಸಿ, ತಂದೆಯಮಾತನ್ನು ಗೌರವಿಸಿ, ತಾಯಿಯ ಶಿರವನ್ನು ಕಡಿದು ತಂದೆಯ ಪಾದಕ್ಕೊಪ್ಪಿಸಿ, ನಮಸ್ಕರಿಸಿ, ಕೈಕಟ್ಟಿ ನಿಂತನು.

ಜಮದಗ್ನಿಯ ಕೋಪವು ಆಗ ಶಾಂತವಾಯಿತು, ಪುತ್ರನನ್ನು ನೋಡಿ—"ಎಲೈ ರಾಮನೆ! ನಿನ್ನ ಪಿತೃಭಕ್ತಿಗೆ ಸಂತುಷ್ಟನಾದೆ, ನೀನೇ ನನಗೆ ನಿಜವಾದ ಪುತ್ರನು. ಸುಪ್ರೀತನಾದ ನಾನು ನಿನಗೆ ಯಾವ

ವರವನ್ನು ಕೊಡಲಿ, ಅಪೇಕ್ಷಿಸು." ಎಂದು ಹೇಳಿದನು. ಭಾರ್ಗವನು ಕೈಜೋಡಿಸಿ ಕಂಬನಿದುಂಬಿ, ಗದ್ಗದಸ್ವರದಿಂದ—"ಎಲೈ, ಮಹಾನು ಭಾವನಾದ ತಂದೆಯೆ! ನಿನ್ನ ಅನುಗ್ರಹವು ನನ್ನಲ್ಲಿ ಸ್ಥಿರವಾಗಿರಬೇಕು. ದಯಾಮಯನಾದ ಪಿತನೆ! ಹೆತ್ತ ತಾಯಿಗೂ ಹೆಚ್ಚಾದ – ಪ್ರಿಯವಾದ – ವಸ್ತುವು ಮತ್ತೊಂದಿರಲಾರದಲ್ಲವೆ? ಯಾವ ತಾಯಿಯ ಋಣವನ್ನು ಹೇಗೂ ತೀರಿಸಲಾರೆವೋ, ಅಂತಹ ಮಹೋಪಕಾರಿಣಿಯಾದ ಮಾತೆ ಯನ್ನು ನಾನು ಘಾತಿಸಿರುವೆನು. ಮಾತೃಘಾತಕನಾದ ನನ್ನನ್ನು ಜಗತ್ತೇ ದೂಷಿಸಬಹುದು. ದಯಾಮಯಿಯಾದ ಆ ಮಾತೆಯ ವಿಯೋ ಗಜನ್ಯ ಸಂತಾಪವು ನನಗೆ ಅತ್ಯಧಿಕವಾಗಿರುವುದರಿಂದ, ನೀನು ನನ್ನಲ್ಲಿ ಅನುಗ್ರಹ ಬುದ್ಧಿಯುಳ್ಳವನಾದರೆ, ಮಾತೃಹತ್ಯಾದೋಷವು ನನ್ನನ್ನು ಹೊಂದಂತೆಯೂ, ನನ್ನ ಮಾತೆಯು ಪುನರುಜ್ಜೀವಿಸಿ, ನಿನ್ನ ದಯೆ ಯಿಂದ ಪರಮ ಪಾವನೆಯೆನಿಸುವಂತೆಯೂ ವರವನ್ನು ದಯೆಪಾಲಿಸು. ಇದಕ್ಕೂ ಹೆಚ್ಚಾದ ವರವಿನ್ನಾವುದು?" ಎಂದು ಪ್ರಾರ್ಥಿಸಿದನು. ಜಮದಗ್ನಿಯು ಪುತ್ರನ ಮಾತೃಪ್ರೇಮ ಪಿತೃಭಕ್ತಿ ಗೌರವಗಳಿಗೆ ಪರ ಮಸಂತುಷ್ಟನಾಗಿ, "ಎಲೈ, ಸುಕುಮಾರನೆ! ನಿನ್ನಿಷ್ಟದಂತೆಯೇ ಆಗಲಿ. ನಿನ್ನ ತಾಯಿ, ನಿರ್ದೋಷಿಯಾದರೂ ಇವಳ ಮನಸ್ಸು ಅನ್ಯಪು ರುಷನ ಸೌಂದರ್ಯಕ್ಕೆ ಆಶ್ಚರ್ಯಗೊಂಡುದರಿಂದ ಮಲಿನವಾಗಿದ್ದಿತು. ಈಗ ಪಾವನೆಯೆನಿಸಿದಳು. ನೀನಿನ್ನು ದುಗುಡವನ್ನುಳಿ." ಎಂದು ಆಶೀರ್ವದಿಸಿ, ಪತ್ನಿಯನ್ನು ಬದುಕಿಸಿದನು. ಪರಶುರಾಮನು ತಂದೆಯ ಮಾತಿನಂತೆಯೂ ನಡೆದನು, ತಾಯಿಯನ್ನೂ ಬದುಕಿಸಿಕೊಂಡನು. ಅತ್ತ, ತಂದೆ ಸುಪ್ರೀತನಾದನು, ಇತ್ತ ತಾಯಿ ಪುನೀತೆಯಾದಳು. ಉಳಿದ ಪುತ್ರರಿದ್ದರೂ ಯಾರೂ ಹೀಗೆ ಮಾಡಲಾರದೆ ಹೋದರು. ಆದರೆ, ಈಗ ನಮ್ಮ ನೆರೆಹೊರೆಯಲ್ಲಿ, ಹೆತ್ತ ತಾಯಿಯರನ್ನು, ಮನೆ ಯಿಂದ ಹೊಡೆದೋಡಿಸುವುದು, ಅವರನ್ನು ಯಾರೂ ಬಳಿಗೆ ಸೇರಗೊಡಿ ಸದಂತೆ ಅವರಲ್ಲಿ ಇಲ್ಲದ ಸಲ್ಲದ ಅಪವಾದಗಳನ್ನು ಹೊರಿಸುವುದು, ಪತ್ನಿಯ ಮುಂದೆ ಮಾತೆಯನ್ನು ವಾಚಾಮ ಗೋಚರವಾಗಿ ಬಯ್ದು, ಮೋರೆಗೆ ಹೊಡೆದು ಗಾಸಿಪಡಿಸುವುದು, – ಇಂತಹ ಪರಾಕ್ರಮಸಂಪ

ನ್ನರೂ, ತಂದೆಯರನ್ನು, ಅಡಿಗೆ, ಪರಿಚಾರಕರಂತೆ ನೋಡುವುದು, ತಮ್ಮ ಊಳಿಗದಲ್ಲಿ ಎಚ್ಚರಿಕೆಯಿಂದಿರಲು ಕಟ್ಟುಮಾಡುವುದು, ಸ್ವಲ್ಪ ಮರೆತರೂ ನಾನಾವೂವಳಿಗಳನ್ನೊಪ್ಪಿಸುವುದು, ಪಾಲುಗಳಿಗಾಗಿ, ಹೆತ್ತ ತಂದೆಯಮೇಲೆ ಕೈಮಾಡಿ ಕಾಲು ಕೆದರಿ ಜಗಳವಾಡಿ ನ್ಯಾಯಾಸ್ಥಾನಗಳಿಗೆ ಎಳೆದಾಡಿಸಿ ನರಳಿಸುವುದು,—ಹೀಗೆ ಶೌರ್ಯಸಾಹಸಗಳುಳ್ಳವರು ಎಷ್ಟೋ ಮಂದಿ ಇರುವರು. ಅಂತಹವರನ್ನು ಏನೆಂದು ಕರೆಯು ಬೇಕೋ ಹೇಳುವಿರೇನು ? ಅಂಥವರ ಸ್ಮರಣವೂ ಕೂಡದೆಂದರೆ ಅವರನ್ನು ನೋಡುವುದು, ನುಡಿಸುವುದು, ಮೊಲಾದುವುಗಳಲ್ಲಿ ಹೇಳಬೇಕೆ ? ಎಂದರೆ ಎಲ್ಲರೂ ಅಂತಹರೆ ಆಗಿರುವರೆಂದು ಅಭಿಪ್ರಾಯವಲ್ಲ. ತಮ್ಮ ನೂರೆಂಟು ಕೆಲಸಗಳನ್ನೂ ಮಾಡಿಬಂದ ಆಯಾಸದಲ್ಲಿ ಕೂಡ, ತಾಯಿ, ತಂದೆಯರನ್ನು ಉಪಚರಿಸಿ, ಅವರ ಮನಸ್ಸನ್ನೂ ಆಪ್ಯಾಯನಗೊಳಿಸುವ ಮಹಾತ್ಮರು ಎಷ್ಟೋ ಮಂದಿ ಇರುವರು. ಭಾರ್ಗವರಾಮನ ತಪೋಬಲವೂ, ಭಕ್ತಿವಿಶೇಷವೂ ಹಾಗಿದ್ದುದರಿಂದ ಅವನು ಎರಡು ಕಾರ್ಯ (ನಿಗ್ರಹಾನುಗ್ರಹ) ಗಳನ್ನೂ ನಡೆಯಿಸಲು ಸಮರ್ಥನಾದನು. ಈಗಿನವರು ಬೇಕೆಂದರೆ ಕೊಲ್ಲಬಲ್ಲರೇ ಹೊರತು, ಕಾಯಬಲ್ಲರೇನು ? ಅವರು, ಹಿರಿಯರ ಮಾತನ್ನೇ ನ್ಯಾಯವೂ, ಹಿತವೂ, ಆದ- ಮಾತನ್ನೇ ಪಾಲಿಸಲಾರದವರು ಇನ್ನಾವಕಾರ್ಯಗಳನ್ನು ಮಾಡಬಲ್ಲರು ? ಹಾಗಾದರೆ ನಿಮಗೆ ಮಾರ್ಗದರ್ಶಕರು ಯಾರು ? ನೀವೇ ಹೇಳಿರಿ ?

(ದ್ವಿತೀಯಲಹರಿ)

ದೇವವ್ರತನಾದ ಭೀಷ್ಮ.

ಪ್ರಿಯಬಾಲಕರೇ !

ಪಿತೃವಾಕ್ಯಕ್ಕಾಗಿ ಕ್ಲೇಶಪಟ್ಟವರಲ್ಲಿ ರಾಮ, ಭಾರ್ಗವರಾಮರ ವಿಷಯಗಳನ್ನು ಸಂಕ್ಷೇಪವಾಗಿ ಹೇಳಿದೆವಷ್ಟೆ? ಇನ್ನು ಪಿತನ ವಾಕ್ಯಕ್ಕಾಗಿ, ಕೇವಲ ಪಿತನ ಮನಸ್ಸಂತೋಷಕ್ಕಾಗಿ, ತನ್ನ ಸುಖಾಭಿಲಾಷೆಯನ್ನೇ ತೊರೆದು, ಅಸಾಧಾರಣವಾದ ವ್ರತನಿಷ್ಠೆಯಿಂದ ಸಕಲರಿಂದಲೂ "ದೇವವ್ರತ" ನೆನ್ನಿಸಿದ ಮಹಾನುಭಾವನಾದ ಭೀಷ್ಮನ ವೃತ್ತಾಂತವನ್ನು ಸ್ವಲ್ಪ ಕೇಳುವಿರೇನು ? ಇಷ್ಟವಿದ್ದರೆ ಕೇಳಿರಿ.

ಚಂದ್ರಕುಲದ ಅರಸರಲ್ಲಿ ಒಳ್ಳೆ ಹೆಸರುವಾಸಿಯನ್ನು ಪಡೆದಿದ್ದ ಶಂತನುರಾಯನೆಂಬ ದೊರೆಯು, ಈಶ್ವರ ಶಾಪದಿಂದ ಮಾನವಸ್ತ್ರೀರೂಪವನ್ನು ತಳೆದಿದ್ದ ಗಂಗೆಯನ್ನು ಪತ್ನಿಯಾಗಿ ಪರಿಗ್ರಹಿಸಿ ಅವಳಿಂದ ಲೋಕೋತ್ತರಗುಣಸಂಪನ್ನನಾದ ಭೀಷ್ಮನೆಂಬ ಕುಮಾರನನ್ನು ಪಡೆದನು. ಭೀಷ್ಮನು ಜನ್ಮಿಸಿದ ಬಳಿಕ ಗಂಗಾದೇವಿಯು ಸ್ವೇಚ್ಛೆಯಾಗಿ ಹೊರಟು ಹೋದಳು. ಭೀಷ್ಮನು, ತನ್ನ ಜ್ಞಾನ, ಬುದ್ಧಿ, ಶಕ್ತಿ, ಪರಾಕ್ರಮ, ಸಾಹಸ, ಔದಾರ್ಯ, ಕ್ಷಮಾ, ಶಾಂತಿ, ದಯಾ, ವಿನಯಾದಿ, ಅನೇಕ ಸದ್ಗುಣ–ಸದಾಚರಣೆಗಳಿಂದ ಸಕಲರ ಪ್ರೀತಿಗೂ ಪಾತ್ರನಾಗಿದ್ದನು. ಪರಶುರಾಮನ ಪಟ್ಟಶಿಷ್ಯನಾಗಿ, ಆತನಿಂದ ಸಕಲ ಧನುರ್ವಿದ್ಯೆಗಳನ್ನೂ ಕಲಿತು, ಅದ್ವಿತೀಯ ಪುರುಷನೆನ್ನಿಸಿದ್ದನು. ಇಂತಹ ಪುತ್ರನನ್ನು ಕಂಡರೆ, ತಂದೆಗೆ ಎಷ್ಟು ಪ್ರೇಮವಿರಬೇಕು ? ಸಾಮಾನ್ಯವಾಗಿ, ತಮ್ಮ ಹುಡುಗರು ಎಷ್ಟೇ ತುಂಟರಾಗಿರಲಿ, ಎಷ್ಟೆಷ್ಟು ಕೆಟ್ಟ ಕೆಲಸಗಳನ್ನು ಮಾಡುತ್ತಲಿರಲಿ,-ಅದೆಲ್ಲವನ್ನೂ ಸಹಿಸಿಕೊಂಡು, ಅವರ ವಿಷಯದಲ್ಲಿ ಕಠಿಸರಾಗದೆ ಎಷ್ಟೋ ಮಮತೆಯುಳ್ಳವರಾಗಿದ್ದು, ತಮ್ಮ ಮಕ್ಕಳ ಕೆಟ್ಟ ನಡೆತೆಯನ್ನು ಮುಚ್ಚಿಟ್ಟು, ಒಳ್ಳೆಯವರೆಂದೇ ಹೇಳಿಕೊಳ್ಳುವ ತಾಯಿತಂದೆಗಳನ್ನು-ಎಷ್ಟೋ ಮಂದಿಯನ್ನು-ನಾವು ನೋಡುತ್ತಿರುವೆವು. ಎಂದರೆ, ಸದಾಚಾರಿಗಳಾಗಿಯೂ, ಸದ್ಗುಣಸಂಪನ್ನರಾಗಿಯೂ ಇರುವ ಮಕ್ಕಳನ್ನು ಕಂಡು, ಅಕ್ಕರೆಗೊಳ್ಳದವರಾರು ? ಲೋಕೋ

ತ್ರರಗುಣಸಂಪನ್ನನಾದ ಭೀಷ್ಮನಲ್ಲಿ ಆತನ ಪಿತನಾದ ಶಂತನುರಾಯುನಿಗೆ ಅತ್ಯಂತ ಪ್ರೇಮವಿದ್ದಿತೆಂದು ಬೇರೆಯಾಗಿ ಹೇಳಬೇಕೇ ? ಪಿತನ ಅಕ್ಕರೆಗೆ ತಕ್ಕಂತೆ, ಮಗನು ಕೂಡ, ತಂದೆಯನ್ನು ಸಾಕ್ಷಾತ್ ದೈವ ಸ್ವರೂಪವೆಂದೂ, ಆತನ ಸೇವೆಯೇ ನಿತ್ಯಕೈಂಕರ್ಯವೆಂದೂ, ಆತನ ಅನುಗ್ರಹವೇ ಪರಮ ಪುರುಷಾರ್ಥವೆಂದೂ, ಆ ತನ್ನ ಪಿತನ ಸುಖ-ಸಂತೋಷಗಳೇ ತನ್ನ ಜನ್ಮಧಾರಣೆಯ ಉದ್ದೇಶಸಾಫಲ್ಯವೆಂದೂ ನಂಬಿದ್ದನು.

ಶಂತನುರಾಯನು ಒಂದು ದಿನ, ನಾವಿಕನ ಮಗಳಾದ ಸುಗಂಧಿನಿಯಾದ ಸತ್ಯವತೀದೇವಿಯನ್ನು ನೋಡಿ ಮೋಹಿತನಾಗಿ ಅವಳನ್ನು ತನಗೆ ಸತಿಯನ್ನಾಗಿ ಮಾಡಿಕೊಡಲು ಹೇಳಿದನು. ಸತ್ಯವತಿಯು, ಒಪ್ಪಲಿಲ್ಲ. ರಾಜನಿಗೆ ಬಯಕೆ ಹೆಚ್ಚಾಯಿತು. ಸತ್ಯವತಿ ತನ್ನನ್ನು ಪಟ್ಟಮಹಿಷಿಯಾಗಿ ವರಿಸಿದರೆ ಮಾತ್ರ, ಒಪ್ಪುವೆನೆಂದು ಪಟ್ಟುಹಿಡಿದಳು. ಮೋಹಿತನಾದ ಅರಸನು ಆಗಲೆಂದನು. ಆದರೆ, ಸತ್ಯವತಿಯು, ಆತನ ಮಾತನ್ನು ನಂಬದೆ, ಪುತ್ರನಾದ ಭೀಷ್ಮನಿಂದ ವಚನವನ್ನು ಪಡೆಯಲು ಅಪೇಕ್ಷಿಸಿದಳು. ಶಂತನುರಾಯನು ಪುತ್ರನಿಗೆ ತನ್ನ ಅಭಿಮತವನ್ನೂ, ಸತ್ಯವತಿಯ ಹಟವನ್ನೂ ತಿಳಿಸಿದನು. ದೇವವ್ರತನಾದ ಭೀಷ್ಮನು ಇನ್ನೂ ಬ್ರಹ್ಮಚಾರಿಯೇ ಆಗಿದ್ದನು. ಪಿತನ ವಾಕ್ಯವನ್ನು ಕೇಳಿ ಮನಸ್ಸಿನಲ್ಲಿ ಸ್ವಲ್ಪವಾದರೂ ಅಸಮಾಧಾನಗೊಳ್ಳಲಿಲ್ಲ. ಈಗಿನವರಾಗಿದ್ದರೆ, ಪಿತನನ್ನು ಹೀಯಾಳಿಸಿ, ಪಿತನ ಆಶೆಯನ್ನು ಖಂಡಿಸಿ, ತಾವು ಅವರ ಸ್ಥಾನದಲ್ಲಿ ನಿಲ್ಲುತ್ತಿದ್ದರು. ಭೀಷ್ಮನು ಅಂತಹ ಘಾತಕತನವನ್ನು ಮನಸ್ಸಿನಲ್ಲಿಯೂ ಚಿಂತಿಸಲಿಲ್ಲ. ಪಿತನ ಅಭಿಮತವನ್ನು ಸಫಲಗೊಳಿಸುವುದೇ ತನ್ನ ಪ್ರಧಾನಕರ್ತವ್ಯವೆಂದು ತಿಳಿದು ಸತ್ಯವತಿಯ ಬಳಿಗೆ ಬಂದು, ತನ್ನ ಪಿತನಿಗೆ ಪಟ್ಟಮಹಿಷಿಯಾಗಿಮಾಡಿಕೊಳ್ಳಲು ತಾನು ಸಮ್ಮತಿಪಟ್ಟಂತೆಯೂ, ಸತ್ಯವತಿಯಲ್ಲಿ ಹುಟ್ಟುವ ಪುತ್ರನಿಗೇ ರಾಜ್ಯವನ್ನು ಕೊಡುವುದು ತನಗೆ ಸಮ್ಮತವೆಂದೂ ತಿಳಿಸಿ, ಸತ್ಯವತಿಯನ್ನು ತನ್ನ ತಂದೆಯ ಇಷ್ಟವನ್ನು ನಡೆಯಿಸಿಕೊಡಬೇಕೆಂದು ಪ್ರಾರ್ಥಿಸಿದನು. ಸತ್ಯವತಿಯು ಆಗಲೂ ಒಪ್ಪದೆ, "ನೀನು ಈಗ ಬಾಯಿಮಾತಿನಿಂದ ಹೇಳಿದರೇನಾದೀತು ? ನೀನು ಒಂದುವೇಳೆ, ಪಿತೃವಾಕ್ಯಕ್ಕೆ ಕಟ್ಟುಬಿದ್ದು

ಸುಮ್ಮನಿದ್ದರೂ ನಿನ್ನ ಪತ್ನೀಪುತ್ರರು ಸುಮ್ಮನಿರುವರೇ? ಆಗದ ಹೋಗದ ಕೆಲಸದಲ್ಲಿ ಆಯಾಸಪಡುವುದೇಕೆ," ಎಂದು ಹೇಳಿಬಿಟ್ಟಳು. ಭಿಷ್ಮನು, ಆಗಲೂ ಯಾವಬಗೆಯ ವಿಕಾರಕ್ಕೂ ಒಳಗಾಗದೆ, ಧೈರ್ಯ ದಿಂದಲೂ, ಸ್ಥಿರಸಂಕಲ್ಪದಿಂದಲೂ, ಪೂರ್ಣಸಮಾಧಾನದಿಂದಲೂ, ನಮ್ರ ನಾಗಿ ದೇವರನ್ನು ಸಾಕ್ಷಿಯಾಗಿ ಮಾಡಿಕೊಂಡು ಸತ್ಯವತಿಯನ್ನು ಕುರಿತು, "ತಾಯೆ! ನೀನು ಯಾವ ಬಗೆಯ ಸಂಶಯಗಳಿಗೂ ಎಡೆಗೊಡ ಬೇಡ; ನನ್ನ ಪಿತನಿಗೆ ನೀನೇ ಪಟ್ಟಮಹಿಷಿಯಾಗಿರು! ನಿನ್ನಲ್ಲಿ ಹುಟ್ಟುವ ಪುತ್ರನಿಗೇ ಪಟ್ಟವಾಗುವುದು. ಇದು ಖಂಡಿತವಾದ ಮಾತು. ಆದರೆ, ಇದಕ್ಕೆ ನನ್ನ ಪತ್ನೀಪುತ್ರರು ಆತಂಕಪಡಿಸುವರೆಂಬ ಒಂದು ಆಕ್ಷೇಪವನ್ನು ಸೂಚಿಸಿದೆಯಲ್ಲವೆ? ಇದೋ, ನಿನ್ನ ಮನಸ್ಸಿನ ಶಂಕಾ ಪರಿಹಾರಕ್ಕಾಗಿ ಭಗವಂತನನ್ನೇ ಸಾಕ್ಷಿಯಾಗಿಮಾಡಿಕೊಂಡು ಪ್ರಮಾಣ ಮಾಡುವೆನು! ನಾನು ವಿವಾಹಿತನಾದಮೇಲಲ್ಲವೇ ಪತ್ನೀಪುತ್ರರ ಆತಂಕದ ವಿಚಾರವು ಬರಬೇಕು? ಈಗಳಂತೂ ಬ್ರಹ್ಮಚಾರಿಯಾಗಿಯೇ ಇರುವೆನಷ್ಟೆ? ತಂದೆಯ ಇಷ್ಟಸಿದ್ಧಿಗಾಗಿ, ಮತ್ತು ನಿನ್ನ ಮನಸ್ಸಂ ತೋಷಕ್ಕಾಗಿ ನಾನು, ಇದೇ ಈ ಸುಬ್ರಹ್ಮಚರ್ಯವ್ರತವನ್ನೇ ಹಿಡಿದು, ಯಾವಜ್ಜೀವವೂ ಅವಿವಾಹಿತನಾಗಿಯೇ ಇರುವೆನೆಂದೂ, ಅವಿವಾಹಿತ ನಾದ ನನಗೆ ರಾಜ್ಯ, ಕೋಶ, ಭಂಡಾರಗಳಗೊಡೆವೆಯೇ ಬೇಡವೆಂದೂ ಮನಃಪೂರ್ವಕವಾಗಿ ಪ್ರಮಾಣಮಾಡುವೆನು. ದಾರಾಪರಿಗ್ರಹ ಮಾಡದೆ ಇದ್ದರೆ ಪುತ್ರರ ಚಿಂತೆಹುಟ್ಟುವುದಿಲ್ಲ; ದಾರಾಸುತರಿಲ್ಲದೆ, ಇತರ, ಸುಖ ಭೋಗ ವೈಭವಗಳೂ ಬೇಕಾಗುವುದಿಲ್ಲ. ಆದುದರಿಂದ ನಾನು ಈಗಿ ನಂತೆಯೇ ಬ್ರಹ್ಮಚರ್ಯವ್ರತನಿಷ್ಠನಾಗಿ, ಪಿತನ ಸಿಂಹಾಸನದಲ್ಲಿ ಕೇವಲ ಭಕ್ತಿಗೌರವವನ್ನಿರಿಸಿ, ನಿರಂತರವೂ ಪಿತನ ಮತ್ತು ನಿನ್ನ ಹಿತವನ್ನು ಚಿಂತಿಸುತ್ತಲಿರಲುಳ್ಳವನು! ಇದನ್ನು ಸತ್ಯವಾಗಿ ನಂಬಿ, ನನ್ನ ಪಿತನ ಇಷ್ಟದಂತೆ ನಡೆಯಿಸು." ಎಂದು ಶಪಥಮಾಡಿ ಹೇಳಿದನು.

ಭೀಷ್ಮನು, ಶಪಥಮಾಡಿದಮೇಲೆ ಸತ್ಯವತಿಯು ಶಂತನುರಾಯ ನಿಗೆ ಮಹಿಷಿಯಾಗಲು ಒಪ್ಪಿದಳು. ಶಂತನು ಸತ್ಯವತಿಯನ್ನು ವರಿಸಿ ದನು. ಸತ್ಯವತಿಗೂ ಚಿತ್ರಾಂಗದ ವಿಚಿತ್ರವೀರ್ಯರೆಂಬ ಕುಮಾರರು ಹುಟ್ಟಿದರು. ಚಿತ್ರಾಂಗದನು ಬಾಲ್ಯದಲ್ಲಿಯೇ ಕಾಲಾಧೀನನಾದನು.

ಶಂತನುರಾಯನು ಕಾಲಾಧೀನನಾದಬಳಿಕ, ಸತ್ಯವತಿಗೆ ಕೊಟ್ಟದ್ದಭಾಷೆ ಯಂತೆ ವಿಚಿತ್ರವೀರ್ಯನಿಗೆ ಪಟ್ಟವನ್ನು ಕಟ್ಟಿದನು. ಪರಾಕ್ರಮ ದಿಂದ ಅಂಬೆ, ಅಂಬಿಕೆ, ಅಂಬಾಲಿಕೆ-ಎಂಬ ಮೂವರು ಕಾಶೀರಾಯನ ಕನ್ಯೆಯರನ್ನು ಕರೆತಂದು, ಅವರಲ್ಲಿ, ಮತ್ತೊಬ್ಬನಲ್ಲಿ ಅನುರಕ್ತಳಾಗಿದ್ದ ಅಂಬೆ, ಎಂಬುವಳನ್ನು ಹಿಂದಿರುಗಿ ಕಳುಹಿಸಿ, ಉಳಿದ ಇಬ್ಬರನ್ನೂ ವಿಚಿತ್ರವೀರ್ಯನಿಗೆ ವಿವಾಹಮಾಡಿಕೊಟ್ಟನು. ಅಂಬೆಯು, ತನ್ನ ಮನವೊಲಿದ ಸಾಲ್ವರಾಜನಬಳಿಗೆ ಹೋಗಿ ಪ್ರಾರ್ಥಿಸಲು, "ಭೀಷ್ಮನಿಂದ ಅಪಹೃತಳಾಗಿ ಹೋಗಿದ್ದ ನಿನ್ನನ್ನು ನಾನು ಪರಿಗ್ರಹಿಸಲಾರೆ" ಎಂದು ಹೇಳಲು, ಅಂಬೆಯು ತನ್ನ ಮಾತಾಮಹನಾದ ವೀತಿಹೋತ್ರನೆಂಬ ರಾಜರ್ಷಿಯಲ್ಲಿ ದುಃಖವನ್ನು ಹೇಳಿಕೊಳ್ಳಲು, ಆತನು ಸಮಾಧಾನ ಪಡಿಸಿದಮೇಲೆ, ಆತನ ಮಾತಿನಂತೆ, ಆ ವೀತಿಹೋತ್ರನ ಪ್ರಿಯ ಮಿತ್ರನೂ, ಭೀಷ್ಮನ ಗುರುವೂ ಆದ ಭಾರ್ಗವರಾಮನ ಬಳಿಗೆ ಹೋಗಿ ತನ್ನ ಸಂಕಟವೆಲ್ಲವನ್ನೂ ಹೇಳಿದಳು. ಭಾರ್ಗವನು ಬಂದು ಭೀಷ್ಮ ನಿಗೆ ನಯಭಯಗಳಿಂದ ಎಷ್ಟುಬಾರಿ ಹೇಳಿದರೂ, ಭೀಷ್ಮನು, ವಿನೀತ ನಾಗಿ, ಪಿತೃದ್ರೋಹಿಯಾಗಲಾರೆನೆಂದೂ, ವಚನಭ್ರಷ್ಟತೆಯ ದೋಷಕ್ಕೆ ಗುರಿಯಾಗಲಾರೆನೆಂದೂ ನಿವೇದಿಸಿ, ಅನ್ಯರಲ್ಲಿ ಅನುರಕ್ತಳಾದವಳನ್ನು ತನ್ನ ತಮ್ಮನಿಗೂ ಪರಿಗ್ರಹಿಸಲೊಲ್ಲದೆ ಹೋದನು. ಜಮದಗ್ನಿಪುತ್ರನಾದ ಪರಶುರಾಮನು ಭೀಷ್ಮನು ತನ್ನ ಮಾತನ್ನು ಮೀರಿದನೆಂಬ ಆಗ್ರಹ ದಿಂದ ಅವನನ್ನು ಸೋಲಿಸಿ, ಅದರಿಂದ ತನ್ನ ಆಜ್ಞಾಧೀನನಾಗಿ ಮಾಡಿ ಕೊಂಡು, ಆಬಳಿಕ ಅಂಬೆಯನ್ನು ಪರಿಗ್ರಹಿಸುವಂತೆ ಮಾಡಬೇಕೆಂದು ಸಂಕಲ್ಪಿಸಿ ಯುದ್ಧಕ್ಕೆ ನಿಂತನು. ಅಂಬೆಗೆ ಆತನನ್ನು ನಿಗ್ರಹಿಸುವುದೇ ಇಚ್ಛೆಯಾಗಿದ್ದಿತು. ಭೀಷ್ಮನು ಉಭಯಸಂಕಟದಲ್ಲಿ ಸಿಲುಕಿದನು. ಒಂದುಕಡೆಗೆ, ಪಿತೃಭಕ್ತಿ, ಪ್ರತಿಜ್ಞಾಪರಿಪಾಲನೆ,-ಮತ್ತೊಂದು ಕಡೆಗೆ ಬ್ರಾಹ್ಮಣನೂ, ತೇಜಸ್ವಿಯೂ ಆದ ಗುರು, ಆತನ-ಆಗ್ರಹ, ಹೀಗೆ ಇವೆರಡರ ಮಧ್ಯೆ ನಿಂತು ಭೀಷ್ಮನು ತನಗೆ ಯಾವುದು ಉಪಾದೇಯ ವೆಂದೂ, ಯಾವುದನ್ನು ತಾನು ಅನುಕರಿಸಬೇಕೆಂದೂ ಯೋಚಿಸಿದನು. ಪಿತೃದ್ರೋಹ, ವಚನಭ್ರಷ್ಟತೆಗಳ ಮಹಾ ಪಾತಕಕ್ಕೆ ಗುರಿಯಾಗಬಾರ ದೆಂದೂ, ನೀತಿವಿರುದ್ಧವಾದ ಕೆಲಸವನ್ನು ಮಾಡಬೇಕೆಂದು ಆಗ್ರಹಿಸುವ

ಗುರುವಿಗೆ ಸಮಾಧಾನದಿಂದಲೇ ಉತ್ತರವನ್ನು ಕೊಡಬೇಕೆಂದೂ ನಿಶ್ಚಯಿಸಿದನು. ಕಡೆಗೂ, ಪರಶುರಾಮನು ಶಾಂತನಾಗಲಿಲ್ಲ. ಯುದ್ದಕ್ಕೆ ಪ್ರಾರಂಭಿಸಿಯೇ ಬಿಟ್ಟನು. ಭೀಷ್ಮನು ಮುಂದೆ ಸುಮ್ಮನಿರಲಾಗಲಿಲ್ಲ. ಕ್ಷತ್ರಿಯಧರ್ಮವನ್ನು ಅನುಸರಿಸಲೇಬೇಕು. ತಾನಾಗಿ ಯುದ್ಧಕ್ಕೆನಿಂತು ಕರೆಯುತ್ತಿದ್ದ ಪರಶುರಾಮನನ್ನು ವಂದಿಸಿ ಆತನೊಡನೆ ಯುದ್ಧಕ್ಕೆ ನಿಂತನು. ಇಬ್ಬರೂ ಒಬ್ಬರನ್ನೊಬ್ಬರು ಮೀರಿಸುತ್ತ ಹೋರಾಡುತಲಿದ್ದರು. ಯುದ್ಧವು ಎಷ್ಟೋ ಹಗಲುರಾತ್ರಿ ನಡೆಯಿತು. ಆಗ ಅವರ ಹಿರಿಯರೇ ಬಂದು ಇಬ್ಬರನ್ನೂ ಸಮಾಧಾನ ಪಡಿಸಿದರು. ಅಂಬೆಯು ನಿರಾಶಳಾಗಿ ಭೀಷ್ಮನಿಗ್ರಹಕ್ಕಾಗಿ ತಪವನ್ನಾಚರಿಸಲು ಹೊರಟುಹೋದಳು. ಭೀಷ್ಮನು ಗುರುವಿಗೆ ನಮಸ್ಕರಿಸಿ ಕ್ಷಮೆಯನ್ನು ಪ್ರಾರ್ಥಿಸಿದನು. ಪರಶುರಾಮನೂ ಭೀಷ್ಮನ ಪರಾಕ್ರಮ, ಮನಸ್ಥೈರ್ಯಗಳನ್ನು ಹೊಗಳಿ ಹೊರಟುಹೋದನು. ಭೀಷ್ಮನು ತನ್ನಕೊರಳಿಗೆ ಬಿಗಿದುಕೊಳ್ಳಲು ಬಂದಿದ್ದ ಸರ್ಪಪಾಶವು ಪರಿಹಾರವಾಯಿತೆಂದು ಸಮಾಧಾನಹೊಂದಿ ಮತ್ತೆಬಂದು, ಮಾತೃ, ಭ್ರಾತೃ, ಬಂಧುವರ್ಗವನ್ನು ಸೇರಿ ಸುಖವಾಗಿದ್ದನು.

ಹೀಗಿರಲು ವಿಚಿತ್ರವೀರ್ಯನು ಅತ್ಯಲ್ಪಕಾಲದಲ್ಲಿಯೇ ಪರಲೋಕಕ್ಕೆ ತೆರಳಿದನು. ಪುತ್ರಸಂತಾನವಿಲ್ಲದೆಯೇ, ವಿಚಿತ್ರವೀರ್ಯನು ಗತಿಸಲು, ಸತ್ಯವತಿಯು ದುಃಖಿಸುತ್ತ, ಮುಂದೆ ವಂಶವು ನಷ್ಟವಾಗದಂತೆಯೂ ರಾಜ್ಯವು ಅನಾಯಕವಾಗದಂತೆಯೂ ಇರಲು, ವಿವಾಹಿತನಾಗಿ, ರಾಜ್ಯಭಾರವನ್ನು ಕೈಕೊಳ್ಳಬೇಕೆಂದು ಭೀಷ್ಮನಿಗೆ ಎಷ್ಟೋಬಗೆಯಾಗಿ ಹೇಳಿದಳು. ದೇವವ್ರತನಾದ ಭೀಷ್ಮನು ಅದಾವುದನ್ನೂ ಒಪ್ಪಲೇಇಲ್ಲ. ಪಿತನು ಜೀವಿಸಿದ್ದಕಾಲದಲ್ಲಿ ಆತನ ಸಮ್ಮುಖದಲ್ಲಿ ತಾನು ಆಡಿದ ಮಾತನ್ನು ಹೇಗೂ ತಪ್ಪಲಾರೆನೆಂದೇ ಒಂದೇ ದೃಢಸಂಕಲ್ಪವನ್ನು ಹಿಡಿದನು. ಸತ್ಯವತಿಯು, ಭೀಷ್ಮನ ಮನೋದಾರ್ಢ್ಯಕ್ಕೂ, ಪಿತೃಭಕ್ತಿಗೂ ಅತ್ಯಂತ ಅಶ್ಚರ್ಯಪಟ್ಟರೂ ವಂಶನಷ್ಟವಾಗುವುದೆಂದು ದುಃಖಿತೆಯಾಗಿ, ತಾನು ಆತನ ಸುಖ–ಭೋಗಗಳಿಗೆಲ್ಲಾ ಕುಠಾರಸ್ವರೂಪದಂತಾದೆನೆಂದೂ, ತನ್ನ ದುರಭಿಮಾನ, ದುರಾಶೆಗಳಿಂದಲೇ ಆತನು ಇಂತಹ ಕಠಿನ ವ್ರತವನ್ನು ಹಿಡಿದನೆಂದೂ ಎಷ್ಟೋ ವಿಧದಿಂದ ದುಃಖಿಸಿ

ದಳು. ಕಡೆಗೆ ವ್ಯಾಸಮಹರ್ಷಿಯನ್ನು ಸ್ಮರಿಸಲು, ವ್ಯಾಸಮಹರ್ಷಿಯು ಬಂದು ಸತ್ಯವತಿಗೆ ಸಮಾಧಾನಮಾಡಿ, ವಿಚಿತ್ರವೀರ್ಯನ ಮಹಿಷಿಯರಾದ, ಅಂಬಿಕೆಯಲ್ಲಿ ಧೃತರಾಷ್ಟ್ರನೆಂಬ ಪುತ್ರನೂ, ಅಂಬಾಲಿಕೆಯೂ ಪಾಂಡುರಾಯನೆಂಬ ಪುತ್ರನೂ, ದಾದಿಯಲ್ಲಿ ವಿದುರನೆಂಬ ಪುತ್ರನಲ್ಲಿ ಹುಟ್ಟುವಂತೆ ಅನುಗ್ರಹಿಸಿದನು. ವ್ಯಾಸಮಹರ್ಷಿಯ ಅನುಗ್ರಹದಿಂದಾದ ಪುತ್ರರನ್ನು ನೋಡಿ, ಭೀಷ್ಮನು ಸಂತೋಷಪಟ್ಟನು. ಸಹ ಮಾತೃವಾದ ಸತ್ಯವತಿಯನ್ನು ಸಮ್ಮತಿಪಡಿಸಿದನು.

ಧೃತರಾಷ್ಟ್ರನು ಹುಟ್ಟುಕುರುಡನಾದುದರಿಂದ ಅವನು ಪಟ್ಟಕ್ಕೆ ಅನರ್ಹನಾದನು. ವಿದುರನು ದಾಸೀಪುತ್ರನಾದುದಲ್ಲದೆ, ಕನಿಷ್ಠನೂ ಆಗಿದ್ದುದರಿಂದ ಆತನೂ ಅನರ್ಹನೆನಿಸಿದನು. ಭೀಷ್ಮನು ಪಾಂಡುರಾಯನಿಗೆ ರಾಜ್ಯ ಪಟ್ಟಾಭಿಷೇಕಮಾಡಿ, ಸತ್ಯವತಿಯ ಪ್ರಾರ್ಥನೆಯಂತೆ,ಪುತ್ರರನ್ನು ವಿವೇಕಮಾರ್ಗದಲ್ಲಿ ನಡೆಯುವಂತೆ ಎಚ್ಚರದಿಂದಿದ್ದು, ರಾಜ್ಯಭಾರದಲ್ಲಿ ಸಹಾಯವಾಗಿದ್ದನು. ಅಷ್ಟಾದರೂ ತನ್ನ ಸುಖ–ಭೋಗಗಳಿಗಾಗಿ ಸ್ವಲ್ಪವೂ ಮನಸೋತವನಲ್ಲ. ಮನೋವಿಕಾರವು ಅವನಿಗೆ ಸ್ವಪ್ನದಲ್ಲಿಯೂ ಉಂಟಾಗಲಿಲ್ಲ. ಕಡೆಗೆ ಧೃತರಾಷ್ಟ್ರ–ಪಾಂಡುನಂದನರಾದ ಕೌರವ–ಪಾಂಡವರಿಗೆ ರಾಜ್ಯವಿಭಾಗವಾದ ಕಾಲದಲ್ಲಿಯೂ, ಆತನು ರಾಜ್ಯವು ತನಗೆ ಸೇರಬೇಕಾದುದೆಂಬ ಅಭಿಮಾನವಿಡದೆ, ನಿಸ್ಪೃಹತೆಯಿಂದ, ತಾನು ಕೇವಲ ರಾಜಸಿಂಹಾಸನಕ್ಕೆ ಹಿತಚಿಂತಕನೆಂದಿಷ್ಟು ಮಾತ್ರವೇ ಭಾವಿಸಿ, ಅದರಂತೆ ನಡೆಯಿಸಿದನು. ಕೌರವ, ಪಾಂಡವರಿಗೆ ಯುದ್ಧವಾದ ಕಾಲದಲ್ಲಿ ಕೂಡ, ಧೃತರಾಷ್ಟ್ರನು ಜ್ಯೇಷ್ಠಪುತ್ರನಾಗಿ ರಾಜ್ಯಕ್ಕೆ ಅಧಿಕಾರಿಯಾಗಿದ್ದುದರಿಂದ ಆತನ ಪುತ್ರರಾದ ಕೌರವರು, ನ್ಯಾಯವಾಗಿ ಪಾಂಡವರಿಗೆ ಭಾಗವನ್ನು ಕೊಡಬೇಕಾದುದನ್ನೂ ಕೊಡದೆ ಅವರನ್ನು ವಂಚಿಸಿ, ಅವರೊಡನೆ ಯುದ್ಧಕ್ಕೆ ಅನುವಾದರು. ಆಗಲೂ ಭೀಷ್ಮನು, ಕೌರವನ ಮನೆಯಲ್ಲಿ ಉಪ್ಪುತಿಂದಿರುವೆನೆಂದೂ ಅವರ ಪಕ್ಷವನ್ನು ಬಿಟ್ಟು, ಪಾಂಡವರು ನ್ಯಾಯಮಾರ್ಗದಲ್ಲಿದ್ದರೂ ಕೂಡ, ಅವರ ಪಕ್ಷವನ್ನು ವಹಿಸುವುದು ತನ್ನ ನಿಸ್ಪೃಹತೆಗೆ ಕೊರತೆಯನ್ನುಂಟುಮಾಡುವುದೆಂದೂ ತಿಳಿಸಿ, ಪಾಂಡವರಿಗೆ, "ಧರ್ಮವಿದ್ದಲ್ಲಿ ದೈವಾನುಗ್ರಹವೂ, ದೈವಾನುಗ್ರಹವಿದ್ದಲ್ಲಿ ಜಯವೂ ಸ್ವತಸ್ಸಿದ್ಧವೆಂದು

ತಿಳಿದು, ಶ್ರೀಕೃಷ್ಣಪರಮಾತ್ಮನ ಸಹಾಯವೂ ಪೂರ್ಣಾನುಗ್ರಹವೂ ಇರುವಾಗ ಭಯಪಡಬೇಡಿರೆಂದೂ, ತಾನೂ ಶ್ರೀಕೃಷ್ಣನಿಗೆ ಅಂಕಿತನೆಂದೂ, ಸತ್ಯಕ್ಕೆ ಕಟ್ಟುಬಿದ್ದು ಧೂರ್ತನೂ ಭ್ರಾತೃದ್ರೋಹಿಯೂ ಆದ ದುರ್ಯೋಧನನನ್ನು ಬಿಟ್ಟು ಬರಲಾರದಿರುವೆನೆಂದೂ, ತನ್ನ ಭರವಸೆಯಲ್ಲಿರುವ, ರಾಜನಾದ ಕೌರವನಿಗೆ ನಾನು ಹೇಗೂ ವಂಚನೆಮಾಡದೆ ಪ್ರತಿಪಕ್ಷವನ್ನು ತಡೆದು ಸರ್ವಶಕ್ತಿಯಿಂದಲೂ ಹೋರಾಡುವೆನೆಂದೂ ಸ್ಪಷ್ಟವಾಗಿ ಹೇಳಿ, ಕಡೆಗೂ, ಧರ್ಮ, ಸತ್ಯ, ದಯಾ, ದಾತೃತ್ವಗಳಿರುವೆಡೆಗೇ ಜಯವಾಗುವುದು" ಎಂದು ಭರವಸೆಯಿತ್ತು ಪಾಂಡವರನ್ನು ಆಶೀರ್ವದಿಸಿ ಕಳುಹಿಸಿದನು. ಕಡೆಗೆ ಹತ್ತು ದಿನಗಳ ವರೆಗೆ ಘನಘೋರಯುದ್ಧಮಾಡಿ, ಸಾರಥ್ಯವನ್ನು ಮಾತ್ರಮಾಡುವವನಲ್ಲದೆ ಆಯುಧವನ್ನು ಹಿಡಿಯಲಾರೆನೆಂದು ಹೇಳಿದ್ದ ಕೃಷ್ಣಪರಮಾತ್ಮನು, ತನ್ನಲ್ಲಿ ಆಗ್ರಹಗೊಂಡು ಆಯುಧಪಾಣಿಯಾಗಿ ಬರುವಷ್ಟು ಪ್ರಚಂಡಪರಾಕ್ರಮವನ್ನು ತೋರಿಸಿ, ಜಗತ್ತೇ ತತ್ತರಗೊಳ್ಳುತಿರಲು, ತನ್ನನ್ನು ನಿಗ್ರಹಿಸಬೇಕೆಂದು ರಥದಿಂದ ಹಾರಿಬಂದ ಶ್ರೀಕೃಷ್ಣನನ್ನು ನೋಡಿ, ನಗುತ್ತ "ಸ್ವಾಮಿಯೇ ! ನಿನ್ನೀ ವಿಡಂಬನವು ಸಾಕು ! ನನ್ನಲ್ಲಿ ಅನುಗ್ರಹರೂಪವಾದ ಈ ನಿನ್ನ ಆಗ್ರಹವು ನಿಜವಾದ ಆಗ್ರಹವಲ್ಲ. ನೀನು ಹೇಳಿದ್ದ ಮಾತನ್ನಾದರೂ ಬಿಟ್ಟು, ನಿನ್ನ ಭಕ್ತರ ಮಾತನ್ನು ನಡಿಯಿಸಿಕೊಡುವವನೆಂಬುದು ನಿನ್ನ ಈಗಿನ ನಡತೆಯಿಂದ ಸ್ಪಷ್ಟವಾಯಿತು ! ಇನ್ನು ನನಗೆ ಯುದ್ಧವೂ ಸಾಂಗವೆನ್ನಿಸಿತು, ಜನ್ಮಸಾಫಲ್ಯವೂ ಆಯಿತು." ಎಂದು ನಾನಾಪರಿಪರಿಯಾಗಿ ಸ್ತುತಿಸಿದನು. ಅನಂತರ, ಪೂರ್ವದಲ್ಲಿ ಅಂಬೆಯಾಗಿದ್ದು, ತಪವಾಚರಿಸಿ, ಮಹೇಶನನ್ನು ಮೆಚ್ಚಿಸಿ ಭೀಷ್ಮನಿಗ್ರಹದ ವರವನ್ನು ಪಡೆದು, ದ್ರುಪದನಿಗೆ ಮಗಳಾಗಿ ಹುಟ್ಟಿ, ದೈವಯೋಗದಿಂದ ಪುರುಷನಾದ (ಬಬ್ಬು ಯಕ್ಷನಿಂದ ಪುರುಷತ್ವವನ್ನು ಪಡೆದು) ಶಿಖಂಡಿಯನ್ನು ಮುಂದೆ ನಿಲ್ಲಿಸಲು, ದೇವವ್ರತನು, ಪೂರ್ವಸ್ತ್ರೀಯಾದವರಲ್ಲಿಯೂ, ನಪುಂಸಕರಲ್ಲಿಯೂ, ಯುದ್ಧಮಾಡಲೊಲ್ಲೆನೆಂಬ ತನ್ನ ಸಂಕಲ್ಪದಂತೆ ಯುದ್ಧವನ್ನು ನಿಲ್ಲಿಸಿಬಿಟ್ಟನು. ಪಾಂಡವರು, ಭೀಷ್ಮನ ಇಷ್ಟವನ್ನು ತಿಳಿದು ಶಿಖಂಡಿಯನ್ನು ಮುಂದೆ ಮಾಡಿಕೊಂಡು ದೇವವ್ರತನನ್ನು ಶರಪಂಜರದಲ್ಲಿ ಮುಚ್ಚಿದರು; ಕಡಗೆ, ತನ್ನ ತಪೋಮಹಿಮೆ

ಯಿಂದ ಸ್ವೇಚ್ಛಾ ಮರಣವಾಗುವಂತೆ ವರವನ್ನು ಪಡೆದಿದ್ದ ದೇವವ್ರತನು, ಯುದ್ಧರಂಗದಲ್ಲಿ ಶರಪಂಜರವೇ ತಲ್ಪವಾಗುವಂತೆ ರಚಿಸಿಕೊಂಡು, ಯುದ್ಧವು ಮುಗಿದು, ಯುದ್ಧದಲ್ಲಿ ಮೃತರಾದವರಿಗೆ ಕ್ರಿಯೆಗಳೂ ನಡೆದ ಬಳಿಕ ಉತ್ತರಾಯಣವು ಬಂದಮೇಲೆ, ಧರ್ಮಾತ್ಮರಾದ ಧರ್ಮರಾಯನೇ ಮೊದಲಾಗಿ, ಪಾಂಡವರಿಗೆ ಸಮಸ್ತ ಧರ್ಮರಹಸ್ಯಗಳನ್ನೂ ನಿರೂಪಿಸಿ,ಕೃಷ್ಣನನ್ನು ಸ್ತುತಿಸಿ ಪರಲೋಕವನ್ನೈದಿದನು.

ಪ್ರಿಯಸೋದರರೇ! ದೇವವ್ರತನಾದ ಭೀಷ್ಮನ ಇತಿಹಾಸವನ್ನು ಸಂಗ್ರಹವಾಗಿ ತಿಳಿದಿರಲ್ಲವೆ? ಏನು ಹೇಳುವಿರಿ? ಮಹಾನುಭಾವನಾದ ಆತನು ತನ್ನ ತಂದೆಯಾದ ಶಂತನುರಾಯನ ಮನಸ್ಸಂತೋಷಕ್ಕಾಗಿ ಕೇವಲ ಐಹಿಕಸುಖಾಭಿಲಾಷೆಯನ್ನು ಸಲ್ಲಿಸಲಿಕ್ಕಾಗಿ, ತಾನು ಯಾವಜ್ಜೀವವೂ ತ್ರಿಕರಣಪರಿಶುದ್ಧವಾದ, ಕಠೋರತರ ಬ್ರಹ್ಮಚರ್ಯವ್ರತವನ್ನು ಕೈಕೊಂಡುಬಿಟ್ಟನು. ಮತ್ತೆ ಆ ವ್ರತವನ್ನು ಸಮಾಪ್ತಿಗೊಳಿಸಿ ಗೃಹಸ್ಥಾಶ್ರಮ ಧರ್ಮವನ್ನು ಕೈಗೊಳ್ಳಲು ನಿರ್ಬಂಧಿತನಾದ ವೇಳೆಯಲ್ಲಿ ಕೂಡ ತಂದೆಗೆ ಕೊಟ್ಟಿದ್ದ ವಚನವನ್ನು ಮರಿಯಲಿಲ್ಲ. ವಚನಪರಿಪಾಲನಕ್ಕಾಗಿ ಆತನು ತನ್ನದಾದ ಸರ್ವಸ್ವವನ್ನೂ ತಮ್ಮನಿಗೂ ಅವನ ಮುಂದೆ, ಅವನ ಮಕ್ಕಳಿಗೂ, ಮೊಮ್ಮಕ್ಕಳಿಗೂ ಕೊಟ್ಟುಬಿಟ್ಟು ತಾನು,ಕೇವಲ ಸೇನಾನಾಯಕನಂತೆ ಮಾತ್ರ, ದೇಶದ, ಸಿಂಹಾಸನದ ಭದ್ರತೆಯನ್ನು ಕಾಪಾಡಿಕೊಳ್ಳುತ್ತಿದ್ದು, ಕಡೆಗೂ ಕೇವಲ ಸೇನಾನಾಯಕನಂತೆಯೇ ಯುದ್ಧದಲ್ಲಿ ಮುಂದಾಗಿನಿಂತು ಹೋರಾಡಿದನು. ಆತನ ಪಿತೃಭಕ್ತಿ, ವಚನಪರಿಪಾಲನ, ಸತ್ಯಸಂಕಲ್ಪಗಳಲ್ಲಿ ನೂರರಲ್ಲಿ ಒಂದು ಪಾಲಿನಷ್ಟಾದರೂ ನಿಮ್ಮಲ್ಲಿದ್ದರೆ, ನೋಡಿ ಹೇಳಿರಿ? ತಂದೆಯ ಸುಖಕ್ಕಾಗಿ ಸ್ವಸುಖಾಭಿಲಾಷೆಯನ್ನು ತೊರೆಯುವ ಮಾತು ಹಾಗಿರಲಿ, ತಂದೆತಾಯಿಯರ ಹಿತೋಪದೇಶವನ್ನು ಸಾವಧಾನದಿಂದಲಾದರೂ ಕೇಳುವಷ್ಟು ಸಮಾಧಾನಚಿತ್ತರು ಇರಬಹುದೋ? ಸಂದೇಹವಲ್ಲವೆ! ಬೇಕೆಂದರೆ, ತಂದೆತಾಯಿಯರ ಕಷ್ಟಕೋಟಲೆಗಳೇನು, ತಾವು ಹೇಗೆ ವರ್ತಿಸಬೇಕು ಎಂಬ ವಿಚಾರಕ್ಕೆ ಬದಲಾಗಿ ತಮ್ಮ ಮನಸ್ವೇವರ್ತನಕ್ಕೆ, ಬೇಕಾದಷ್ಟು ತಾವು ಅಪೇಕ್ಷಿಸಿದಷ್ಟು ಅನುಕೂಲವನ್ನು ಕಲ್ಪಿಸಿಕೊಡದೆ ಹೋದರೆಂದು ಅವರನ್ನು ವಾಚಾಮಗೋಚರವಾಗಿ ಹೀಯಾಳಿಸುವುದು, ನೆರೆ

ಹೊರೆಯುವರಲ್ಲಿ ದೂರುವುದು, ಕಡೆಗೆ ತಂದೆಯಮೇಲೆ ವ್ಯಾಜ್ಯವನ್ನು ಹೂಡುವುದು, ತಾಯಿಯನ್ನು ಕುತ್ತಿಗೆ ಹಿಡಿದು ಹೊರಗೆ ದೂಡುವುದು- ಇವೇ ಮೊದಲಾದ ಪೌರುಷಗಳನ್ನು ಪ್ರದರ್ಶಿಸುವ ನರರು (?) ನಿಮ್ಮಲ್ಲಿ ಎಷ್ಟುಮಂದಿ ಇರಬಹುದೆಂಬುದನ್ನು ತಿಳಿದು ಹೇಳುವಿರೇನು? ಬಾಲ ಕರೇ! ಭೀಷ್ಮನಂತಹ ಕಠೋರವ್ರತವನ್ನು ಪಾಲಿಸಲು ನಿಮ್ಮಿಂದ ಸಾಧ್ಯ ವಲ್ಲವಾದರೂ ಅವನ ಪಿತೃಭಕ್ತಿ-ವಿಶ್ವಾಸಗಳ ಸಹಸ್ರಾಂಶದ ಭಾಗ ವನ್ನಾದರೂ ಹೋಲಲು ಪ್ರಯತ್ನಿಸಬಹುದಷ್ಟೆ? ಹಾಗೆ ಮಾಡುವುದಾ ದರೆ, ನೀವು ಮಾಡತಕ್ಕುದೇನಂದರೆ, ಮೇಲೆ ಹೇಳಿದಂತಹ ನಿರ್ಲಜ್ಜ ರಾದ ಮಾನವಾಧಮರ ಸಹವಾಸವನ್ನು ಬಿಟ್ಟು, ಆದರ್ಶಪುರುಷರಾದ ಶ್ರೀರಾಮ, ಭಾರ್ಗವರಾಮ, ಭೀಷ್ಮ ಇತ್ಯಾದಿ ಮಹಾನುಭಾವರನ್ನು ಮಾದರಿಯಾಗಿಟ್ಟುಕೊಂಡು ವರ್ತಿಸಲು ಸಂಕಲ್ಪಿಸಿರಿ; ಅಭ್ಯಾಸಮಾ ಡಿರಿ. ಭೀಷ್ಮನಂತೆಯೇ ಹೆತ್ತವರ ಮನಸ್ತೃಪ್ತಿಗಾಗಿ ರಾಜ್ಯಸುಖ ಭೋಗವೈಭವಗಳ ಆಶೆಯನ್ನು ತೊರೆದ ಮಹಾತ್ಮರು ನಮ್ಮ ರಜಪುತ್ರ ಸ್ಥಾನದಲ್ಲಿ ಭೀಮಸಿಂಗನೇ ಮೊದಲಾದವರೂ ಇರುವರು. ನಿಮಗೆ ಕುತೂಹಲವಾದರೆ, ನೀವು, ಪುರಾಣ, ಇತಿಹಾಸ, ಚರಿತ್ರೆ, ದಂತಕಥೆಗಳು ಇವುಗಳಕಡೆಗೆ ಲಕ್ಷ್ಯವನ್ನು ಕೊಡಿರಿ. ನಿಮ್ಮ ಅವಕಾಶವನ್ನು ನಿಮ್ಮ ವರ ಪೂರ್ವೇತಿಹಾಸವನ್ನು ತಿಳಿದುಕೊಳ್ಳುವ ಉತ್ತಮಕಾರ್ಯಕ್ಕಾಗಿ ವಿನಿಯೋಗಿಸಿ, ನಿಜವಾದ ಪರಿಚಯವನ್ನು ಸಂಪಾದಿಸಿಕೊಂಡು, ನೀವೂ ಸತ್ಪುತ್ರರೆನ್ನಿಸಿಕೊಳ್ಳಿರಿ. ಇನ್ನು ಮುಂದಿನ ಲಹರಿಯಲ್ಲಿ ಸತ್ಪುತ್ರರತ್ನನೆನ್ನಿಸಿದ "**ಪೂರು**" ಮಹಾರಾಜನ ಚರಿತ್ರವನ್ನು ತಿಳಿದು ಕೊಳ್ಳಲು ಅವಕಾಶವನ್ನು ಹೊಂದುವಿರಲ್ಲವೆ? ಆಗಲಿ!

ಪಿತೃವಾಕ್ಯಪರಿಪಾಲನೆ.

ಪೂರು—ಚಿರಕಾರಿ.

ಪ್ರಿಯ ಸೋದರೀ ಸೋದರರೇ!

ಹಿಂದಿನ ಸಂಚಿಕೆಯಲ್ಲಿ ನಿಮಗೆ ದೇವವ್ರತನಾದ ಭೀಷ್ಮನ ವೃತ್ತಾಂತವನ್ನು ಕುರಿತು ವಿಮರ್ಶಾರೂಪವಾಗಿ ಹೇಳಿದೆನಷ್ಟೆ? ಇನ್ನು

ತಂದೆಯ ಮಾತಿಗಾಗಿ-ಕೇವಲ ತಂದೆಯ ವಿಷಯ ಪರಿತೃಪ್ತಿಗಾಗಿ ತನ್ನ ಯೌವನವನ್ನು ತಂದೆಗೊಪ್ಪಿಸಿ, ತಂದೆಯ ಜರಾರೋಗಗಳಿಂದ ಜರ್ಝರಿತವಾದ ವಾರ್ಧಿಕ್ಯವನ್ನು ತಾನು ಪಡೆದಂತಹ ಸತ್ಪುತ್ರನೂ ಚಂದ್ರಕುಲೋತ್ತಂಸನೂ ಆದ ಪೂರು ಚಕ್ರವರ್ತಿಯ ಚರಿತೆಯನ್ನು ಹೇಳುವೆನು ಕೇಳಿರಿ ; ಎಂದರೆ ಪೂರುವಿನ ಚರಿತೆಯನ್ನು ಕೇಳಬೇಕಾದರೆ ಪೂರುವಿಗೆ ತಾಯಿಯಾದ ಶರ್ಮಿಷ್ಠೆಯ ಕಥೆಯನ್ನು ನೀವು ತಿಳಿದಿರಬೇಕಾದುದು ಅಗತ್ಯವು. ಆದರೂ ಪಿತೃಭಕ್ತಿಯುತರಲ್ಲಿ ಶಿರೋಮಣಿಪ್ರಾಯರಾದ ಮಹಿಳೆಯರ ಚರಿತೆಯನ್ನು ಮುಂದಿನ ಭಾಗದಲ್ಲಿ ತಿಳಿಸುವುದರಿಂದ ಸದ್ಯಕ್ಕೆ ಶರ್ಮಿಷ್ಠೆಯ ವೃತ್ತಾಂತವನ್ನು ವಿಸ್ತರಿಸುವುದಿಲ್ಲ.

ಪ್ರತಿಷ್ಠಾನನಗರಿಯಲ್ಲಿ, ಚಂದ್ರಕುಲೋತ್ತಂಸನೂ ಧೀರೋದಾತ್ತನೂ ಔದಾರ್ಯಗುಣಭೂಷಣನೂ ಆದ ಯಯಾತಿಮಹಾರಾಯನು ಆಳುತ್ತಿದ್ದನು. ಯಯಾತಿಯು ನಹುಷಮಹಾರಾಜನ ಮಗನು. ಆತನಿಗೆ ಅಸುರಗುರುವಾದ ಶುಕ್ರಾಚಾರ್ಯನ ಮಗಳಾದ ದೇವಯಾನಿಯು ಮಹಿಷಿಯಾಗಿದ್ದಳು. ಒಂದು ಕಾರಣದಿಂದ ಅಸುರರಾಜನಾದ ವೃಷಪರ್ವಮಹಾರಾಯನ ಮಗಳಾದ ಶರ್ಮಿಷ್ಠೆಯನ್ನು ದೇವಯಾನಿಯು ತನ್ನ ದಾಸಿಯಾಗಿ ಮಾಡಿಕೊಂಡು ತನ್ನ ಜೊತೆಯಲ್ಲಿಯೇ ಕರೆದುಕೊಂಡು ಬಂದಿದ್ದಳು; ಶರ್ಮಿಷ್ಠೆಯು ದೇವಯಾನಿಗೂ ಮಿಗಿಲಾದ ರೂಪಲಾವಣ್ಯ ಸದ್ಗುಣ ಗಾಂಭೀರ್ಯಗಳುಳ್ಳವಳಾಗಿದ್ದುದರಿಂದ ಅವಳನ್ನು ಮಹಾರಾಜನ ದೃಷ್ಟಿಗೆ ಬೀಳದಂತೆ ಪ್ರತ್ಯೇಕಸ್ಥಳದಲ್ಲಿರಿಸಿದ್ದಳು. ಯಯಾತಿಮಹಾರಾಯನು ಒಂದು ದಿನ ಶರ್ಮಿಷ್ಠೆಗೆ ಗೋಚರವಾಗಿ ಪ್ರೇಮ, ದಯೆ, ಆದರಗಳಿಂದ ಅವಳನ್ನು ಪರಿಗ್ರಹಿಸಿದನು. ದೇವಯಾನಿಗೆ ಇಬ್ಬರು ಗಂಡು ಮಕ್ಕಳೂ, ಶರ್ಮಿಷ್ಠೆಗೆ ಮೂವರು ಗಂಡು ಮಕ್ಕಳೂ ಹುಟ್ಟಿದರು.

ಶರ್ಮಿಷ್ಠೆಯನ್ನು ರಾಜನು ಪರಿಗ್ರಹಿಸಿದುದೂ ಶರ್ಮಿಷ್ಠೆಗೆ ಮಕ್ಕಳಾದುದೂ ದೇವಯಾನಿಗೆ ತಿಳಿದಿರಲಿಲ್ಲ. ಹೀಗಿರಲು ಒಂದು ದಿನ ದೇವಯಾನಿಯು ಯಯಾತಿಯೊಡನೆ ತನ್ನ ಪುತ್ರರೀರ್ವರನ್ನೂ ಕರೆದುಕೊಂಡು ವನವಿಹಾರಕ್ಕೆಂದು ಬಂದಾಗ ಅಲ್ಲಿ ಆಡುತ್ತಲಿದ್ದ ಶರ್ಮಿ

ಷ್ಠೆಯ ಮಕ್ಕಳನ್ನು ನೋಡಿ ಶಂಕೆಗೊಂಡು ವಿಚಾರಮಾಡಿ, ಸಮಾಚಾರವೆಲ್ಲವನ್ನೂ ತಿಳಿದು ಪತಿಯ ವಿಷಯವಾಗಿ ದುರಾಗ್ರಹಪಟ್ಟು ತಿರಸ್ಕಾರಮಾಡಿ, ದುಃಖದಿಂದಲೂ ಕೋಪದಿಂದಲೂ ವಿವೇಕವನ್ನು ತೊರೆದು ತನ್ನ ತಂದೆಯಾದ ಶುಕ್ರಾಚಾರ್ಯರ ಬಳಿಗೆ ಹೋಗಿ ತನ್ನ ಗಂಡನ ಮೇಲಿನ ದೂರನ್ನು ಹೇಳಿಕೊಂಡಳು. ಶುಕ್ರಾಚಾರ್ಯನು ಆಗ್ರಹವ್ಯಗ್ರನಾಗಿ, **"ಯಾವ ಯೌವನ ಮದದಿಂದ ನನ್ನ ಭಯವೂ ಇಲ್ಲದೆ ಹೀಗೆ ಮರ್ಯಾದೆ ಮೀರಿ ನಡೆದನೋ ಆ ಯೌವನವನ್ನು ಕಳೆದುಕೊಂಡು ಸಕಲರಿಂದಲೂ ನಿರಾಕರಿಸಲ್ಪಡುವ, ಅನಿಷ್ಟವಾದ ಜರೆಯನ್ನು ಹೊಂದಲಿ."** ಎಂದು ಅಳಿಯನಿಗೆ ಶಾಪವನ್ನಿತ್ತನು. ದೇವಯಾನೆಯು ಮತ್ತೂ ದುಃಖಿತೆಯಾದಳು: ಆದರೆ ಏನನ್ನು ತಾನೆ ಮಾಡಬಹುದು ? ತನ್ನ ಚಾಡಿಯೇ ತನಗೆ ಕೇಡನ್ನುಂಟುಮಾಡಿತೆಂದು ತಿಳಿದು ತನ್ನ ಮನದಳವನ್ನು ತನ್ನಲ್ಲಿಯೇ ಅಡಗಿಸಿಕೊಂಡಳು.

ಮಾವನ ಈ ರೀತಿಯಾದ ಶಾಪವೃತ್ತಾಂತವು ಯಯಾತಿಗೆ ತಿಳಿದು ಬಂದು, ಒಡನೆಯೇ ತಾನು ವಿರೂಪವಾದ ವಾರ್ಧಕಾವಸ್ಥೆಗೆ ಗುರಿಯಾದುದನ್ನು ಕಂಡು, ಕರ್ತವ್ಯತಾಮೂಢನಾಗಿ ಶುಕ್ರಾಚಾರ್ಯನ ಬಳಿಗೆ ಬಂದು ಬಹು ಬಗೆಯಾಗಿ ಬೇಡಿಕೊಂಡನು. ಶುಕ್ರಾಚಾರ್ಯನು "ಕೊಟ್ಟ ಶಾಪವನ್ನು ತಪ್ಪಿಸಲು ತನ್ನಿಂದಾಗದೆಂದೂ ಕೈ ಮೀರಿದುದರಿಂದ ತಾನೂ ವ್ಯಥೆ ಪಡಬೇಕಾಗಿದೆ ಯೆಂದೂ" ಹೇಳಿ "ನಿನ್ನ ಮಕ್ಕಳಲ್ಲಿ ಯಾರಾದರೂ ತಮ್ಮ ಯೌವನವನ್ನು ನಿನಗೊಪ್ಪಿಸಿ ನಿನ್ನ ಮುಪ್ಪನ್ನು ಪಡೆವುದಾದರೆ, ಹಾಗೆ ಮಾಡಿ ಭೋಗವನ್ನು ಅನುಭವಿಸು. ಇಷ್ಟು ಮಾತ್ರ ಮಾಡಲಿಕ್ಕೆ ಅವಕಾಶವುಂಟು." ಎಂದು ನುಡಿಯಲು, ಯಯಾತಿ ಮಹಾರಾಯನು,- "ತನ್ನ ಮಕ್ಕಳಲ್ಲಿ ಯಾವನು ತನಗೆ ಯೌವನವನ್ನು ಕೊಟ್ಟು ಮುಪ್ಪನ್ನು ಪಡೆಯಲೊಪ್ಪುವನೋ ಆತನೇ ತನ್ನ ಮುಂದಿನ ರಾಜ್ಯಾಧಿಕಾರಿಯಾಗಬೇಕು" ಎಂದು ಬಿನ್ನವಿಸಿ, ಆ ನುಡಿಗೆ ಶುಕ್ರಾಚಾರ್ಯರ ಸಮ್ಮತಿಯನ್ನೂ ಪಡೆದು ತನ್ನ ರಾಜಧಾನಿಗೆ ಬಂದನು.

"ಮುಪ್ಪಿಗಿಂತಲೂ ರಿಪುವಿಲ್ಲ" ಎಂಬಂತೆ ಸಕಲ ಚಿಂತಾ, ರೋಗ, ಜಡತೆಗಳಿಗೂ ಆಕರವೆನ್ನಿಸುವ ಈ ಜರೆಯಿಂದ ಯಯಾತಿಯು ಬಹುವಾಗಿ ದುಃಖಪಟ್ಟನು. ಪತ್ನಿಯಾದ ದೇವಯಾನೆಯನ್ನು ಕುರಿತು,-"ನಿನ್ನ

ಮತ್ಸರದ ಪ್ರಭಾವವನ್ನು ನೋಡು ! ನಾರಿಯರ ರೂಪಲಾವಣ್ಯವನ್ನು ಹೆಚ್ಚಿಸುವಂಥ, ಪತಿಪ್ರೇಮ, ಕೋಮಲಭಾವಗಳನ್ನು ತೊರೆದು, ಪತಿಯಲ್ಲಿ ಆಗ್ರಹ ಅಸೂಯೆಗಳುಳ್ಳವಳಾಗಿ ನೀನಾಚರಿಸಿದ ಕೆಲಸದಿಂದ ಎಂತಹ ಅನಿಷ್ಟವೊದಗಿದೆಯೋ ವಿಚಾರ ಮಾಡು ! ನಿನ್ನ ಮತ್ಸರದಿಂದ ಇತರರ ಸುಖಕ್ಕೆ ಹಾನಿಯಾದುದು ಹಾಗಿರಲಿ, ನಿನಗೇ ಅದರಿಂದ ಅತಿಶಯವಾದ ಕ್ಲೇಶವುಂಟಾಯಿತು. ಸಕಲರಿಂದಲೂ ತಿರಸ್ಕೃತವಾಗುವಂತಹ ಈ ಜರಠಾವಸ್ಥೆಯನ್ನು ಹೊಂದಿದ ನಾನು ನಿನ್ನನ್ನು ಯಾವ ರೀತಿಯಿಂದಲೂ ಸಂತೃಪ್ತಿಪಡಿಸದವನಾದೆನು. " ಎಂದು ಹೇಳಿ ಆ ಬಳಿಕ ದೇವಯಾನೆಯ ಮಕ್ಕಳೀರ್ವರನ್ನೂ ಬೇರೆ ಬೇರೆಯಾಗಿ ಬಳಿಗೆ ಕರೆದು,–" ನನ್ನ ಮನಸ್ಸು ಇನ್ನೂ ವಿಷಯ ಲಾಲಸೆಯಲ್ಲಿರುವುದರಿಂದ ಕೆಲವು ದಿನದ ಮಟ್ಟಿಗಾದರೂ ನಿನ್ನ ಯೌವನವನ್ನು ನನಗಿತ್ತು ನನ್ನ ವಾರ್ಧಿಕ್ಯವನ್ನು ನೀನು ತೆಗೆದುಕೊಂಡಿರು " ಎಂದು ಹೇಳಲು, ತಂದೆಯ ಮಾತನ್ನು ಕೇಳಿ ಗರ್ವದಿಂದ ಪರಿಹಾಸ ಮಾಡಿ,– " ಸುಖಕರವಾದ, ಈ ಯೌವನವನ್ನು ಕಳೆದುಕೊಂಡು ಯಾವ ಕೆಲಸಕ್ಕೂ ಬಾರದ ಜರೆಯನ್ನು ಪಡೆಯಲು ಯಾವ ಅವಿವೇಕಿಯೊಪ್ಪುವನು ? ಪ್ರಬುದ್ಧರಾದ ಮಕ್ಕಳನ್ನು ದುಃಖಭೂಯಿಷ್ಠವಾದ ವಾರ್ಧಿಕ್ಯದಲ್ಲಿ ನೂಕಿ ತಾನು ಯೌವನದ ಭೋಗೋಪಭೋಗಗಳಲ್ಲಿ ಮೆರೆಯಬೇಕೆನ್ನುವ ತಂದೆಯಾದವನೂ ಉಂಟೆ ! " ಎಂದು ದೇವಯಾನೆಯ ಇಬ್ಬರು ಮಕ್ಕಳೂ, ಶರ್ಮಿಷ್ಠೆಯ ಹಿರಿಯ ಮಕ್ಕಳೀರ್ವರೂ ತಂದೆಯನ್ನು ಅಲ್ಲಗಳೆದರು. ಯಯಾತಿಯು ಖಿನ್ನನೂ ಅಪಮಾನಿತನೂ ಆಗಿ, ಯದುವೇ ಆದಿಯಾದ ಆ ನಾಲ್ವರನ್ನೂ " ನೀವೂ ನಿಮ್ಮ ವಂಶಜರೂ ರಾಜ್ಯಾಧಿಪತ್ಯಕ್ಕೆ ಅನರ್ಹರಾಗಿರಿ ! " ಎಂದು ಶಪಿಸಿ, ಆ ಬಳಿಕ ತನ್ನ ಕನಿಷ್ಠ ಪುತ್ರನೂ ಪ್ರೀತಿಪಾತ್ರನೂ ಶರ್ಮಿಷ್ಠೆಯ ಆನಂದಕ್ಕೆ ಉಕ್ಕಂದಸ್ವರೂಪನೂ ವಿನಯ ಗುಣ ಸಂಪನ್ನನೂ ಆದ ಪೂರುವನ್ನು ಕರೆದು ಬಳಿಯಲ್ಲಿ ಕುಳ್ಳಿರಿಸಿಕೊಂಡು ಹೀಗೆಂದನು.

" ಸುಕುಮಾರನೇ ! ವಿಷಯಲಾಲಸೆಯು ನನಗೆ ಬಹುವಾಗಿದೆ. ಮನಸ್ತೃಪ್ತಿಯಾಗುವಷ್ಟು ಸುಖೋಪಭೋಗಗಳನ್ನು ಪಡೆಯುವ ಮೊದಲೇ ನನಗೀ ದುಃಖಕರವಾದ ಜರೆಯು ಪ್ರಾಪ್ತವಾಗಿರುವುದು.

ಇನ್ನು ಸ್ವಲ್ಪಕಾಲವಾದರೂ ಇಂದ್ರಿಯಪರಿತೃಪ್ತಿ ಹೊಂದಬೇಕೆಂಬ ಉತ್ಕಂಠೆಯು ನನಗಿರುವುದು ಆದುದರಿಂದ, ಎಲೈ ಕುಮಾರನೇ! ನಿನ್ನ ಯೌವನವನ್ನು ಸ್ವಲ್ಪ ಕಾಲದವರೆಗೆ ನನಗೆ ಕೊಟ್ಟದ್ದು ನನ್ನ ವಾರ್ಧಿಕ್ಯವನ್ನು ನೀನು ತೆಗೆದುಕೊಂಡಿದ್ದರೆ, ವಿಷಯಪರಿತೃಪ್ತಿ ಹೊಂದಿದ ಬಳಿಕ ನಾನು ನಿನ್ನ ಯೌವನವನ್ನು ನಿನಗೇ ಒಪ್ಪಿಸಿ, ನನ್ನ ಜರೆಯನ್ನು ನಾನು ಪಡೆವೆನು. ಇದಕ್ಕೆ ನೀನು ಸಮ್ಮತಿಸುವೆಯೋ–ಅಥವಾ ನಿನ್ನ ಅಣ್ಣಂದಿರಂತೆಯೇ ನನ್ನನ್ನು ಅಲ್ಲಗಳೆವೆಯೋ ?" "**ಪೂರು**" ವು ತಂದೆಯ ಮಾತುಗಳನ್ನು ಕೇಳಿ, ವಿನೀತನಾಗಿ ಕೈ ಜೋಡಿಸಿ, "ಪೂಜ್ಯನಾದ ಜನಕನೇ! ಲೋಕೋತ್ತರಗುಣಸಂಪನ್ನನಾದ ನಿನಗೆ ಇಂತಹ ಸ್ಥಿತಿಯುಂಟಾದುದರಿಂದ ನಾನು ದುಃಖಿತನಾಗಿರುವೆನು. ಯಾಚಕರಿಗೆಲ್ಲಾ ಆಶ್ರಯನಾಗಿರುವ ಮಹಾನುಭಾವನಾದ ನೀನೇ ನಿನ್ನ ಮನಸ್ಸಿನ ಆಶೆಯನ್ನು ಸಲ್ಲಿಸಲಾಗದೆಂದರೆ ದುಃಖಕರವಲ್ಲವೇ ? ಪ್ರಿಯ ತಾತನೇ! ನನಗೆ ಸರ್ವಸ್ವವೂ ನೀನೇ ಆಗಿರುವೆ! ನಿನ್ನ ಸೇವೆಯೇ ನನ್ನ ನಿತ್ಯಕೃತ್ಯ, ನಿನ್ನ ಆಜ್ಞಾಪರಿಪಾಲನವೇ ನನ್ನ ವ್ರತನೇಮ ತಪಸ್ಸುಗಳು, ನಿನ್ನ ಮನಸ್ಸಮಾಧಾನವೇ ನನ್ನ ಕಾರ್ಯಸಿದ್ಧಿ, ನಿನ್ನ ಅನುಗ್ರಹವೇ ನನ್ನ ಜನ್ಮಸಾರ್ಥಕತೆ! ಹಾಗಿಲ್ಲದೆ, ಜನ್ಮದಾತನಾದ ನಿನ್ನನ್ನು ನೋಯಿಸಿ ಹೊಂದಬಹುದಾದ ಇಂದ್ರಪದವಿಯು ಕೂಡ ನನಗೆ ಪ್ರಿಯವಲ್ಲ. ಇದು ಸತ್ಯವೆಂದು ತಿಳಿ! ಜನಕಾ! ಸ್ವಲ್ಪ ಕಾಲವೇಕೆ ? ಚಿರಕಾಲ ನನ್ನೀ ಯೌವನವನ್ನು ನಿನಗೊಪ್ಪಿಸಿ ನಿನ್ನ ವಾರ್ಧಕವನ್ನು ನಾನು ಪಡೆದಿರಲು ಸಂತೋಷದಿಂದ ಸಮ್ಮತಿಸುವೆನು. ನೀನು ಸಂಕೋಚಪಡದೆ ನನ್ನ ಯೌವನವನ್ನು ಸ್ವೀಕರಿಸಬಹುದು" ಎಂದು ಹೇಳಿದನು.

ಯಯಾತಿಯ ಸಂತೋಷಕ್ಕೆ ಪಾರವೇ ಇಲ್ಲವಾಯಿತು. **ಪೂರು**ವಿಗೆ ಜರೆಯನ್ನು ಕೊಟ್ಟು, ಆತನ ಯೌವನವನ್ನು ತಾನು ಪಡೆದು ಸುಖೋಪಭೋಗಗಳಲ್ಲಿ ತತ್ಪರನಾದನು.

ಪೂರುವು ಸದ್ಗತಿಸಾಧನವಾದ ತಪಶ್ಚರ್ಯೆಗೆ ಈ ವಾರ್ಧಿಕ್ಯವೇ ಸರ್ವೋತ್ತಮವೆಂದು ತಿಳಿದು, ಸಂತೋಷದಿಂದ ಭಗವಂತನನ್ನು ಆರಾಧಿ

ಸುತ್ತ, ಅನೇಕ ವಿಧವಾದ ಜಪತಪಯಜ್ಞಗಳನ್ನಾಚರಿಸಿ ಭಗವತ್ಕೃಪೆಗೆ ಪಾತ್ರನೆನ್ನಿಸಿ, ನಿರಾತಂಕವಾದ ಆನಂದವನ್ನು ಅನುಭವಿಸುತ್ತಿದ್ದನು.

ಯಯಾತಿಯು ಪುತ್ರನಿಂದ ಯೌವನವನ್ನು ಪಡೆದ ಬಳಿಕ ಪತ್ನಿಯರೀರ್ವರೊಡನೆ ಬಗೆ ಬಗೆಯಾಗಿ ವಿಹರಿಸುತ್ತ ಬಹುಕಾಲ ವಿಷಯ ಸುಖಲೋಲುಪನಾಗಿದ್ದನು. ಬರುತ ಬರುತ ವಿಷಯಲಾಲಸೆಯು ಹೆಚ್ಚುತ್ತಲೇ ಇರುವುದನ್ನು ತಿಳಿದು ಯಯಾತಿಯು ಜಿಹಾಸೆ ಹೊಂದಿ, ವಿಷಯ ಪರಾಙ್ಮುಖನಾಗಿ, ಮುಂದಿನ ಕಾಲವನ್ನಾದರೂ ಪರಮಾತ್ಮ ಚಿಂತನೆಯಲ್ಲಿ ಕಳೆಯಬೇಕೆಂದು ನಿಶ್ಚಯಿಸಿ, ತನ್ನ ಪ್ರೀತಿಪಾತ್ರ ಪುತ್ರನಾದ ಪೂರುವನ್ನು ಕರೆದು, ಬಳಿಯಲ್ಲಿ ಕುಳ್ಳಿರಿಸಿಕೊಂಡು ಹೀಗೆಂದನು:—

"ಸುಕುಮಾರನೇ! ನಿನ್ನಿಂದ ತೆಗೆದುಕೊಂಡ ಯೌವನದಿಂದ ಅಖಂಡಭೋಗಭಾಗ್ಯವೈಭವಗಳನ್ನು ಅನುಭವಿಸಿದೆನು. ಇಂದ್ರಿಯ ತೃಪ್ತಿಮಾಡುವೆನೆಂಬವನು ಮೂರ್ಖನು. ಇಂದ್ರಿಯಗಳು ಎಂದಿಗೂ ತೃಪ್ತಿಯೊಂದಲಾರವು. ಅವುಗಳಿಗೆ ದಾಹವು ಹೆಚ್ಚುವುದೇ ಹೊರತು ಕುಗ್ಗುವುದಿಲ್ಲವೆಂಬುದನ್ನೂ ಇಂದ್ರಿಯಗಳ ವೇಗಕ್ಕೆ ಪಕ್ಕಾಗಿ ಅದರೊಡನೆ ಹೋರಾಡುವವನ ಜನ್ಮವು ನಿರರ್ಥಕವೆಂದೂ, ಇಂದ್ರಿಯಗಳನ್ನು ವಶದಲ್ಲಿರಿಸಿಕೊಂಡು ಪರಮಾರ್ಥವನ್ನು ಗಳಿಸುವವನೇ ಪುರುಷಶ್ರೇಷ್ಠನೆಂದೂ ಈಗ ತಿಳಿದೆನು. ನಿನ್ನ ಯೌವನವನ್ನು ನೀನು ತೆಗೆದುಕೊಂಡು ನನ್ನ ಜರೆಯನ್ನು ನನಗೆ ಮರಳಿ ಕೊಟ್ಟರೆ ನಾನಿನ್ನು ಆತ್ಮಸ್ವರೂಪಚಿಂತನೆಯಲ್ಲಿ ಕಾಲಕ್ಷೇಪ ಮಾಡುವೆನು."

ಪೂರುವು ತಂದೆಯ ಮಾತಿಗೆ ವಿಧೇಯನಾಗಿ ಕೈಜೋಡಿಸಿ ಹೇಳಿದನು—

"ಜನಕನೇ! ನಿನ್ನ ಆಜ್ಞೆಯೇ ನನಗೆ ವೇದವಾಕ್ಯವು. ಕನಸು ಮನಸ್ಸುಗಳಲ್ಲಿಯೂ ನಾನು ನಿನಗೆ ಅನ್ಯಥಾ ವರ್ತಿಸುವನಲ್ಲ. ನಿನ್ನ ಅಭಿಮತದಂತೆಯೇ ಆಗಲಿ! ಆದರೆ, ಪ್ರಿಯ ಜನಕಾ! ನಿನ್ನಿಂದ ಅನುಗೃಹೀತವಾದೀ ವಾರ್ಧಕಾವಸ್ಥೆಯಿಂದ ನಾನು ಅಪರಿಮಿತವಾದ ಆತ್ಮಾನಂದವನ್ನು ಪಡೆದಿರುವೆನು. ನಿರಾತಂಕವೂ ನಿರ್ಮಲವೂ ಆದ ಸಂತೋಷವನ್ನುಂಟುಮಾಡುತ್ತಿದ್ದ ಈ ವಾರ್ಧಕ್ಯವನ್ನು ನಾನು ಮರಳಿ ಕೊಟ್ಟುಬಿಡಬೇಕೆಂದು ವ್ಯಥೆಯುಳ್ಳವನಾಗಿದ್ದರೂ, ಪೂಜ್ಯನಾದ ನಿನ್ನ

ಆಶೀರ್ವಾದದಿಂದ, ಇದೇ ಮನಶ್ಶುದ್ಧಿಯು ನನಗೆ ಮುಂದೆಯೂ ಇರುವಂತೆಯೂ, ಯೌವನದ ಸಂಬಂಧವಾದ ಮದ-ದುರಭಿಮಾನಗಳು ನನ್ನನ್ನು ಬಂಧಿಸಲು ಸಮರ್ಥವಾಗಲಾರದಂತೆಯೂ ಇರುವುದೆಂದು ನಂಬಿರುವೆನು.''

ಯಯಾತಿಯು ಆನಂದಬಾಷ್ಪವನ್ನು ಸುರಿಸುತ್ತ ಪುತ್ರನನ್ನಾಲಂಗಿಸಿ, ಹೇಳಿದನು. "ಪುತ್ರನೇ! ನೀನೇ ನನ್ನ ಪುತ್ರನು! ಕುಲವರ್ಧನನೂ ಮಾತಾಪಿತೃಚಿತ್ತರಂಜಕನೂ ಆದ ನಿನ್ನಿಂದ ನನ್ನ ಇಷ್ಟಾರ್ಥಗಳೆಲ್ಲವೂ ಸಿದ್ಧಿಹೊಂದಿದವು. ಆದುದರಿಂದ ಈ ನನ್ನ ಸಿಂಹಾಸನಕ್ಕೆ ಇನ್ನು ನೀನೇ ಅಧಿಕಾರಿಯಲ್ಲದೆ ಉಳಿದ ನಿನ್ನ ಅಗ್ರಜರು ಅರ್ಹರಲ್ಲ. ರಾಜ್ಯಭಾರವನ್ನು ವಹಿಸಿ, ನೀನು ನಿನ್ನ ಆಶ್ರಿತಾನಾಥರಿಗೂ, ರಾಜ್ಯದ ಪ್ರಜೆಗಳಿಗೂ ಮಾತಾಪಿತೃಗಳಿಗೂ ಆನಂದದಾಯಕನಾಗಿ **ಚಿರಕಾಲ** ಸುಖದಿಂದಿರುವಂತೆ ಭಗವಂತನು ನಿನ್ನನ್ನು ಅನುಗ್ರಹಿಸಲಿ.''

ಯಯಾತಿಮಹಾರಾಯನು ಮಗನನ್ನು ಆಶೀರ್ವದಿಸಿ, ಯೌವನವನ್ನು ಅವನಿಗೆ ಮರಳಿ ಕೊಟ್ಟು, ತನ್ನ ವಾರ್ಧಕವನ್ನು ತಾನು ತೆಗೆದುಕೊಂಡು, ರಾಜ್ಯವನ್ನವನಿಗೆ ಒಪ್ಪಿಸಿ, ಉಳಿದ ನಾಲ್ವರಿಗೂ ಬೇರೆಬೇರೆ ಸ್ಥಾನಗಳನ್ನು ಕೊಟ್ಟು, ತಾನು ವಿರಕ್ತನಾಗಿ ಯಜ್ಞ, ಯಾಗ, ಜಪ, ತಪಸ್ಸುಗಳನ್ನಾಚರಿಸುವವನಾದನು. ಪೂರುವು ತಂದೆಯಿಂದ ಅನುಗ್ರಹಪೂರ್ವಕವಾಗಿ ಪಡೆದ ರಾಜ್ಯವನ್ನು ವಿವೇಕದಿಂದಲೂ ಧರ್ಮದಿಂದಲೂ ಅಪ್ರಮತ್ತತೆಯಿಂದಲೂ ಆಳುತ್ತ, ಯೌವನದಲ್ಲಿ ಉಂಟಾಗುವ ಮನೋವಿಕಾರಗಳಿಗೆ ಅವಕಾಶಕೊಡದೆ ಜಿತಚಿತ್ತನಾಗಿ ಅಪ್ರತಿಮಪುರುಷನೆನ್ನಿಸಿ ಚಂದ್ರವಂಶಕ್ಕೆ ಲಲಾಮನೆಂಬ ಖ್ಯಾತಿಯನ್ನು ಪಡೆದನು.

ಬಾಲಕರೇ!

ಕೇಳಿದಿರೋ, ತಂದೆಯ ವಿಷಯಪರಿತೃಪ್ತಿಗಾಗಿ ದೇವವ್ರತನಾದ ಭೀಷ್ಮನು ಆಜನ್ಮಬ್ರಹ್ಮಚರ್ಯವ್ರತವನ್ನು ಕೈಕೊಂಡರೆ, ದೇವವ್ರತನಿಗೆ ಮೂಲಪುರುಷನಾದ ಪೂರುವು ತಂದೆಯ ಕಾಮವಾಸನಾಪರಿಪೂರ್ಣತೆಗಾಗಿ ತನ್ನ ಸಾರತಮವಾದ ಯೌವನವನ್ನೇ ಕೊಟ್ಟು, ರೋಗ, ಕ್ಷೀಣತೆ, ಅಂಗವಿಕಲತೆಗಳಿಂದ ಅಸಹ್ಯವೂ ಕ್ಲೇಶಪ್ರದವೂ ಆಗಿರುವ ಜರಾವಸ್ಥೆಯನ್ನು ತಾನು ತೆಗೆದುಕೊಂಡನು. ತನ್ನ ಹಿರಿಯರಂತೆಯೇ ತಾನೂ ತಂದೆಯನ್ನು ಜರಿದಿದ್ದರೆ ಯಯಾತಿಯ ಮನಃಕಾಮನೆಯೂ

ಉಳಿದುಹೋಗುತ್ತಿದ್ದಿತು. ಪೂರುವೂ ಪ್ರಸಿದ್ಧಿಗೆ ಬರುತ್ತಿರಲಿಲ್ಲ. ಪೂರುವಿನ ಮನೋದಾರ್ಢ್ಯವೂ ಪಿತೃಭಕ್ತಿಯೂ ಬಲವತ್ತರವಾದುದರಿಂದ ತಂದೆಯ ಇಷ್ಟವನ್ನು ನಡೆಯಿಸಲು ಲೇಶವೂ ಹಿಂದೆಗೆಯಲಿಲ್ಲ. ಈಗಲಾದರೋ ನೀವೇನು ಮಾಡಬಲ್ಲಿರಿ, ಹೇಳಬಹುದೋ ? ನಿಮ್ಮ ತಾಯಿತಂದೆಯರು ಎಷ್ಟೇ ಕಷ್ಟಪಡುತ್ತಿದ್ದರೂ ಮರುಕಗೊಳ್ಳಲಾರಿರಿ ! ಕಾಲಕ್ಕೆ ಸರಿಯಾಗಿ ಬಂದು ನಿಮ್ಮ ಸ್ನಾನ, ಊಟ, ನಿದ್ದೆಗಳನ್ನಾದರೂ ನೀವು ನಡಸಿಕೊಂಡರೆ ಅವರಿಗೆ ನೀವು ಎಷ್ಟೋ ಉಪಕಾರಮಾಡಿದುದಕ್ಕೂ ಹೆಚ್ಚು. ಆದರೆ, ಅದನ್ನು ಕೂಡ, ನೀವು ಮಾಡಲೊಲ್ಲಿರಿ ! ಸುಳ್ಳುಸುಳ್ಳಾದ ಹಲವು ನೆವಗಳನ್ನು ಮುಂದುಮಾಡಿಕೊಂಡು ನೀವು ಹಾದಿ ಬೀದಿಗಳಲ್ಲಿ ಅಲೆದಲೆದು, ಲಲ್ಲೆಚಲ್ಲಾಟಗಳಲ್ಲಿ ಕಾಲ ಕಳೆಯುವದರಲ್ಲಿ ನಿಮಗಿರುವ ತತ್ಪರತೆಯು, ನಿಮ್ಮನ್ನು ಮಮತೆಯಿಂದ ಕಾಪಾಡುವ ತಾಯಿತಂದೆಯರ ಕಷ್ಟ, ಸುಖಗಳ ವಿಚಾರವಾಗಿರುವುದಲ್ಲ, ಅಷ್ಟೇ ಅಲ್ಲ, ಅವರು ಮುಪ್ಪಿನಿಂದ ಗಳಿತರಾಗಿ, ಕಿವಿ ಕೇಳದೆ, ಕಣ್ಣು ಮಂಜು ಹಿಡಿದು ತಡವರಿಸುತ್ತಿರುವುದನ್ನು ಕಂಡರೆ ನಿಮ್ಮಲ್ಲಿ ಎಷ್ಟು ಮಂದಿ ಅಂತಹ ತಾಯಿತಂದೆಯರನ್ನು ಬೈದು, ಅಪಹಾಸಮಾಡಿ, ಹೀನವಾಗಿ ಕಂಡು ಅವರ ಮನಸ್ಸನ್ನು ನೋಯಿಸುತ್ತಿರುವರೆಂಬುದನ್ನು ಸ್ವಲ್ಪ ವಿಚಾರಮಾಡಿರಿ ! ತಾಯಿತಂದೆಗಳಿಗೂ ಮಿಗಿಲಾದ ಹಿತರೂ ಗುರುಗಳೂ ದೇವತೆಗಳೂ ಯಾರಿರುವರು ? ಅಂತಹರನ್ನು ನಿರಾಕರಿಸಿದವನ ಜನ್ಮವೇಕೆ ? ಬಾಲಕರೇ ! ಮಾತಾಪಿತೃಭಕ್ತರಿಗೆ ಸಾಕ್ಷಾತ್ ಪರಮಾತ್ಮನು ಕೂಡ ವಶನಾಗಿರುವನಂತೆ ! ಹಾಗೆಂದೇ ಜನನೀಜನಕಭಕ್ತರಾದ ಹಲವು ಮಂದಿ ಮಹಾತ್ಮರು ನಮ್ಮ ಭಾರತಮಾತೆಯನ್ನು ಪುಣ್ಯಮಯಿಯಾಗಿ ಮಾಡಿರುವರು. (ಅವರ ವೃತ್ತಾಂತವು ನಿಮಗೆ ಮುಂದಿನ ಪ್ರಕರಣದಲ್ಲಿ ಕೊಡಲ್ಪಡುವುದು.) ಈಗ ಪಿತೃವಾಕ್ಯಪರಿಪಾಲನವನ್ನು ಮಾಡಿ, ಪಿತೃಹಿತಕ್ಕಾಗಿ ಸ್ವಸುಖಾಭಿಲಾಷೆಯನ್ನೂ ಕಟ್ಟಿಟ್ಟ ಮಹಾನುಭಾವರಲ್ಲಿ ನಿಮಗೆ ಆದರ್ಶಕ್ಕಾಗಿ ನಾಲ್ವರ ಚರಿತೆಯನ್ನಿಲ್ಲಿ ಹೇಳಿರುವೆನು. ಇನ್ನು ಮುಂದಿನ ಲಹರಿಯಲ್ಲಿ, ಜನನೀಜನಕರ ಹಿತವನ್ನಾಚರಿಸಿದ ಕನ್ಯಾಮಣಿಯರ ವಿಚಾರವನ್ನು ಕುರಿತು ಹೇಳುವೆನು.

ಮಾತಾಪಿತೃ ಭಕ್ತಿ ಪಿತೃವಾಕ್ಯಪರಿಪಾಲನೆ.

ದ್ವಿತೀಯಲಹರಿ.

iii

ಚಿರಕಾರಿ.

ಅಕ್ಕರೆಯುಳ್ಳ ಎಳೆಯರೆ!

ಹಿಂದಿನ ಸಂಚಿಕೆಯಲ್ಲಿ ನಿಮಗೆ ಪೂರು ಮಹಾರಾಯನ ಅಸಾಧಾರಣವಾದ ಪಿತೃಭಕ್ತಿಯನ್ನು ಕುರಿತು ಹೇಳಿದ ಬಳಿಕ, ಕನ್ಯಾಮಣಿಯರ ಚರಿತೆಯನ್ನು ವಿವರಿಸುವುದಾಗಿ ತಿಳಿಸಿದ್ದೆವಷ್ಟೆ? ಆದರೆ, ಇಲ್ಲಿ ಚಿರಕಾರಿಯ ವೃತ್ತಾಂತವನ್ನು ನಿಮಗೆ ತಿಳಿಯಿಸಬೇಕಾದುದು ಸ್ವಲ್ಪ ಉಳಿದಿರುವುದರಿಂದ ಅದನ್ನೂ ಹೇಳಿ, ಮುಂದಿನ ಲಹರಿಯಲ್ಲಿ ಕನ್ಯಾಮಣಿಯರ ಚರಿತವನ್ನು ಹೇಳುವೆನು ಕೇಳಿರಿ!

ಮಹರ್ಷಿಶ್ರೇಷ್ಠನಾದ ಗೌತಮನು ಬ್ರಹ್ಮಮಾನಸ ಪುತ್ರಿಯೂ ಅದ್ವಿತೀಯ ಸೌಂದರ್ಯ ವಿರಾಜಿತೆಯೂ ಆದ ಅಹಲ್ಯಾದೇವಿಯನ್ನು ಪತ್ನಿಯಾಗಿ ಪಡೆದು, ಪತ್ನೀಪುತ್ರ ಶಿಷ್ಯ ಪರಿವಾರದೊಡನೆ ನಿರ್ವಿಕಾರ, ನಿರಾತಂಕ, ನಿಶ್ಚಿಂತ ಹೃದಯದಿಂದ ತಪಶ್ಚರ್ಯೆಯಲ್ಲಿದ್ದನು

ಅಹಲ್ಯಾದೇವಿಯನ್ನು ಬ್ರಹ್ಮದೇವನು ನೆರೆದ ಸಭೆಯಲ್ಲಿ ಇಂದ್ರಾದಿ ದೇವತೆಗಳ ಸಮಕ್ಷಮದಲ್ಲಿಯೇ ಗೌತಮನ ತಪೋಬಲಕ್ಕೂ, ಜ್ಞಾನಾಧಿಕ್ಯತೆಗೂ ಮೆಚ್ಚಿ ಆತನಿಗೆ ಕನ್ಯಾದಾನಮಾಡಿದನು. ಇಂದ್ರನು ಆವೇಳೆಯಲ್ಲಿ ಅಹಲ್ಯಾದೇವಿಯನ್ನು ತಾನೇ ಪಡೆಯಬೇಕೆಂಬ ಆಶೆಯುಳ್ಳವನಾಗಿದ್ದರೂ ತನಗೆ ತಪ್ಪಿ, ಕನ್ಯಾಮಣಿ ಅನ್ಯನ, ಋಷಿಶ್ರೇಷ್ಠನ, ಪಾಣಿಗ್ರಹಣ ಮಾಡುವಂತಾದುದಕ್ಕಾಗಿ ಖತಿಗೊಂಡವನಾದರೂ ಪಿತಾಮಹನ ಮುಂದೆ ಮಾತೆತ್ತಲಾರದೆ ತನ್ನ ಸ್ಥಾನಕ್ಕೆ ತೆರಳಿದನು. ಆದರೇನು! ಆತನ ಮನಸ್ಸಿನಲ್ಲಿ ಒಮ್ಮೆ ಉಂಟಾದ ಪ್ರೇಮವು, ಅವಳ ಮೇಲಿನ ಆಶೆಯು, ಅಡಗದೆ, ಬರುತ ಬರುತ ಹೆಚ್ಚುತಲೇ ಬರುತ್ತಿದ್ದಿತು. ಇಂದ್ರನು ಸ್ತ್ರೀಮೋಹದಿಂದ ಕುಹಕವನ್ನು ಚಿಂತಿಸಿ, ಗೌತಮನು ಇಲ್ಲದಿದ್ದ ಸಮಯವನ್ನು ನಿರೀಕ್ಷಿಸಿ, ತಾನೇ ಗೌತಮ ರೂಪದಿಂದ

ಬಂದು ಅಹಲ್ಯಾದೇವಿಯನ್ನು ಪ್ರೇಮದಿಂದಲೂ ಅಧಿಕಾರದಿಂದಲೂ ವಶಪಡಿಸಿಕೊಂಡು ಸುಖಪಟ್ಟು, ಗೌತಮನ ಆಗಮನಕ್ಕೆ ಮೊದಲೇ ಹೊರಟುಹೋದನು. ಗೌತಮನು ಮನೆಗೆಬಂದು ನೋಡಿದ ವೇಳೆಯಲ್ಲಿ ಇಂದ್ರಸಂಗದಿಂದ ಅಹಲ್ಯೆಯು ಮಲಿನೆಯಾಗಿ ಗೋಚರಿಸಲು ಋಷಿಯು ಕ್ರೋಧ ಮನಃಖೇದಗಳಿಂದ ಸ್ತಂಭಿತನಾಗಿದ್ದು ಕಡೆಗೆ ಪತ್ನಿಯಲ್ಲಿ ಉದಾಸೀನನಾಗಿ, ತನ್ನ ಪ್ರಿಯಪುತ್ರನಾದ ಚಿರಕಾರಿಯೆಂಬುವನನ್ನು ಕರೆದು 'ನಿನ್ನ ತಾಯಿಯನ್ನು ನಿಗ್ರಹಿಸು' ಎಂದು ಹೇಳಿ ಹೊರಟು ಹೋದನು. ಚಿರಕಾರಿಯಾದರೋ ವಿಚಾರಪರನೂ ಮಾತಾಪಿತೃ ಭಕ್ತಿಯುತನೂ ಬ್ರಹ್ಮಚರ್ಯ ವ್ರತನಿಷ್ಠನೂ ಆಗಿದ್ದನು. ತಂದೆಯು ಮಾಡಿದ ಅಪ್ಪಣೆಯನ್ನು ಕೇಳಿ, ಮಗನು ನಡುಗಿದನು! ಏಕೆ? ತಾಯಿಯನ್ನು ತಾನು ನಿಗ್ರಹಿಸಬೇಕು! ಹೇಗೆ? ಅದನ್ನು ಹೇಳಿಲ್ಲ, ಏತಕ್ಕಾಗಿ ನಿಗ್ರಹ? ತಿಳಿಯಿಸಲಿಲ್ಲ. ವಿಚಾರಮಾಡಿದನು. ಈಗ ನಾನೇನುಮಾಡಬೇಕು? ಪಿತೃವಾಕ್ಯವು ಪಾಲನೀಯವೋ, ಮಾತೃದೈವವು ಪಾಲನೀಯವೋ! ಇತ್ತ ಸಾಕಾರದೈವಸ್ವರೂಪನಾದ, ಜನ್ಮಕಾರಣನಾದ, ಜ್ಞಾನದಾಯಕನಾದ, ಸಾಕ್ಷಾತ್ ಜ್ಞಾನಸ್ವರೂಪನಾದ ಜನಕನ ಅಪ್ಪಣೆ! ಅತ್ತ, ಸಕಲದೈವಂಗಳಿಗೂ ಅಧಿಕವಾದ, ಜನ್ಮಧಾರಿಣಿಯಾದ, ತನ್ನ ಅಭ್ಯುದಯಾಕಾಂಕ್ಷಿಣಿಯಾದ, ಕೇವಲ ದಯಾ–ಪ್ರೇಮ ಭರಿತಸ್ವಾಂತೆಯಾದ ಜನನಿಯ ಕ್ಷೇಮ ಚಿಂತನೆ! ಇವೆರಡರಲ್ಲಿ ಯಾವದನ್ನು ತಾನು ಅಂಗೀಕರಿಸತಕ್ಕುದು? ತಂದೆಯ ಅಪ್ಪಣೆಯಂತೆ ನಡೆಯಬೇಕಾದುದು ಪ್ರಧಾನಕರ್ತವ್ಯವು! ಆದರೆ ಹೇಗೆ? ವಿಚಾರವೇನೂ ತಿಳಿದಿಲ್ಲ! ಸ್ತ್ರೀಯರನ್ನು ಅತಿಯಾಗಿ ಶಿಕ್ಷಿಸಬಾರದು! ಹೀಗಿರುವಲ್ಲಿ ನಿಗ್ರಹಿಸುವಂತೆ ಅಪ್ಪಣೆಯಾಗಬೇಕಾದರೆ, ತನ್ನ ತಾಯಿಯಿಂದ ಅಂತಹ ಮಹತ್ತರವಾದ ಅಪರಾಧವೇನಾದರೂ ನಡೆದಿರಲೇಬೇಕು! ಅಪರಾಧಮಾಡದೆ ಭಾರ್ಯೆಯಲ್ಲಿ ನನ್ನ ಪಿತನು ಇಷ್ಟು ಜಿಹಾಸೆಗೊಳ್ಳುವವನಲ್ಲ. ಆದರೆ, ಅದಕ್ಕೂ ಶಿಕ್ಷೆಗೂ ಮಿತಿಯುಂಟು. ಈಗ ನಮ್ಮ ತಾಯಿ ಮಾಡಿದ ಅಪರಾಧ ಏಂತಹದೆಂದು ನನಗೆ ಗೊತ್ತಿಲ್ಲ; ತಂದೆ, ಅಪರಾಧವೇನೂ ನಡೆಯದೆ ಕುಪಿತನಾಗುವವನಲ್ಲ. ಅಥವಾ ಒಂದುವೇಳೆ ಅಪರಾಧವು ಘನತರ

ವಾಗಿದ್ದು ನನ್ನ ತಾಯಿ ಶಿಕ್ಷಾರ್ಹಳೇ ಆಗಿದ್ದರೂ, ತಂದೆಗೆ ಆಬಳಿಕ ಪಶ್ಚಾತ್ತಾಪವುಂಟಾಗಬಹುದು. ಆಗ, ಪತ್ನಿಯನ್ನು ನಿಗ್ರಹಿಸಲು ತಾನು ಅಪ್ಪಣೆ ಮಾಡಿದುದಕ್ಕಾಗಿ ವ್ಯಥೆಗೊಂಡು, ಅದರಿಂದ ತನ್ನ ಇತರ ನಿತ್ಯಕರ್ಮಗಳಲ್ಲಿ ಉದಾಸನಾದರೂ ಆಗಬಹುದು. ಸ್ತ್ರೀಯರು ಎಂದಿಗೂ ವಧ್ಯರಲ್ಲ; ಕ್ಷಮಾರ್ಹರಾದ ಸ್ತ್ರೀಯರನ್ನು ಉಚಿತವರಿತು ಶಿಕ್ಷಿಸ ಬೇಕು. ಆದುದರಿಂದ ನನ್ನ ಪಿತನಲ್ಲಿ ಮಾತೆಯು ಅಪರಾಧವೇನೆಂಬು ದನ್ನು ಕೇಳಿ ತಿಳಿದುಕೊಂಡು ಬಳಿಕ ಪಿತನ ಅಪ್ಪಣೆಯಂತೆ ನಡೆಯಿಸು ವೆನು, ಹೀಗೆಂದು ವಿಚಾರ ಮಾಡುತ್ತ ಕುಳಿತಿದ್ದನು.

ಪತ್ನಿಯನ್ನು ನಿಗ್ರಹಿಸಹೇಳಿ ಹೊರಟು ಹೋದ ಗೌತಮನು, 'ಪತ್ನಿಗೆ ಶಿಕ್ಷೆ ಮಾಡುವುದು ಯುಕ್ತವಾದರೂ ನಿಗ್ರಹಕ್ಕೆ ಯೋಗ್ಯಳಲ್ಲ ವೆಂದು ತಿಳಿದು ಪುತ್ರನು ತನ್ನ ಮಾತಿನಂತೆ ನಿಗ್ರಹಿಸಿಬಿಟ್ಟನೋ ಎನೋ' ಎಂದು ಗಾಬರಿಗೊಂಡು ಬಂದು ನೋಡಿದನು. ವಿಚಾರಮಾಡುತ್ತಾ ಕುಳಿತಿದ್ದ ಪುತ್ರನು ತನ್ನ ಅಪ್ಪಣೆಯನ್ನು ಇನ್ನೂ ಪಾಲಿಸಿರಲಿಲ್ಲವೆಂದೂ ಪತ್ನಿಯು ಇನ್ನೂ ಅಪರಾಧಪ್ರಾಯಶ್ಚಿತ್ತವನ್ನು ಪಡೆಯಲಿಲ್ಲವೆಂದೂ ತಿಳಿದನು. ಇದ್ದುದರಲ್ಲಿ ಸಮಾಧಾನವಾಯಿತು. ಆದರೂ ಪತ್ನಿಯನ್ನು ಹಾಗೆಯೇ ಬಿಡುವುದು ಯುಕ್ತವಲ್ಲವೆಂದು ಭಾವಿಸಿ, ಶಿಲೆಯಾಗಿ ಕೆಲವು ಕಾಲವಿದ್ದು ಶ್ರೀರಾಮಚಂದ್ರನ ಪಾದ ಧೂಳಿಯಿಂದ ಪಾವನೆಯಾಗೆಂದು, ಶಾಪ, ಉಪಶಾಪಗಳನ್ನಿತ್ತು ಅನುಗ್ರಹಿಸಿದನು. ಮತ್ತು ತನ್ನ ಆಜ್ಞೆ ಯನ್ನು ಪಾಲಿಸದೆಯೂ ತಾನು ಬಂದರೂ ಆ ಸಂಬಂಧವಾಗಿ ಪ್ರಸ್ತಾಪ ಮಾಡಲು ಮುಂದಾಗಿ ಬಾರದೆಯೂ ಇದ್ದ ಮಗನನ್ನು ಕುರಿತು "ನೀನು ಯಮಲೋಕವನ್ನು ನೋಡು" ಎಂದು ಹೇಳಿದನು.

ಮಹಾತ್ಮನಾದ ಗೌತಮನ ನುಡಿ ತಪ್ಪಲಾರದಷ್ಟೆ? ಅಹಲ್ಯಾ ದೇವಿ ಶಿಲೆಯಾದಳು. ಚಿರಕಾರಿ ತತ್‌ಕ್ಷಣ ಊರ್ಧ್ವಲೋಕವನ್ನು ಕುರಿತು ತೆರಳಿದನು. ಗೌತಮನು ತನ್ನ ಬಾಯಿಂದ ಅವಾಕ್ಯವು ಹೊರಟುದು ತನ್ನ ದುಃಖಾನುಭವಕ್ಕೆಂದೇ ತಿಳಿದು ಮಗನ ವಿಯೋಗ ದಿಂದ ಪರಿತಪಿಸುತ್ತ ಮಗನ ಗುಣಗಳನ್ನು ಕುರಿತು ಹಂಬಲಿಸುತ್ತಿದ್ದನು.

ಇತ್ತ ಪಿತಾಜ್ಞೆಯಿಂದ ಯಮಲೋಕಕ್ಕೆ ತೆರಳಿದ ಚಿರಕಾರಿಯನ್ನು ಕಂಡು ಸಾಕ್ಷಾತ್ ವೈವಸ್ವತನೇ—ಯಮಧರ್ಮರಾಯನೇ ಬಂದು ಇದಿರ್ಗೊಂಡು ಸತ್ಕರಿಸಿ, ಬಂದುದೇನೆಂದು ಕೇಳಲು, ಚಿರಕಾರಿಯು ತಾನು ತಂದೆಯ ಅಪ್ಪಣೆಯಂತೆ ಬಂದವನೆಂದು ತಿಳಿಸಿದನು, ಯಮಧರ್ಮರಾಯನು, "ಎಲೈ ಪುಣ್ಯಾತ್ಮನೆ! ನೀನು ಬ್ರಹ್ಮಚರ್ಯೆಯಿಂದ ಆರ್ಜಿಸಿದ ಪುಣ್ಯಲೋಕಗಳೂ, ಮಾತಾಪಿತೃ ಗುರುಜನ ಸೇವೆಗಳನ್ನೂ ಮಾಡಿ ಆರ್ಜಿಸಿದ ಪುಣ್ಯಲೋಕಗಳೂ, ಸತ್ಯ ಸದಾಚಾರ, ಭೂತದಯೆ ಮೊದಲಾದ ಸದ್ಗುಣ ಸದ್ವರ್ತನಗಳಿಂದ ಆರ್ಜಿಸಿದ ಪುಣ್ಯಲೋಕಗಳೂ, ಅಕ್ಷಯಫಲಗಳನ್ನು ಕೊಡುವಂಥವುಗಳಾಗಿರುವಲ್ಲಿ ನೀನು ನನ್ನ ಲೋಕದಲ್ಲಿರಲು ಹೇಗಾದೀತು! ಅಲ್ಲದೆ ಈಗಲೇ ನೀನು ಮರ್ತ್ಯಲೋಕವನ್ನುಳಿದು ಬರುವಂತೆಯೂ ಇಲ್ಲ. ಹಿಂತಿರುಗಿ ತಾಯ್ತಂದೆಯರ ಸೇವೆಯಿಂದ ಸುಖಿಸಿ, ಪುರುಷಾರ್ಥಗಳೆಲ್ಲವನ್ನೂ ಸಾಧಿಸಿ, ಆಬಳಿಕ ನೀನಾರ್ಜಿಸಿರುವಂತಹ ಪುಣ್ಯಲೋಕಂಗಳನ್ನು ಅನುಭವಿಸಲು ಬರುವೆ, ಈಗ ನಡೆಯೆಂದನು. ಚಿರಕಾರಿಯು, 'ಪಿತನ ಆಜ್ಞೆಯಷ್ಟೇ ನನಗೆ ಪ್ರಧಾನವಾದುದು. ಯಮಲೋಕವನ್ನು ನೋಡು ಹೋಗೆಂದು ಪಿತನು, ಮತ್ತೆ ಆಜ್ಞೆಮಾಡದೆ ನಾನಲ್ಲಿಗೆ ಹೋಗತಕ್ಕವನಲ್ಲ. ನೀನು ಹೇಳುವಂತೆ ನಾನು ಆರ್ಜಿಸಿದ ಪುಣ್ಯಲೋಕಗಳೆಲ್ಲವನ್ನೂ ತೋರಿಸಿದರೆ ಅವೆಲ್ಲವನ್ನೂ ನೋಡಬೇಕೆಂದು ಆಶಿಸುವೆನೆಂದು, ಯಮಧರ್ಮನಲ್ಲಿ ಹೇಳಿಕೊಂಡನು. ಯಮಧರ್ಮರಾಯನು ಚಿರಕಾರಿಯನ್ನು ಅತ್ಯಂತ ಆದರದಿಂದ ಉಪಚರಿಸುತ್ತ ಆತನನ್ನು ಕರೆದುಕೊಂಡು ಆತನು ಆರ್ಜಿಸಿದ ಪುಣ್ಯಲೋಕಗಳನ್ನು ಬಂದೊಂದನ್ನಾಗಿ ತೋರಿಸುತ್ತ ಅವುಗಳ ಪ್ರಭಾವ ವೈಭವಗಳನ್ನು ವಿವರಿಸುತ್ತ, ಚಿರಕಾರಿಯನ್ನು ಅಭಿನಂದಿಸುತ್ತ ಬಂದು, ಎಲ್ಲವನ್ನೂ ತೋರಿಸಿದಮೇಲೆ ಬಲಾತ್ಕಾರದಿಂದ ಆತನನ್ನು ಮತ್ತೆ ಭೂಮಿಗೆ ಕರೆತಂದು, ಈತನಿಗಾಗಿಯೇ ಶೋಕಿಸುತ್ತಾ ಕುಳಿತಿದ್ದ ಗೌತಮನನ್ನು ತೋರಿಸಿ,—"ಪುಣ್ಯಾತ್ಮನೇ! ನೋಡ ನಿನ್ನನ್ನಗಲಿ, ನಿನ್ನ ತಂದೆ ಪಡುತ್ತಿರುವ ಶೋಕವನ್ನು ನೋಡು ನಿನ್ನನ್ನು ಎಷ್ಟು ಬಗೆಯಿಂದ ಕೂಗಿ ಕರೆಯುತ್ತಿರುನು ಕೇಳು, ಈಗ

ಲಾದರೂ ನೀನು ಹೋಗಿ ಪಿತನನ್ನು ನಮಸ್ಕರಿಸಿ ಸಂತೋಷಪಡಿಸು. ಇಂದಿನಿಂದ ನೀನು ಚಿರಕಾರಿ ಎಂಬ ಹೆಸರಿನಿಂದ ಸುಪ್ರಸಿದ್ಧನಾಗಿ ಚಿರಕಾಲ ಸುಖಿಸುತ್ತಿರು." ಎಂದು ಹರಸಿ ಕಳುಹಿಸಿದನು.

ಚಿರಕಾರಿಯು ತಂದೆಯ ಇದಿರಿಗೆ ನಿಂತು ವಿನೀತನಾಗಿ ನಮಸ್ಕರಿಸಿದನು. ತನ್ನ ಮಾತಿನಂತೆ ಯಮಲೋಕಕ್ಕೆ ತೆರಳಿದ್ದ ಪುತ್ರನು ಮತ್ತೆ ಬಂದುದನ್ನು ನೋಡಿ ತಂದೆಗೆ ಸಂತೋಷವಾಯಿತೆಂದು ಬೇರೆ ಹೇಳಬೇಕೆ? ಮಗನ ಮುಡಿದಡಹಿ "ಚಿರಕಾರಿ! ಅನ್ವರ್ಥನಾಮನೆನಿಸುವ ಚಿರಕಾರಿ! ನನ್ನ ಮಾತನ್ನು ನಡೆಯಿಸುವದಕ್ಕಾಗಿ, ಯಮಲೋಕವನ್ನು ನೋಡಿಬಂದ ಸತ್ಪುತ್ರನೆನ್ನಿಸಿದ ಚಿರಕಾರಿ!" ಎಂದು ಹಲವು ಬಗೆಯಾಗಿ ಮಗನನ್ನು ಆದರಿಸಿ, ಹರಸಿದನು. ಚಿರಕಾರಿಯು ಕೈಮುಗಿದು, 'ತಮ್ಮ ಆಜ್ಞೆಯಂತೆ ನಾನು ನಡೆಯದೆ, ಮಾತೆಯಿಂದ ಆಗಿರುವ ಅಪರಾಧವನ್ನು ತಿಳಿಯಬೇಕೆಂದು ನಿಧಾನಿಸಿಬಿಟ್ಟುದಕ್ಕಾಗಿ ಉಂಟಾಗಿರುವ ದೋಷದಿಂದ ನಾನು ಯಮಲೋಕವನ್ನು ನೋಡಿಬಂದೆನು, ನನ್ನ ಅಪರಾಧ ಪ್ರಾಯಶ್ಚಿತ್ತಕ್ಕಾಗಿ ತಾವು ನನ್ನನ್ನು ಹಾಗೆ ಆಜ್ಞಾಪಿಸಿ ಅನುಗ್ರಹಿಸಿದಿರಿ. ಇನ್ನು ಮುಂದೆ ನಾನು ಪುನೀತನಾಗುವಂತೆ ಅನುಗ್ರಹಿಸಬೇಕೆಂದು' ಪರಿಪರಿಯಾಗಿ ಪ್ರಾರ್ಥಿಸಿದನು.

ಗೌತಮನು ಪುತ್ರನನ್ನು ಆಶೀರ್ವದಿಸಿ, ನಿತ್ಯಕೃತ್ಯದಲ್ಲಿ ನಿರತನಾನಾದನು. ಚಿರಕಾರಿಯೂ ಮಾತೃಹತ್ಯೆಯನ್ನು ಮಾಡದೆ, ಪೂರ್ವಾಪರ ವಿವೇಕದಿಂದಲೂ ಮಾತೃಪ್ರೇಮ, ಪಿತೃಭಕ್ತಿ ಗೌರವಗಳಿಂದಲೂ ಕೂಡಿ, ನಡೆದುದರಿಂದ ಚಿರಕಾರಿಯೆಂದು ಪ್ರಸಿದ್ಧನಾದನು. ಯಮಧರ್ಮನೂ ಕೂಡ ಅವನನ್ನು ಎಷ್ಟೋ ಬಗೆಯಾಗಿ ಉಪಚರಿಸಿದನು, ಆತನ ಕರ್ತವ್ಯ ನಿಷ್ಠೆಯಿಂದ ಆತನೂ ಸತ್ಪುತ್ರಕೋಟಿಯಲ್ಲಿ ಪರಿಗಣಿತನಾಗಿ ಮಾರ್ಗದರ್ಶಕನಾಗಿ ನಿಂತನು. ಈಗಲಿನವರೋ? ಏನೆನ್ನುವಿರಿ, ಬಾಲಕರೇ? ತಾಯಿತಂದೆಯರು ನಿಮ್ಮ ಹಟ, ಹೋರಾಟ, ಸಟೆ. ಕಳ್ಳತನ, ಕೇಡಿಗತನಗಳನ್ನು ಕಂಡು ಸಿಟ್ಟಾಗಿ ನಿಮ್ಮನ್ನೇನಾದರೂ ದಂಡಿಸಿದರೆ, ಬಯ್ದು ಹೊಡೆದರೆ, ನೀವು ತಿರುಗಿ ಅದೇ ಬಯ್ಗುಳಿಂದ ಅವರನ್ನು ಬಯ್ಯುವಿರಿ, ಇಲ್ಲವೆ, ಅವರು ಹೊಡೆಯಲೆತ್ತಿದ ಕೋಲುಗಳನ್ನೇ

ತೆಗೆದು ಹೊಡೆಯಹೋಗುವಿರಿ. ತಾಯಿತಂದೆಯರನ್ನು ನೆರೆಹೊರೆಯುವರಲ್ಲಿ ದೂರುವಿರಿ, ಅವರನ್ನು ವಂಚಿಸಿ, ಅವರ ಮಾತನ್ನು ಮೀರಿ, ನಡೆದು ಅವರಿಗೆ ಹೇಳ ತಾಳಲಾರದಂತಹ ಬೇಗೆಯನ್ನುಂಟುಮಾಡುವಿರಿ. ಇಲ್ಲವೆ, ನಿಜವಾಗಿ ಹೇಳಿರಿ! ನಿಮ್ಮಲ್ಲಿ ಅಂತಹರು ಎಷ್ಟುಮಂದಿಯುಂಟು? ಚಿರಕಾರಿಗಳಾದವರು ನಿಮ್ಮಲ್ಲಿ ಎಷ್ಟುಮಂದಿ? ಭೀಷ್ಮಾಚಾರ್ಯರು ಎಷ್ಟುಮಂದಿ? ಪೂರುಮಹಾರಾಯರು ಎಷ್ಟುಜನರು? ರಾಮ ಭಾರ್ಗವರಾಮರು ಎಷ್ಟುಮಂದಿ? ಇರುವರು ವಿಚಾರಮಾಡಿರಿ, ಅವರನ್ನು ನೆನೆನೆನೆದು ನಿಮ್ಮ ನಿಮ್ಮ ನಡೆನುಡಿಗಳಲ್ಲಿರುವ ಕುಂದು ಕೊರತೆಗಳನ್ನು ತಿಳಿದು ತಿದ್ದಿಕೊಂಡು, ಭಾರತಮಾತೆಯ, ಕನ್ನಡದಬ್ಬೆಯ ನಿಜವಾದ ಮಕ್ಕಳೆನ್ನಿಸಲು ಪ್ರಯತ್ನಪಡಿರಿ! ಏನೆನ್ನುವಿರಿ? ಹಾಗೆಯೇ ನಡೆಯುಲು ಅಭ್ಯಾಸಮಾಡುವಿರಷ್ಟೆ? ಮಾಡಿರಿ.

ಇನ್ನು ನಿಮ್ಮ ಅಕ್ಕತಂಗಿಯರು ಅರಿತು ಚರಿಸಬೇಕಾದಂತಹ ಆರ್ಯ ನಾರಿಯರ ಚರಿತೆಗಳನ್ನು ಮುಂದೆ ವಿವೇಚಿಸಲು ಅವಕಾಶ ಪಡೆದುಕೊಳ್ಳುವಿರಷ್ಟೆ! ಆಗಲಿ.

ತೃತೀಯಲಹರಿ.

i

ಸುಕನ್ಯೆ.

ಅಕ್ಕರೆಯುಳ್ಳ ಅಕ್ಕತಂಗಿಯರೇ!

ಆನಂದದಿಂದಾಲಿಸಿರಿ! ಆರ್ಯಮಹಿಳೆಯರೆನ್ನಿಸಬೇಕಾದರೆ ಆರ್ಯ ನಾರೀಮಣಿಯರ ಆದರ್ಶವೃತ್ತಗಳನ್ನು ಮನವಾರೆ ಕೇಳಿ ತಿಳಿದು ಅದರಂತೆ ನಡೆಯಿರಿ. ಏನೆನ್ನುವಿರಿ? ಆಗಬಹುದೋ? ಸರಿ, ಈವರೆಗೆ ಮಾತಾಪಿತೃಭಕ್ತಿಯಲ್ಲಿ ಪಿತೃವಾಕ್ಯಪರಿಪಾಲನೆಗಾಗಿ ಸ್ವಸುಖಾಭಿಲಾಷೆಯನ್ನು ಕಡೆಗೊತ್ತರಿಸಿ ನಿಷ್ಕಪಟವೃತ್ತಿಯಿಂದ ವರ್ತಿಸಿದ ಮಹಾಪುರುಷರ ವೃತ್ತಾಂತಗಳನ್ನು ವಿಚಾರಮಾಡಿದಿರಷ್ಟೆ, ಇನ್ನು ಮಾತಾ ಪಿತರರ ಹಿತವನ್ನೇ ಸಾಧಿಸುವುದಕ್ಕಾಗಿ ತಮ್ಮ ಆಶಾ ವೈಭವಗಳನ್ನು ತೊರೆದಂಥ ಕನ್ಯಾಮಣಿಯರ ವೃತ್ತವನ್ನು ವಿಚಾರಕ್ಕೆ ತೆಗೆದುಕೊಳ್ಳಿರಿ.

ಸುಕನ್ಯಾ, ಶರ್ಮಿಷ್ಠಾ ಲೋಪಾಮುದ್ರಾದೇವಿಯರು ತಮ್ಮ ತಮ್ಮ ಜನನೀಜನಕರ, ತಮ್ಮ ಜನ್ಮಭೂಮಿಯ, ರಾಷ್ಟ್ರ ಪ್ರಜೆಗಳ ಕ್ಷೇಮಾಭ್ಯುದಯಕ್ಕಾಗಿ ತಾವು ಎಷ್ಟು ಕ್ಲೇಶಗಳನ್ನು ಸಹಿಸಿದರೆಂಬುದನ್ನು ತಿಳಿದುಕೊಳ್ಳಿರಿ.

ಶರ್ಯಾತಿ ಮಹಾರಾಯನೆಂಬ ಸತ್ಯಸಂಧನೂ ಬ್ರಾಹ್ಮಣಪ್ರಿಯನೂ ಪ್ರಜಾವತ್ಸಲನೂ, ಧರ್ಮಾತ್ಮನೂ ಆದ ಅರಸನಿದ್ದನು. ಆತನಿಗೆ 'ಸುಕನ್ಯಾ' ಎಂಬ ಹೆಸರಿನ ಪುತ್ರಿಯಿದ್ದಳು. ಸುಕನ್ಯೆಯೆಂದರೆ, ರೂಪದಲ್ಲಿಯೂ, ಗುಣದಲ್ಲಿಯೂ, ನಡೆನುಡಿಗಳಲ್ಲಿಯೂ, ಸಕಲ ಭಾಗಗಳಲ್ಲಿಯೂ ಅವಳು ಸಾರ್ಥಕನಾಮಸಂ ಶೋಭಿತೆಯಾದ ಸುಕನ್ಯೆಯೇ ಸರಿ! ನಯ, ವಿನಯ, ಗಾಂಭೀರ್ಯ, ಔದಾರ್ಯ, ದಯಾ, ಭಕ್ತಿ, ಶ್ರದ್ಧಾ, ಸಹಿಷ್ಣುತಾ, ಗುಣಗಳೆಲ್ಲವೂ ಅವಳಲ್ಲಿಯೇ ನೆಲಗೊಂಡಿದ್ದವು. ಆ ರಾಜಕನ್ಯೆ, ತಾನು ಅರಸುಮಗಳೆಂಬ ಹೆಮ್ಮೆಯಿಂದೆಂದೂ ಮೆರೆದವಳಲ್ಲ. ತಾಯಿ ತಂದೆಗಳಿಗೆ ಅಪ್ರಿಯವಾದ ಕಾರ್ಯಗಳನ್ನು ಮಾಡಬೇಕೆಂದು ಅವಳೆಂದೂ ಮನಸ್ಸಿನಲ್ಲಿ ಕೂಡ ನೆನೆದವಳಲ್ಲ. ಶರ್ಯಾತಿ ಮಹಾರಾಯನಿಗೆ ಸುಕನ್ಯೆಯು ಪ್ರಾಣಾಧಿಕ ಪ್ರಿಯಳಾದ ಪುತ್ರಿಯಾಗಿದ್ದಳು, ಈತನು ಕ್ಷಣಮಾತ್ರವೂ ಪುತ್ರಿಯನ್ನು ಬಿಟ್ಟಿರುವವನಲ್ಲ.

ಹೀಗಿರುವಲ್ಲಿ ಶರ್ಯಾತಿ ಮಹಾರಾಯನು ಕನ್ಯೆಯೊಡನೆ, ಪರಿವಾರಸಮೇತನಾಗಿ ಮಹಾತ್ಮರ ಸಂದರ್ಶನಕ್ಕಾಗಿ ಹೊರಟನು. ಬರುತ್ತಾ ಚ್ಯವನನೆಂಬ ಮಹಾತ್ಮನು ತಪಸ್ಸು ಮಾಡುತ್ತಲಿದ್ದ ಪುಣ್ಯಾತಪೋವನ ಪ್ರಾಂತವನ್ನು ಹೊಕ್ಕು ಅಲ್ಲಿ ಬೀಡುಗೊಂಡನು. ರಾಜಪುತ್ರಿಯಾದ ಸುಕನ್ಯೆಯು ಸಖೀಜನರೊಡನೆ ಕೂಡಿ, ತಪೋವನ ಪ್ರಾಂತದಲ್ಲಿ ವಿಹರಿಸುತ್ತಿದ್ದಳು. ಹೀಗೆ ವನದ ಪ್ರಕೃತಿ ಸೌಂದರ್ಯವನ್ನೂ ಮಹಾತ್ಮರ ಪುಣ್ಯ ಪ್ರಭಾವದಿಂದ ಅಲ್ಲಿಯ ವೃಕ್ಷತರುಲತೆಗಳೆಲ್ಲ ಫಲಪುಷ್ಪಭರಿತವಾಗಿ ಮೆರೆಯುತ್ತಿರುವ ಸೊಬಗನ್ನೂ ಬಣ್ಣಿಸುತ್ತ ಬರುತ್ತಿರುವ ರಾಜಕನ್ಯೆಕೆಗೆ ದೊಡ್ಡದೊಂದು ಹುತ್ತವು ಬೆಳೆದು ನಿಂತಿದ್ದುದು ಕಂಡುಬರಲು, ಕುತೂಹಲದಿಂದ ಅದನ್ನು ನೋಡಿದಳು. ಹುತ್ತದಲ್ಲಿ ಮೇಲ್ಗಡೆ ಎರಡು ರಂಧ್ರಗಳೂ ಆ ರಂಧ್ರದೊಳಗಿಂದ ಮಿಂಚಿನಂತೆ ಹೊಳೆಯು

ತ್ತಿದ್ದ ಎರಡು ವಸ್ತುಗಳೂ ಕಂಡುಬರಲು, ಸ್ತ್ರೀಜಾತಿ ಸಹಜವಾದ ಕುತೂಹಲದಿಂದಲೂ ಬಾಲ್ಯಸಹಜವಾದ ಚಪಲತೆಯಿಂದಲೂ ಕೆಳಗೆ ಬಿದ್ದಿದ್ದ ಮುಳ್ಳುಕಡ್ಡಿಯೊಂದನ್ನು ತೆಗೆದುಕೊಂಡು ಎರಡು ರಂಧ್ರಗಳಿಗೂ ಚುಚ್ಚಿದಳು. ಚುಚ್ಚಿದ ಒಡನೆ ಏನೋ ಅನರ್ಥವನ್ನು ಸೂಚಿಸುವಂತೆ ಹುತ್ತದಿಂದ ರಕ್ತಪ್ರವಾಹವು ಹೊರಡಲು ಅದನ್ನು ಕಂಡು ಇವಳು ನಡುಗಿಬಿದ್ದಳು. ಮುಂದೇನು ಮಾಡಬೇಕೆಂಬುದನ್ನು ತಿಳಿಯದೆ, ತನ್ನ ತಪ್ಪನ್ನು ಇತರರಿಗೆ ಹೇಳಿಕೊಳ್ಳಲಾರದೆ ಅಲ್ಲಿ ನಿಲ್ಲಲಿಕ್ಕೂ ಶಕ್ತಳಾಗದೆ ಬಿಡಾರದೊಳಕ್ಕೆ ಹೋಗಿ ಮಲಗಿ ಪರಿತಪಿಸುತ್ತಿದ್ದಳು.

ಸುಕನ್ಯೆಯು ಬಂದು ಅಂತಃಪುರದಲ್ಲಿ ಮಲಗಿದಮೇಲೆ ಅವಳ ಸಖೀಜನರು ತಮ್ಮತಮ್ಮ ಕೆಲಸಗಳನ್ನು ಕುರಿತು ನಡೆದರು. ಶರ್ಯಾತಿ ಮಹಾರಾಜನಿಗೆ ಇದಾವ ವಿಷಯವೂ ತಿಳಿದಿರಲಿಲ್ಲ. ಸುಕನ್ಯೆಯು ಬಂದು ಮಲಗಿದ ಸ್ವಲ್ಪ ಹೊತ್ತಿನೊಳಗಾಗಿ, ಮಹಾರಾಜನ ಸೈನ್ಯವೆಲ್ಲವೂ ಇದ್ದಕ್ಕಿದ್ದಂತೆ ಹೇಳಲಸದಳವಾದ ಯಾತನೆಯನ್ನು ಹೊಂದಿ ಬೀಳುತ್ತ ಬರಲು, ರಾಜನು ಅದನ್ನು ನೋಡಿ "ಕಾರಣವಿಲ್ಲದೆ ಹೀಗಾಯಿತೇಕೆ? ಹೀಗಾಗಬೇಕಾದರೆ ಮಹಾತ್ಮರ ಆಗ್ರಹವಾಗಲೀ ದೈವದ ಅವಕೃಪೆಯಾಗಲೀ ಆಗಿರಬೇಕು! ಅಪರಾಧವಿಲ್ಲದೆ ಅವರು ಆಗ್ರಹಿಸುವರಲ್ಲ. ನನ್ನಿಂದಲಾಗಲೀ ನನ್ನ ಪರಿವಾರದವರಿಂದಲೇ ಆಗಲೀ ಏನೋ ಅಚಾತುರ್ಯವು ನಡೆದಿರಬೇಕು. ನನಗೆ ತಿಳಿದಂತೆ, ಸ್ವಪ್ನದಲ್ಲಿ ಕೂಡ ನಾನು ಅಪ್ರಮತ್ತನಾಗಿಯೇ ಆಚರಿಸುತ್ತಿರುವೆನು." ಹಾಗೆ ನಿರ್ಧರಿಸಿ, ಉಳಿದ ತನ್ನ ಪರಿವಾರದವರನ್ನೂ ಕನ್ಯೆಯನ್ನೂ ಕರೆದು "ನಿಮ್ಮಲ್ಲಿ ಯಾರೇ ಆಗಲಿ, ಯಾವ ಮಹಾತ್ಮರಿಗಾದರೂ ಏನು ತಪ್ಪು ಮಾಡಿರುವಿರೋ ತಿಳಿಸಬೇಕು. ಇದು ಮಹಾ ತಪೋಧನರಾದ ಅಗ್ನಿಸಮಾನರಾದ ಚ್ಯವನ ಮಹರ್ಷಿಗಳ ತಪೋವನವು! ಅವರಿಗೆ ಅಹಿತವಾದ ಅಕಾರ್ಯವು ನಿಮ್ಮಲ್ಲಿ ಯಾರಿಂದಲಾದರೂ ಆಚರಿಸಲ್ಪಟ್ಟದ್ದರೆ ತಿಳಿಸಿರಿ. ತಿಳಿದಾಗಲೀ ತಿಳಿಯದೇಯಾಗಲೀ, ನೀವು, ಆ ಮಹಾತ್ಮರಿಗಾಗಲೀ ಅವರ ಶಿಷ್ಯರಿಗಾಗಲೀ ತಪ್ಪು ಮಾಡಿದ್ದರೆ ವಿಚಾರ ಮಾಡಿ ತಿಳಿದು ಹೇಳಿರಿ. ಇಲ್ಲದಿದ್ದರೆ ಸರ್ವಾನರ್ಥವಾಗುವುದು" ಎಂದು ಹೇಳಿದನು.

ಎಲ್ಲರೂ ತಮ್ಮಿಂದ ಯಾವ ಅಪರಾಧವೂ ನಡೆದುದಿಲ್ಲವೆಂದೂ ತಾವು ಕೇವಲ ನಿರಪರಾಧಿಗಳೆಂದೂ ಹೇಳಿದರು.

ಸುಕನ್ಯೆಯು ಇಷ್ಟು ಅನರ್ಥಕ್ಕೂ ತನ್ನ ಚೇಷ್ಟೆಯೇ ಕಾರಣವಾಗಿರಬಹುದೆಂದು ಶಂಕಿಸಿ, ತಂದೆಗೆ ನಮಸ್ಕರಿಸಿ ವಿನೀತಭಾವದಿಂದ "ತಂದೆಯೇ! ನಾನು ಸಖೀಜನರೊಡನೆ ವನದ ಸೊಬಗನ್ನು ನೋಡುತ್ತ ಬರುತ್ತಿರುವಲ್ಲಿ ದೊಡ್ಡದೊಂದು ಹುತ್ತದೊಳಗೆ ಫಳಫಳನೆ ಹೊಳೆಯುತ್ತಿದ್ದ ಅದಾವುದೋ ಎರಡು ವಸ್ತುಗಳನ್ನು ನೋಡಿ, ಇದೇನಾಗಿರಬಹುದೆಂದು ಕುತೂಹಲದಿಂದ ಮುಳ್ಳುಕಡ್ಡಿಯನ್ನು ತೆಗೆದು ಅವುಗಳನ್ನು ಚುಚ್ಚಿದೆನು. ಆ ಹುತ್ತದೊಳಗಾರಿರುವರೋ, ನಾನು ಚುಚ್ಚಿದುದರಿಂದ ಯಾವ ಪ್ರಾಣಿಗೆ ಯಾತನೆಯಾಯಿತೋ ತಿಳಿಯದೆ ಉತ್ತರ ಕ್ಷಣದಿಂದ ತಪಿಸುತ್ತಿರುವೆನು" ಎಂದಳು.

ಶರ್ಯಾತಿಯು ಮಗಳ ಮಾತನ್ನು ಕೇಳಿದ ಕೂಡಲೇ ಮಗಳನ್ನು ಜೊತೆಗೊಂಡು ಹುತ್ತವಿದ್ದಬಳಿಗೆ ಬಂದು ನೋಡಿ, ಚ್ಯವನನು ಹುತ್ತದೊಳಗಿರುವುದನ್ನು ತಿಳಿದು ಭಯಭಕ್ತಿಯಿಂದ ಕೈಜೋಡಿಸಿ—"ಮಹಾನುಭಾವ! ನನ್ನನ್ನು ಕೃಪಾದೃಷ್ಟಿಯಿಂದ ಅವಲೋಕಿಸಿ, ಅನುಗ್ರಹಿಸು. ನನ್ನ ಪುತ್ರಿಯು ಅಜ್ಞಾನದಿಂದ ಆಚರಿಸಿರುವ ಅಪರಾಧಕ್ಕಾಗಿ ತಮ್ಮಲ್ಲಿ ಭಯಭಕ್ತಿಯಿಂದ ಕ್ಷಮೆಯನ್ನು ಪ್ರಾರ್ಥಿಸುತ್ತಿರುವಳು. ಆಗ್ರಹಿಸದೆ ಅನುಗ್ರಹಿಸಿ ಈಗ ಉಂಟಾಗಿರುವ ವಿಪತ್ತನ್ನು ಪರಿಹಾರಮಾಡು" ಎಂದು ಪ್ರಾರ್ಥಿಸಲು, ಚ್ಯವನನು ಪ್ರಸನ್ನನಾಗಿ ಹುತ್ತದಿಂದಲೇ ಹೀಗೆ ಹೇಳಿದನು.

"ಎಲೈ ರಾಯನೇ! ತಪಸ್ಸಿದ್ಧಿಯಾಗಿ ಇನ್ನು ಪಿತೃಋಣವಿಮೋಚನಕ್ಕಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕೆಂದಿದ್ದೆನು. ಈಗ ನಿನ್ನ ಮಗಳು ತನ್ನ ಬಾಲ್ಯಚಾಪಲ್ಯದೋಷದಿಂದ ನನಗೆ ಕಣ್ಣು ಕಾಣದಂತೆಸಗಿದಳು. ವೃದ್ಧನೂ ಅಂಧನೂ ಕೃಶನೂ ಆದ ನನಗೆ ಹೆಣ್ಣು ಕೊಡುವರಾರು? ಗೃಹಸ್ಥಾಶ್ರಮದ ಆಶೆಯೆಲ್ಲಿ? ನಿನ್ನ ಕನ್ಯೆಯೊಪ್ಪಿ ನನಗೆ ಭಾರ್ಯೆಯಾಗುವುದಾದರೆ ಮಾತ್ರ, ನಾನು ಶಾಂತನಾಗುವೆನು" ಎಂದನು.

ಶರ್ಯಾತಿರಾಯನು ತಪಸ್ವಿಯ ವಾಕ್ಯವನ್ನು ಕೇಳಿ ಆಗಲೆಂದೊಪ್ಪಿ, ಮಗಳ ಮುಖವನ್ನು ನೋಡಿದನು. ಆಗ ಸುಕನ್ಯೆಯು ಏನು ಮಾಡಬಹುದು! ಎಳೆದಂಗೆಯರೇ! ಹೇಳಿರಿ, ಸುಕನ್ಯೆಯು ಏನು ಮಾಡಬಹುದಾಗಿದ್ದಿತು? ನೀವಾಗಿದ್ದರೆ ತಡೆಭಿಡೆ ಇಲ್ಲದೆ—ತಾರುಮಾರಾಗಿ ಹೇಳಿ, 'ಒಲ್ಲೆನೆಂದು' ನುಡಿದು ಹೋಗುತ್ತಿದ್ದಿರಿ. ಇಲ್ಲವೆ, 'ಪ್ರಾಣ ಬಿಡುವೆನು, ಕೆರೆ ಕಾಲುವೆಗಳಲ್ಲಿ ಬೀಳುವೆನು, ನಾನಿವನನ್ನು ಒಲ್ಲೆನು' ಎನ್ನುತ್ತಿದ್ದಿರಿ. ಆದರೆ ಸುಕನ್ಯೆಯು ಹಾಗೆ ಮಾಡಲಿಲ್ಲ. ಸುಕನ್ಯೆಗೆ ತಾನು ಮಾಡಿದ ಅಪರಾಧಕ್ಕಾಗಿ ಭಯವೂ ಪಶ್ಚಾತ್ತಾಪವೂ, ಬುದ್ಧಿಯಿಲ್ಲದೆ ತಪೋಧನನಾದ ಚ್ಯವನನಿಗೆ ಕಣ್ಣುನೋವನ್ನುಂಟುಮಾಡಿದೆನೆಂಬ ಮರುಕವೂ ತನ್ನ ದೆಸೆಯಿಂದ ತನ್ನ ದೇಶದ ಪ್ರಜೆಗಳಿಗಾಗುತ್ತಿರುವ ಹಿಂಸೆಗಾಗಿ ದಯೆಯೂ ಏಕಕಾಲದಲ್ಲಿ ಉಂಟಾಗಲು ಅವಳು ತಂದೆಯನ್ನು ನೋಡಿ ಸಮಾಧಾನದಿಂದ "ಪಿತನೆ, ನೀನು ಮನಸ್ಸಿನಲ್ಲಿ ಸ್ವಲ್ಪವೂ ಆಯಾಸಪಡದೆ ಸಂತೋಷದಿಂದ ಈ ಮಹಾತ್ಮನ ಅಭಿಮತದಂತೆ ಮಾಡಬಹುದು. ನನಗೆ ಪೂರ್ಣಸಮ್ಮತವುಂಟು" ಎಂದಳು.

ಶರ್ಯಾತಿಯು ಆಕ್ಷಣವೇ ಚ್ಯವನನ ಮೇಲೆ ಬಳೆದಿದ್ದ ಹುತ್ತವನ್ನು ತೆಗೆಯಿಸಿ ಆತನಿಗೆ ಮಂಗಳಸ್ನಾನಾದಿಗಳನ್ನು ಮಾಡಿಸಿ, ಸುಮುಹೂರ್ತದಲ್ಲಿ ಸುಕನ್ಯೆಯನ್ನು ಧಾರಾಪೂರ್ವಕವಾಗಿ ಒಪ್ಪಿಸಿದನು. ಒಡನೆಯೇ ಪತಿಯ ಅಪ್ಪಣೆಯಂತೆ ನಾರು ಬಟ್ಟೆಯುಟ್ಟು ಪತಿಯ ಹಿಂದೆ ಹೊರಡಲು ಅನುವಾದಳು. ರಾಜಕನ್ಯೆಯಾದ ಸುಕನ್ಯೆಯು ವೃದ್ಧ ತಪಸ್ವಿಯ ಭಾರ್ಯೆಯಾದಳು! ಅಂತಃಪುರವನ್ನು ಬಿಟ್ಟು ಹೊರಗೆ ಬಿಸಿಲಿನಲ್ಲಿ ತಿರುಗಾಡದವಳು, ಆಶ್ರಮಪ್ರಾಂತ್ಯದಲ್ಲಿ ಅಲೆದಾಡುವಂತಾಯಿತು. ದಿವ್ಯವಾದ ಭಕ್ಷ್ಯಭೋಜ್ಯಾದಿಗಳನ್ನು ತಿನ್ನುತ್ತಿದ್ದವಳು ಕಂದಮೂಲಗಳಿಂದ ತೃಪ್ತಿಪಡುವಂತಾಯಿತು! ಹೆಚ್ಚು ಮಾತೇಕೆ? ತಾನು ರಾಜಕನ್ಯೆಯೆಂಬ ಅಭಿಮಾನವನ್ನು ಕಟ್ಟಿಟ್ಟು ತನ್ನ ಪತಿಯ ಹಿತವನ್ನು ಮಾತ್ರವೇ ಮನದಲ್ಲಿ ಚಿಂತಿಸುತ್ತ ನಿರ್ವಂಚನೆಯಿಂದ ಸೇವಿಸುತ್ತಿದ್ದಳು,

ಶರ್ಯಾತಿಯು ಮಗಳನ್ನು ತಪಸ್ವಿಗೆ ಒಪ್ಪಿಸಿ, ಮಗಳು ಕಷ್ಟಕ್ಲೇಶಗಳಿಗೆ ಗುರಿಯಾಗಿ ನರಳಬೇಕಾಯಿತೆಂಬ ವ್ಯಾಕುಲದಿಂದಲೇ

ಪರಿವಾರದೊಡನೆ ತನ್ನ ರಾಜಧಾನಿಗೆ ತೆರಳಿದನು. ಸುಕನ್ಯೆಯೇನಾದರೂ ದುಃಖಪಟ್ಟಳೇನೆಂದರೆ ಇಲ್ಲ;—ತನ್ನ ಅಪರಾಧದಿಂದ ತನ್ನ ಪತಿಯು ಅಂಧನಾದನೆಂಬ ದುಃಖವೊಂದು ಹೊರತು ಮತ್ತೇನೂ ಆಕೆಗಿರಲಿಲ್ಲ, ಸಂತೋಷದಿಂದಲೇ ತಪೋವನದಲ್ಲಿ, ತಾಪಸವೃತ್ತಿಯಲ್ಲಿ, ತಪಸ್ವಿಯಾದ ಪತಿಯ ಶುಶ್ರೂಷೆಯಲ್ಲಿ ತತ್ಪರೆಯಾಗಿದ್ದಳು.

ಒಂದುದಿನ ಸುಕನ್ಯೆಯು ಧೌತಾಂಬರಧರೆಯಾಗಿ ಶುಚಿರ್ಭೂತೆಯಾಗಿ ಆಶ್ರಮಪ್ರಾಂತದಲ್ಲಿ ನಿಂತಿರಲು ಅಲ್ಲಿಗೆ ಅಶ್ವಿನೀಕುಮಾರರೆಂಬ ದೇವವೈದ್ಯರು ಬಂದು ಸುಕನ್ಯೆಯ ರೂಪಲಾವಣ್ಯ, ಗಾಂಭೀರ್ಯ ಸೌಕುಮಾರ್ಯ ಕಾಂತಿವಿಶೇಷಗಳಿಗೆ ಬೆರಗಾಗಿ ಅವಳ ಬಳಿಗೆ ಬಂದು—

"ಎಲೌ, ವನಿತಾಮಣಿಯೇ ನೀನಾರು? ನಿನ್ನ ಹೆಸರೇನು! ನಿನ್ನ ಮಾತಾಪಿತೃಗಳಾರು? ದೇವದುರ್ಲಭಳೆನ್ನಿಸಿರುವ ನಿನ್ನನ್ನು ಕೈಹಿಡಿದ ಧನ್ಯಾತ್ಮನಾರು? ಈ ವನದಲ್ಲಿ ಒಬ್ಬಳೇ ಹೀಗೆ ನಿರಾಭರಣಳಾಗಿ ನಿಂತಿರಲು ಕಾರಣವೇನು?" ಎಂದು ಕೇಳಲು ಸುಕನ್ಯೆಯು ವಿನೀತೆಯಾಗಿ—"ಮಹಾತ್ಮರೇ! ನಾನು ಶರ್ಯಾತಿಮಹಾರಾಜನ ಮಗಳಾದ ಸುಕನ್ಯೆಯೆಂಬವಳು. ಸುಪ್ರಸಿದ್ಧನೂ ತೇಜಸ್ವಿಯೂ ಮಹಾತಪೋಧನನೂ ಆದ ಚ್ಯವನ ಮಹರ್ಷಿಯೇ ನನ್ನ ಪತಿ. ತಪೋ ನಿರತನೂ ವೃದ್ಧನೂ ನನ್ನ ಅಪರಾಧದಿಂದ ಅಂಧನಾದವನೂ ಆಗಿರುವ ನನ್ನ ಪತಿಯು ಆಶ್ರಮದ ಒಳಗಿರುವುದರಿಂದ ಆತನೇ ಬಂದು ಅತಿಥಿಗಳಾಗಿರುವ ತಮ್ಮನ್ನು ಸತ್ಕರಿಸಲಾರದಿರುವನು. ದಯೆಯಿಟ್ಟು ತಾವೇ ಆತನ ಬಳಿಗೆ ಬಂದು ಆತನ ಸಮ್ಮುಖದಲ್ಲಿಯೇ ಅತಿಥಿಸತ್ಕಾರವನ್ನು ಪಡೆಯಬೇಕೆಂದು ಕೋರುವೆನು" ಎಂದಳು.

ಅಶ್ವಿನೀದೇವತೆಗಳು ಕುತೂಹಲದಿಂದ—"ಎಲೈ, ಶೋಭನೆ! ರಾಜಕುಮಾರಿಯೂ ಸುಕುಮಾರಾಂಗಿಯೂ ಆದ ನೀನು ಇಂತಹ ಜರಠನೂ ಅಂಧನೂ ಆದ ತಪಸ್ವಿಯಿಂದ ಆವ ಸುಖವನ್ನು ಪಡೆಯುವೆ? ನಿನ್ನ ತಂದೆ ನಿನ್ನನ್ನು ಈ ವೃದ್ಧನಿಗೆ ಕೊಡಲು ಹೇಗೆ ಸಮ್ಮತಿಸಿದನು? ಈ ತಪಸ್ವಿಯು ತಾನೆ ನಿನ್ನನ್ನು ಏಕೆ ಮದುವೆಯಾದನು? ದೇವದುರ್ಲಭಳಾದ ನೀನು ಹೀಗೆ ತಪೋವೃತ್ತಿಯಿಂದ, ನಿರಾಭರಣೆಯಾಗಿ ಸುಖ ಭೋಗ, ವಿಭವಗಳಿಲ್ಲದೆ ಇರುವುದು ಸರಿಯಾಗಿ ಕಾಣು

ವುದಿಲ್ಲ. ನೋಡು, ನಾವು ದೇವತೆಗಳು, ದೇವತೆಗಳಿಗೂ ವೈದ್ಯರು, ನಮಗೆ ಅಸಾಧ್ಯವಾದ ಕೆಲಸವಾವುದೂ ಇಲ್ಲ. ನೀನು ಅಪೇಕ್ಷಿಸಿದರೆ ನಿನ್ನ ಪತಿಯ ಅಂಧತೆಯನ್ನು ಹೋಗಲಾಡಿಸುವುದಲ್ಲದೆ ಯೌವ್ವನ ಸಂಪನ್ನನಾಗಿ ಮಾಡಬೇಕೆಂದರೂ ಮಾಡುವೆವು. ಆದರೆ, ನೀವು ನಮ್ಮ ಈರ್ವರಲ್ಲಿ ಯಾರನ್ನಾದರೂ ವರಿಸಬೇಕು! ಈ ಸಂಗತಿಯನ್ನು ನಿನ್ನ ಪತಿಗೆ ತಿಳಿಸಿ ಬಾ" ಎನ್ನಲು ಸುಕನ್ಯೆಯು—"ದಯಾಳುಗಳೇ! ನನ್ನ ಸ್ವಾಮಿಗೆ ನನ್ನಿಂದಲೇ ಕಣ್ಣಿಗೆ ಬಾಧೆಯುಂಟಾಯಿತೆಂದು ನಾನು ದುಃಖಿಸುವೆನಲ್ಲದೆ ನನಗೆ ಮತ್ತಾವ ಕ್ಲೇಶವೂ ಇಲ್ಲ. ಆ ಮಹಾನುಭಾವನ ಸೇವೆಯೊಂದರಿಂದಲೇ ನಾನು ತೃಪ್ತಳಾಗಿರುವೆನು. ದಯೆಯಿಟ್ಟು ಕ್ಷಮಿಸಿ ನನ್ನಲ್ಲಿ ನೀವು ಅನ್ಯಥಾ ಬುದ್ಧಿಯನ್ನಿಡದೆ, ಅನುಗ್ರಹಿಸಿ ನನ್ನ ಸ್ವಾಮಿಗೆ ನೀವು ಹೇಳಿದಂತೆ ವರಗಳನ್ನು ದಯೆಪಾಲಿಸಿದರೆ ತಪೋಧನನಾದ ಆತನು ನಿಮ್ಮ ಮನಸ್ಸಂತೋಷಪಡಿಸದಿರಲಾರನು." ಎಂದು ಹೇಳಿ ಅಶ್ವಿನೀಕುಮಾರರ ಅಭಿಪ್ರಾಯವನ್ನು ತನ್ನ ಪತಿಗೆ ತಿಳಿಸಿ, ಆತನು—"ಹಾಗೆಯೇ ಮಾಡಿರಿ" ಎಂದು ಹೇಳಿ ಕಳುಹಲು ಅದನ್ನು ಅವರಿಗೆ ತಿಳುಹಿದಳು.

ಬಳಿಕ ಅಶ್ವಿನೀ ಕುಮಾರರು ಸುಕನ್ಯೆಯನ್ನು ಕುರಿತು "ಶೋಭನಾಂಗಿ! ನಿನ್ನ ಪತಿಯನ್ನು ಕರೆದುಕೊಂಡು ಬಂದು ಈ ಅಮೃತ ಸರಸ್ಸಿನಲ್ಲಿ ಪ್ರವೇಶಿಸುವಂತೆ ಮಾಡು" ಎನ್ನಲು ಅವಳು ಅದರಂತೆಯೇ ಚ್ಯವನನನ್ನು ಅಶ್ವಿನೀ ಕುಮಾರರು ತೋರಿಸಿದ ಪುಷ್ಕರಣಿಯಲ್ಲಿ ಪ್ರವೇಶಮಾಡಿಸಿದಳು. ಅಶ್ವಿನೀ ಕುಮಾರರೂ ಸುಕನ್ಯೆಯನ್ನು ಬಿಟ್ಟು ಚ್ಯವನನೊಡನೆ ತಾವಿಬ್ಬರೂ ಅದೇ ಪುಷ್ಕರಣಿಯಲ್ಲಿ ಪ್ರವೇಶಿಸಿದರು.

ಸುಕನ್ಯೆಯು ದೇವವೈದ್ಯರು ಪತಿಯನ್ನು ಜೊತೆಗೊಂಡು ಸರಸ್ಸಿನಲ್ಲಿ ಅದೃಶ್ಯರಾಗಲು, ಚಿಂತಿಸುತ್ತ ತನ್ನ ಸ್ವಾಮಿಗೆ ಲೇಸಾಗುವಂತೆ ಅನುಗ್ರಹಿಸೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತಿದ್ದಳು. ಸ್ವಲ್ಪ ಹೊತ್ತಿನಮೇಲೆ ಅದೇಪುಷ್ಕರಣಿಯಿಂದ ಅಶ್ವಿನೀಕುಮಾರರು ಅವರಂತೆಯೇ ನವಯೌವ್ವನಸಂಪನ್ನನೂ ಸುಕುಮಾರಾಂಗನೂ ದಿವ್ಯಾಭರಣ ವಸ್ತ್ರವಿಭೂಷಿತನೂ ಆದ ಚ್ಯವನನೊಡನೆ ಬರಲು ನೋಡಿ ಸುಕನ್ಯೆ ದಿಗ್ಭ್ರಮೆಹೊಂದಿ ಸುಮ್ಮನೆ ನಿಂತಳು. ಅಶ್ವಿನೀಕುಮಾರರು, ನಸುನಗುತ್ತ,

“ ಸುಕುಮಾರಾಂಗಿಯೇ ! ಹೀಗೆ ಸ್ತಂಭಿತೆಯಾಗಿ ನಿಂತೆಯೇಕೆ ? ನಮ್ಮ ಮೂವರಲ್ಲಿ ನೀನಾರನ್ನು ನಿನ್ನ ಪತಿಯಾಗಿ ಆರಿಸುವಿಯೋ ಆರಿಸಿ ವರಿಸು ” ಎಂದರು. ಸುಕನ್ಯೆಯು ಭಗವಂತನನ್ನು ಭಕ್ತಿಯಿಂದ ವಂದಿಸಿ ಪತಿಯನ್ನು ಸ್ಮರಿಸುತ್ತಾ ಅಶ್ವಿನೀಕುಮಾರರಿಗೆ ಕೈಮುಗಿದು, “ಮಹಾನುಭಾವರೇ ! ನೀವು ದೇವತೆಗಳು, ಕಲ್ಮಷವು ನಿಮ್ಮಲ್ಲಿ ಲೇಶವೂ ಇರಬಾರದು. ನಾನು ಕೇವಲ ಪತಿಪ್ರಾಣೆಯಾದ ಮಾನವಸ್ತ್ರೀ! ಮಹಾನುಭಾವರಾದ ನೀವು ನನಗೆ ಪಿತೃಸಮಾನರಾದುದರಿಂದ ನನ್ನಲ್ಲಿ ದಯೆಯನ್ನು ತೋರಿಸಿ, ನನಗೆ ಪತಿಭಿಕ್ಷೆಯನ್ನಿತ್ತು ಸಂತೋಷಪಡಿಸಬೇಕು. ನಿಮ್ಮ ಮೂವರಲ್ಲಿ ನನ್ನ ಪತಿಯನ್ನು ನಾನು ಕಂಡುಹಿಡಿವಂತೆ ಅನುಗ್ರಹಿಸುವ ಕೆಲಸವೂ ನಿಮ್ಮದೇ. ಸರಿ ” ಹೀಗೆ ಹೇಳಿ ನಮಸ್ಕರಿಸಿದಳು. ಅಶ್ವಿನೀಕುಮಾರರು ಸಂತುಷ್ಟರಾಗಿ ಚ್ಯವನನನ್ನು ಮುಂದೆ ಬಿಟ್ಟುತಾವು ಹಿಂದಾದರು. ಸುಕನ್ಯೆಯು ಪತಿಯ ಪಾದಗಳಿಗೆರಗಿ ಆನಂದಭಾಷ್ಪವನ್ನು ಸುರಿಸುತ್ತಿರಲು ಚ್ಯವನನೂ ಸಾಧ್ವೀಕುಲಶಿರೋಮಣಿಯಾದ ಪತ್ನಿಯನ್ನು ಪ್ರೇಮದಿಂದ ಆಲಿಂಗಿಸಿ, ಆದರಿಸಿ, ಅಶ್ವಿನೀಕುಮಾರರನ್ನು ಸನ್ಮಾನಿಸಿ, ಅವರನ್ನು ಕುರಿತು,—“ ಎಲೈ ದೇವವೈದ್ಯರೇ! ನಾನು ನನ್ನ ಮಾವನಾದ ಶರ್ಯಾತಿರಾಯನಿಂದ ಬಂದು ಯಜ್ಞವನ್ನು ಮಾಡಿಸಿ, ಆ ಮೂಲಕವಾಗಿ ನಿಮಗೆ ಈ ವರೆಗೆ ಸಲ್ಲದಿರುವ ಸೋಮಪಾನವನ್ನು ಮಾಡಿಸುವೆನು ಇನ್ನು ಮುಂದೆ ನಿಮಗೂ ಸೋಮಪಾನವು ಸಲ್ಲುವಂತೆ ಮಾಡುವೆನು ” ಎಂದು ವಚನವಿತ್ತು ಕಳುಹಿಸಿಕೊಟ್ಟನು.

ಶರ್ಯಾತಿಯು ಮಗಳನ್ನು ನೋಡಬೇಕೆಂದು ಪರಿವಾರಸಮೇತನಾಗಿ ಬಂದು ಸೇರಿದನು. ವೃದ್ಧನೂ ಅಂಧನೂ ಆದ ಚ್ಯವನನು ದೃಷ್ಟಿಗೋಚರನಾಗದೆ ಯೌವನಸಂಪನ್ನನೂ ಸುಕುಮಾರಗಾತ್ರನೂ ತೇಜಸ್ವಿಯೂ ಆದ ಪುರುಷನೊಡನೆ ಸುಕನ್ಯೆಯು ಸರಸದಲ್ಲಿದ್ದುದನ್ನು ಕಂಡು ಕೆರಳಿದನು. ತಂದೆಯು ಬಂದುದನ್ನು ದೂರದಿಂದಲೇ ಕಂಡು ಸುಕನ್ಯೆಯು ಭಯಭಕ್ತಿಯಿಂದ ಬಂದು ನಮಸ್ಕರಿಸಲು, ರಾಯನು ತಿರಸ್ಕಾರದಿಂದ—“ ದೂರ ಸಾರು ! ಪಾಪಿಷ್ಠೆ ! ಮಹಾನುಭಾವನೂ ತೇಜಸ್ವಿಯೂ ಆದ ನಿನ್ನ ಪತಿಯೆಲ್ಲಿ ? ವೃದ್ಧನೂ ಅಂಧನೂ ಆದವ

ನೆಂದು ಅಲ್ಲಗಳೆದು ಈ ಪರಪುರುಷನಲ್ಲಿ ಸರಸವಾಡಲು ನಿನಗೆ ಮನಸ್ಸು ಹೇಗೆ ಸಮ್ಮತಿಸಿತು? ನನ್ನ ಸುತೆಯಾಗಿ ನೀನಿಂತಹ ಹೊಲ ಗೆಲಸವನ್ನು ಮಾಡಿದೆಯಾ ?" ಎಂದು ಗದರಿಸಿದನು.

ಸುಕನ್ಯೆಯು ಪತಿಯಮುಖವನ್ನೊಮ್ಮೆ ನೋಡಿ ಮತ್ತೆ ಪಿತನ ಕಡೆಗೆ ತಿರುಗಿ ವಿನೀತೆಯಾಗಿ, "ಪೂಜ್ಯ ಜನಕನೇ! ಶಾಂತನಾಗು! ಸಮಾಧಾನದಿಂದ ಅವಧರಿಸು! ನಿನ್ನ ಮಗಳು, ದುಶ್ಚಾರಿಣಿಯಲ್ಲ. ಅವಿಶ್ವಾಸಿನಿ ಎಂದು ಎಣಿಸಬೇಡ. ಸ್ವಾಮಿಯನ್ನು ವಂಚಿಸುವ ಘಾತಕ ತನವು ಇವಳಿಗೆ ಗೊತ್ತಿಲ್ಲ. ಪಿತನೇ! ಈತನೇ ನಿನ್ನ ಅಳಿಯನೂ ಭೃಗುವಂಶೋದ್ಭವನೂ ಮಹಾ ತಪೋಧನನೂ ಆದ ಚ್ಯವನಮಹ ರ್ಷಿಯು! ಎಂದು ಹೇಳುತ್ತಿರುವಾಗಲೇ ಚ್ಯವನನು ಬಂದು ಮಾವ ನನ್ನು ಮರ್ಯಾದೆಯಿಂದ ಕಂಡು, ತಾನೇ ಚ್ಯವನನೆಂದೂ ಸುಕನ್ಯೆ ಸಾಧ್ವಿ-ನಿರ್ದೋಷಿ, ಎಂದೂ ಅವಳ ಪಾತಿವ್ರತ್ಯ ಸದ್ವರ್ತನ ಸದ್ಗುಣ ಗಳಿಂದಲೇ ಸುಪ್ರಸ್ಥರಾದ ಅಶ್ವಿನೀ ಕುಮಾರರು ತನ್ನನ್ನು ಹೀಗೆ ಪರಿವರ್ತನಗೊಳಿಸಿದರೆಂದೂ ವಿಸ್ತರಿಸಿದನು.

ಶರ್ಯಾತಿಯ ಸಂತೋಷಕ್ಕೆ ಮೇರೆಯೇ ಇಲ್ಲವಾಯಿತು. ಮಗಳ ತಲೆಯನ್ನು ನೇವರಿಸಿ, ಅಳಿಯನನ್ನು ಆದರಿಸಿ ಮರ್ಯಾದೆಯಿಂದ ಇಬ್ಬರನ್ನೂ ಜೊತೆಗೊಂಡು ತನ್ನ ರಾಜ್ಯಕ್ಕೆ ಕರತಂದು ಉತ್ಸವಾದಿ ಗಳನ್ನು ನಡೆಯಿಸಿದನು. ಸ್ವಲ್ಪ ದಿನಗಳ ಮೇಲೆ ಚ್ಯವನನು ಶರ್ಯಾತಿ ಯನ್ನು ಯಜ್ಞವನ್ನು ಮಾಡಲು ಸಮ್ಮತಿಗೊಳಿಸಲು ಶರ್ಯಾತಿಯು ಅಳಿ ಯನನ್ನೇ ಪುರೋಹಿತನನ್ನಾಗಿ ಆರಿಸಿ, ಯಜ್ಞವನ್ನಾರಂಭಿಸಿದನು. ಇಂದ್ರನು ಚ್ಯವನನನ್ನು ಕುರಿತು,—"ಎಲೈ, ತಪೋಧನನೇ! ನೀನೀ ಸಾಹಸವನ್ನು ಬಿಡು! ಅಶ್ವಿನೀ ಕುಮಾರರು ಸೋಮಪಾನಕ್ಕೆ ಅರ್ಹ ರಲ್ಲ. ವೃಥಾ ನ್ಯಾಯಸಮ್ಮತವಲ್ಲದಕಾರ್ಯದಲ್ಲಿ ಪ್ರವರ್ತಿಸಬೇಡ, ಇದರಿಂದ ಸಿಧ್ಧಿಯಾಗದು" ಎಂದನು. ಚ್ಯವನನು, ನಸುನಗುತ್ತಾ, "ದೇವೇಂದ್ರ! ನೀನಾಡುವಮಾತು ನ್ಯಾಯಸಮ್ಮತವಲ್ಲವೇ ಹೊರತು ನನ್ನ ಪ್ರಯತ್ನವು ನ್ಯಾಯವಲ್ಲದುದಲ್ಲ ನಿಮ್ಮಂತೆಯೇ ಅವರು ದೇವತೆ ಗಳೇ ಅಲ್ಲವೆ?" ಇಂದ್ರನು—"ಮಹರ್ಷಿ? ಅವರು ದೇವತೆಗಳಾ ದರೂ, ದೇವತೆಗಳಿಗೆಲ್ಲಾ ಚಿಕಿತ್ಸೆಮಾಡುವಂಥ ವೈದ್ಯರಾದುದರಿಂದ

ಅವರು ನಮ್ಮೊಡನೆ ಸೋಮಪಾನಮಾಡಲು ಅರ್ಹರಲ್ಲ". ಚ್ಯವನನು—"ಎಲೈ ಸಂಕ್ರಂದನ! ದೇವತೆಗಳಿಗೆ ಸೇರಿದವರೂ ರೂಪಗುಣ ವಿಭವ ಸಮನ್ವಿತರೂ ದೇವತೆಗಳೆಲ್ಲರ ಸುಖಸಮಾಧಾನಕ್ಕೂ ಆಧಾರ ಸ್ವರೂಪರೂ ಆಗಿರುವ ಅವರೀರ್ವರನ್ನೂ ಸೋಮಪಾನಕ್ಕೆ ಅನರ್ಹರೆಂದು ಹೇಳುವುದು ನಿನಗೆ ತಕ್ಕುದಲ್ಲ. ಅವರು ಅರ್ಹರಾದುದರಿಂದಲೇ ನೀನದನ್ನು ಆಗಮಾಡಿಸುವುದು" ಎಂದನು. ಇಂದ್ರನು ಕೋಪಗೊಂಡು—ಹಾಗಾದರೆ ನೀನು ಹೇಗೆ ಕೊಡಿಸುವೆಯೋ ನೋಡುವೆನು? ಎಂದನು. ಯಜ್ಞವು ಸಾಂಗವಾಗಿ ನಡೆಯಿತು. ದೇವತೆಗಳಿಗೆ ಹವಿರ್ಭಾಗವನ್ನು ಕೊಡುವಾಗ ಅಶ್ವಿನೀಕುಮಾರರನ್ನು ಆಹ್ವಾನಿಸಲು ಇಂದ್ರನು ಘನಘರ್ಜನೆಮಾಡಿ,—"ಬಿಡು, ಈ ಪ್ರಯತ್ನವನ್ನು ಬಿಡು, ಇಲ್ಲವಾದರೆ ದೇವತೆಗಳ ಅಭಿಮಾನರಕ್ಷಣೆಗಾಗಿ ನಿನ್ನನ್ನು ನಾನೀ ವಜ್ರಾಯುಧದಿಂದ ನಿಗ್ರಹಿಸುವೆನು" ಎಂದು ಹೇಳಿ ವಜ್ರಾಯುಧವನ್ನೆತ್ತಿ ಚ್ಯವನನನ್ನು ಪ್ರಹರಿಸಲು ಕೈ ಮೇಲಕ್ಕೆತ್ತಿದನು. ಅಲ್ಲಿದ್ದವರೆಲ್ಲರೂ ನಡುಗಿದರು. ಚ್ಯವನನು ಇಂದ್ರನನ್ನು ನೋಡಿ,—"ಹೂಂ ನಿಲ್ಲು" ಎಂದು ಹೂಂಕರಿಸಿದಮಾತ್ರದಿಂದ ಇಂದ್ರನು ಎತ್ತಿದ ಕೈ ವಜ್ರಸಹಿತವಾಗಿ ಹಾಗೆಯೇ ಸ್ತಬ್ಧವಾಯಿತು. ಇಂದ್ರನು ಕಳೆಗುಂದಿದನು. ಚ್ಯವನನ ಆಗ್ರಹದಿಂದ ಇಂದ್ರನನ್ನು ನಿಗ್ರಹಿಸಲು ಅಗ್ನಿಮುಖದಿಂದ ಮದನೆಂಬ ಅಸುರನು ಹುಟ್ಟಿ ಇಂದ್ರನನ್ನು ಹಿಂಸಿಸಲು ಬಂದನು. ಆಗ ಇಂದ್ರನು ಗರ್ವವಳಿದುಹೋಗಿ, ಅಭಿಮಾನವುಡುಗಿ ಪಶ್ಚಾತ್ತಾಪವುಂಟಾಗಿ ಚ್ಯವನನನ್ನು ಕುರಿತು ದೀನವಾಣಿಯಿಂದ,—"ಮಹಾತ್ಮಾ! ಕ್ಷಮಿಸು! ನಾನು ಜಿತನಾದೆನು, ಸುಪ್ರೀತನಾದೆನು. ನಿನ್ನ ಮಹಾತ್ಮೆಯು ಜಗತ್ಪ್ರಸಿದ್ಧವಾಗಲೆಂದು ನಾನು ಮಾಡಿದ ಅಪಚಾರವನ್ನು ಮನ್ನಿಸು, ಸತ್ಯಸಂಕಲ್ಪ ನಿನ್ನ ಪ್ರಯತ್ನವು ನಿಷ್ಫಲವಾಗುವುದಿಲ್ಲ. ಇದು ಮೊದಲು ಅಶ್ವಿನೀದೇವತೆಗಳೂ ದೇವಯೋಗ್ಯವಾದ ಸೋಮಪಾನವನ್ನು ಸ್ವೀಕರಿಸಲು ಅರ್ಹರಾಗುವರು. ಸಂತೋಷದಿಂದ ಕುಡಿಸುವೆನು. ಶಾಂತನಾಗಿ ಈ ಮದಾಸುರನನ್ನು ನಿಗ್ರಹಿಸು" ಎಂದನು. ಚ್ಯವನನು ಇಂದ್ರನನ್ನು ಮನ್ನಿಸಿ, ಇಂದ್ರನಿಗೆ ಹವಿರ್ಭಾಗವನ್ನಿತ್ತು ದೇವತೆಗಳೊಡನೆ ಅಶ್ವಿನೀದೇವತೆಗಳಿಗೂ

ಸೋಮಪಾನಮಾಡಿಸಿ, ಯಜ್ಞವನ್ನು ಸಾಂಗಗೊಳಿಸಿದನು. ಮದಾಸುರನೂ ಚ್ಯವನನ ಆಜ್ಞೆಯನ್ನು ಪಡೆದು ತನ್ನ ನೆಲೆಯನ್ನು ಹುಡುಕುತ್ತಾ ಹೊರಟುಹೋದನು. ಶರ್ಯಾತಿಯು ಮಹಾ ತಪೋಧನನಾದ ಅಳಿಯನ ಪೌರೋಹಿತ್ಯದಿಂದ ಯಜ್ಞವನ್ನಾಚರಿಸಿ, ಇಂದ್ರಾದಿಗಳಿಗೆ ಪ್ರತ್ಯಕ್ಷವಾಗಿ ಹವಿಸ್ಸನ್ನೊಪ್ಪಿಸಿ ದೈವಾನುಗ್ರಹಕ್ಕೆ ಪಾತ್ರನೆನ್ನಿಸಿದನು. ಸುಕನ್ಯೆಯು ತನ್ನ ಪತಿಯ ಪ್ರಭಾವಕ್ಕೆ ಎಷ್ಟು ಸಂತೋಷಪಟ್ಟಳೆಂದಿಲ್ಲಿ ಹೇಳಬೇಕೇ? ಸುಕನ್ಯೆಯರೆನಿಸಲು ಆಸೆಪಡುವ ಹುಡುಗಿಯರೇ? ನೀವೇನೆನ್ನುವಿರಿ? ಮೊದಲು ನಿಮ್ಮ ಮನಸ್ಸಿಗೆ, ಸುಕನ್ಯೆ ಮುದುಕನನ್ನು ಮದುವೆಯಾದಳೆಂಬ ಹಾಸ್ಯವು ತಲೆದೋರಿರಬಹುದಲ್ಲವೆ? ಏಕೆಂದರೆ, ನೀವೇ ಹೇಳಿರಿ, ನಿಮ್ಮ ಸಂಗಾತಿಯರಲ್ಲಿ ಯಾರಿಗಾದರೂ ಹತ್ತು ಹನ್ನೆರಡು ವರ್ಷ ಹಿರಿಯನಾದ ಗಂಡನು ಬಂದರೆ,—"ಓರಿಗೆ ಗಂಡನಲ್ಲ, ತಲೆನರೆತ ಮುದಿಗಂಡ, ಈ ಮುದಿಯನಿಗೆ ಹೇಗೆ ಮದುವೆಯಾದೆ? ಹಣಕ್ಕಾಸೆಪಟ್ಟು ಕೊಟ್ಟರೇನು?" ಇತ್ಯಾದಿ ನೀವು ಹಾಸ್ಯಮಾಡುತ್ತಿರುವಿರಿ! ಅಹುದೋ ಅಲ್ಲವೋ ಹೇಳಿರಿ? ಹಾಗೆ ನೀವು ಹಾಸ್ಯಮಾಡಿದಾಗ, ತಾಯಿತಂದೆಯರ ಮಾತನ್ನು ಮೀರದೆ ಅವರ ಅಭಿಮತವೇ ತಮ್ಮ ಅಭಿಮತವೆಂದೊಪ್ಪಿಕೊಂಡಿದ್ದ ಆ ನಿಮ್ಮ ಸಂಗಾತಿಯರ ಮನಸ್ಸು ನಿಮ್ಮ ಹಾಸ್ಯಕುಚೇಷ್ಟೆಗಳಿಂದ ಎಷ್ಟು ನೋಯಬಹುದು? ಅದರಿಂದ ಅವರ ಮನಸ್ಸಿನ ದೃಢಸಂಕಲ್ಪವು (ತಾಯಿತಂದೆಯರು ತಮ್ಮ ಹಿತಕ್ಕಾಗಿಯೇ ಮಾಡಿದರೆಂಬ ನಿಶ್ಚಯವು) ಹೇಗೆ ಬದಲಾಯಿಸಬಹುದು? ಅದರಿಂದ ಅವರು ತಮ್ಮ ತಾಯಿತಂದೆಯರ ವಿಷಯವಾಗಿ ಎಷ್ಟು ಬೇಗ ಸಿಟ್ಟಾಗುವರು? ಅವರ ವಿಷಯವಾಗಿ ಒಂದೆರಡು ಬಿರಿನುಡಿಯಾಡುವರು, ಇದೆಲ್ಲವನ್ನೂ ತಿಳಿದು ನೋಡಿರಿ. ಇಷ್ಟಾಯಿತೆಂದರೆ ಆ ಹುಡುಗಿಯರು ಗಂಡಂದಿರಲ್ಲಿ ನಿಶ್ಚಲವಾದ ವಿಶ್ವಾಸ, ಭಕ್ತಿ, ಪ್ರೇಮ ಆದರಗಳುಳ್ಳವರಾಗಿ ವರ್ತಿಸುವದುಂಟೆ? ಅವುಗಳಿಲ್ಲವೆಂದರೆ, ಅವರನ್ನು ಕೈ ಹಿಡಿದ ಅವರ ಪತಿಗಳಿಗೂ ಹೆತ್ತ ತಾಯಿತಂದೆಗಳಿಗೂ ಎಷ್ಟುಮಟ್ಟಿಗೆ ಸುಖಸಮಾಧಾನ, ಸತ್ಕೀರ್ತಿಗಳುಂಟಾಗಬಹುದು! ವಿಚಾರಮಾಡಿರಿ.

ಸುಕನ್ಯೆಯು ಹಾಗೆಂದೂ ಮಾಡಿದವಳಲ್ಲ. ಅವಳು ತನ್ನ ಸಖೀಜನರ ಪರಿಹಾಸ್ಯವಾಕ್ಯಗಳಿಗೆ ಎಡೆಗೊಟ್ಟವಳೂ ಅಲ್ಲ. ಅವಳಿಗೆ ಬೇಕಾಗಿದ್ದುದು, ತಾಯಿತಂದೆಯರ, ತನ್ನ ಜನ್ಮದೇಶದ, ರಾಷ್ಟ್ರಪ್ರಜೆಗಳ ಸುಖಸಮಾಧಾನವೇ ! ಆದುದರಿಂದಲೇ ಅವುಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ತನ್ನ ಪಿತನ ಅಭಿಪ್ರಾಯದಂತೆ,—ಇಹ ಲೋಕದ ನಶ್ವರಸುಖವೈಭವಗಳನ್ನು ನಿರಾಕರಿಸಿ, ವೃದ್ಧತಪಸ್ವಿಯ ಭಾರ್ಯೆಯಾಗಲು ಸಂತೋಷದಿಂದ ಒಪ್ಪಿದಳು. ಅವಳು ಒಪ್ಪಿದುದ ರಿಂದಲೇ ಚ್ಯವನನ ಕೋಪವೂ ಶಾಂತವಾಯಿತು ; ರಾಜನೂ ಆತನ ಅನುಗ್ರಹಕ್ಕೆ ಪಾತ್ರನಾದನು. ಆತನ ಪರಿವಾರಕ್ಕೆ ಒದಗಿದ ವಿಪತ್ತೂ ಪರಿಹಾರವಾಯಿತು. ಅವಳು "ನಾನು ಇವನನ್ನು ಒಲ್ಲೆ" ನೆಂದು ಹೇಳಿದ್ದರೆ ರಾಜನು ಬಲಾತ್ಕಾರದಿಂದ ತಪಸ್ವಿಗೆ ಧಾರೆಯೆರೆದು ಕೊಡು ತ್ತಿದ್ದನೇ? ಅಥವಾ ಇಷ್ಟಪಡದ ಕನ್ಯೆಯನ್ನು ಆ ತಪಸ್ವಿಯಾದರೂ ಕೈ ಹಿಡಿಯಲೊಪ್ಪುತ್ತಿದ್ದನೋ? ಎರಡೂ ಆಗುತ್ತಿರಲಿಲ್ಲ. ಎಂದ ಮೇಲೆ ಸುಕನ್ಯೆಯ ತಂದೆಗೂ ಅವನ ಪರಿವಾರಕ್ಕೂ ಆಗಿದ್ದ ಆಪತ್ತು ಪರಿಹಾರವೂ ಆಗುತ್ತಿರಲಿಲ್ಲ. ಅವರೆಲ್ಲರನ್ನೂ ಆಪತ್ತಿಗೆ ಗುರಿಮಾಡಿ ಸುಕನ್ಯೆಯು ಹೊಂದಬಹುದಾಗಿದ್ದ ಸುಖವು ತಾನೇ ಆವು ದಿತ್ತು ? ಜನ್ಮದಾತೃವಾದ ತಂದೆಯ ಮನಸ್ಸಂತೋಷಪಡಿಸುವುದಕ್ಕೂ ಮಿಗಿಲಾದ ಸುಖಸಂಗತಿ, ಅವಳಿಗೆ ಬೇಕಾಗಿ ತೋರಲಿಲ್ಲವೆಂದೇ ಅವಳು ಒಂದೇಬಗೆಯಿಂದ, ಪಿತನು ತನ್ನನ್ನು ಯಾವಾತನಿಗೆ ಒಪ್ಪಿಸಿ ದನೋ ಆತನನ್ನೇ ಪರದೈವನೆಂದೂ ಆತನನ್ನು ನಿರಂತರವೂ ಸೇವಿ ಸುವುದೇ ತನಗೆ ಶ್ರೇಯಸ್ಕರವೆಂದೂ ಭಾವಿಸಿದಳು. ಅವಳ ಆ ಅಸಾ ಧಾರಣ ಪಿತೃಭಕ್ತಿ, ದೇಶಪ್ರೇಮ, ಪ್ರಜಾವಾತ್ಸಲ್ಯಗಳೂ ಅವಳ ನಿರುಪಮಾನವಾದ ಆ ಮನೋಧಾರ್ಢ್ಯವೂ ಜಗತ್ತಿಗೆ ಅನುಕರಣೀ ಯವು. ಅವಳ ಅಂಥ ದೈವಿಕ ಗುಣಗಳಿಗೆ ಅನುಗುಣವಾಗಿಯೇ ಅವ ಳು ಉತ್ತಮೋತ್ತಮವಾದ ಸುಖ, ಸೌಭಾಗ್ಯ-ವಿಭವಂಗಳನ್ನು ಪಡೆದವ ಳಾದಳು. ಅಂತಹ ಲೋಕೋತ್ತರ ಗುಣವತಿಯಾದ ಭಾರ್ಯೆಯನ್ನು ಪಡೆದುದರಿಂದ ಚ್ಯವನನೂ ವಿವರಿಸಲಳವಲ್ಲದ ಸುಖ-ಸಮಾಧಾನ-ಕೀರ್ತಿ ವೈಭವಂಗಳಿಂದ ಪ್ರಕಾಶಿಸಿದನು. ಚ್ಯವನನು ಮಹಾತ್ಮನೂ ತಪೋ

ಧನನೂ ಆಗಿದ್ದರೂ ಸುಕನ್ಯೆಯು ನಾಡಾಡಿಗಳಾದ ಮೂರ್ಖಸ್ತ್ರೀಯ ರಂತಾಗಿದ್ದರೆ ಆತನ ಕೀರ್ತಿಪ್ರಭಾವಗಳು ದಿಕ್ಪ್ರಕಾಶ ಹೊಂದಲು ಅವ ಕಾಶವಿರುತ್ತಿರಲಿಲ್ಲ. ಸುಖಸಂತೋಷಗಳೂ ಇರುತ್ತಿರಲಿಲ್ಲ. ಇದಕ್ಕೆ ದೃಷ್ಟಾಂತವು ಬೇಕೆಂದರೆ ನಿಮ್ಮ ಸಂಗಾತಿಯರಲ್ಲೇ ನೋಡಿರಿ, ತಾಯಿ ತಂದೆಗಳಿಗೂ ದುಃಖವನ್ನುಂಟುಮಾಡಿ, ತಮ್ಮ ತಮ್ಮ ಪತಿಗಳಿಗೂ ಕಿರು ಕುಳವನ್ನಿತ್ತು ತಾವೂ ಅತೃಪ್ತಿ, ಅಸುಖ ಅಸಮಾಧಾನಗಳಿಂದ ಕೆಡು ತ್ತಿರುವ ಹಟಮಾರಿಗಳಾದ ಹೆಂಗಸರು ಎಷ್ಟೋ ಮಂದಿ ಇರಬಹುದು. ಅಂತಹವರಿಗೆ ಪತಿಯು ವೃದ್ಧನಿರಲಿ, ಯುವಕನೇ ಆಗಿರಲಿ, ಹೇಗಿದ್ದ ರೇನು ? ಅವರ ಹಟ, ಶಠತೆಗಳಿಂದ ಅವರಿಗೂ ಸುಖವಿಲ್ಲ, ಕೈಹಿಡಿದ ವರಿಗೂ ಸುಖವಿಲ್ಲ. ಹೆತ್ತವರಿಗೆಂತೂ ಹೇಳುವಂತೆಯೇ ಇಲ್ಲ. ಎಂದ ಮೇಲೆ ನಿಮಗೆ ಮಾರ್ಗದರ್ಶಕರಾರು ? ತಂಗಿಯರೇ ? ಇಹಪರಗಳೆ ರಡರಲ್ಲಿಯೂ ಸುಖವನ್ನುಂಟುಮಾಡುವಂತೆ ಸನ್ಮಾರ್ಗದಲ್ಲಿ ನಡೆಯಿ ಸುವ ಸುಕನ್ಯೆಯು ನಿಮ್ಮ ಮಾರ್ಗದರ್ಶಿನಿಯೋ ಮೇಲೆ ಹೇಳಿದಂತ ಹರೋ ? (ಸುಕನ್ಯೆಯಂತೆ ತಮ್ಮ ದೇಶಕ್ಕೂ ಜನ್ಮದಾತೃಗಳಿಗೂ ಸುಖ ವನ್ನುಂಟುಮಾಡಲು ತಮ್ಮ ಆತ್ಮಯಜ್ಞವನ್ನೇ ಮಾಡಿಕೊಂಡಿರುವ ಕನ್ಯಾಮಣಿಯರು ನಮ್ಮ ಚಾರಿತ್ರಿಕಕೃತಯುಗದಲ್ಲಿ ರಾಜಪುತ್ರಸ್ಥಾನದಲ್ಲಿ ಎಷ್ಟೋ ಮಂದಿ ಉದಯರಾಗಿದ್ದರೆಂಬುದನ್ನು ನೀವು ರಾಜಪುತ್ರ ಸ್ಥಾನದ ಇತಿಹಾಸವನ್ನು ಸಮಾಲೋಚಿಸಿದರೆ ಗೊತ್ತಾಗುವುದು.) ಹೇಳಿರಿ. ನೀವು ಸುಕನ್ಯೆಯರಾಗಲೆಳಸುವವರೋ ? ಸ್ವಸುಖವೇ ದೊ ಡ್ಡದೆಂದು ಭಾವಿಸಿ ಎಲ್ಲರನ್ನೂ ಕಿರುಕುಳಕ್ಕೀಡುಮಾಡುವಂತಹ ಕಿಡಿ ಗೇಡಿಗರಾಗಲೆಳಸುವಿರೋ ? ಹುಟ್ಟಿದುದಕ್ಕೆ ಸಾರ್ಥಕಪಡಿಸಿಕೊಳ್ಳುವ ದೆಂದರೆ ಹೇಗೆ ? "ಸುಕನ್ಯೆಯಂತೆ ನಡೆದರೆ" ಎನ್ನುವಿರಲ್ಲವೆ ? ಹಾಗಾ ದರೆ ನೀವೂ ಧನ್ಯೆಯರಾಗುವಿರಿ ! ಆಗಲಿ, ಹಾಗೆಯೇ ನಿಮ್ಮ ನಡೆನುಡಿ ಯು ಶುದ್ಧವಾಗಿರಲಿ ! ನೀವಿನ್ನು ಶರ್ಮಿಷ್ಠೆಯ ಚರಿತ್ರವನ್ನು ಸಂಗ್ರ ಹಿಸಲು ಅವಕಾಶಪಡುವಿರಲ್ಲವೆ ?

ಶ್ರೀಃ

ತೃತೀಯಲಹರಿ.

iii

ಎನ್ನೊಲಿದಕ್ಕತಂಗಿಯರೇ !

ಹಿಂದಿನ ಲಹರಿಯಲ್ಲಿ ಸುಕನ್ಯೆಯ ಚರಿತವನ್ನು ಕೇಳಿ ತಿಳಿದಿರಷ್ಟೆ? ಇನ್ನು ನಿಮಗಿಲ್ಲಿ ಶರ್ಮಿಷ್ಠೆಯ ಚರಿತ್ರವನ್ನು ಹೇಳುವೆನು ಕೇಳಿರಿ. ಶರ್ಮಿಷ್ಠೆಯು ವೃಷಪರ್ವನೆಂಬ ದಾನವೇಂದ್ರನ ಮಗಳೆಂದೂ ಯಯಾತಿರಾಯನ ಮಡದಿಯೆಂದೂ ತಿಳಿದೇ ಇರುವಿರಷ್ಟೆ? ಆದರೂ, ಅವಳು ಯಯಾತಿಯನ್ನು ಮದುವೆಯಾದುದು ಹೇಗೆ? ಅವಳು ಪಿತೃ ಹಿತಕ್ಕಾಗಿ ಪಟ್ಟ ಕಷ್ಟವೇನು ? ಸಹನಶೀಲತೆಯೆಷ್ಟು ? ಇವೇ ನಿಮ್ಮ ಪ್ರಶ್ನೆಯಾಗಿರಬೇಕಲ್ಲವೆ? ಆಗಲಿ, ಕೇಳಿರಿ, ಸಂಗ್ರಹವಾಗಿ ಹೇಳು ವೆನು; ಆದರೆ ನೀವು ಇಷ್ಟರಿಂದಲೇ ತೃಪ್ತಿಹೊಂದಬಾರದು,ಕಂಡಿರೋ? ನಿಮಗೆ ಅವಕಾಶವಾದಾಗಲೆಲ್ಲಾ ನೀವು ರಾಮಾಯಣ, ಮಹಾಭಾರತ, ಭಾಗವತಗಳನ್ನೂ ಚರಿತ್ರ-ಇತಿಹಾಸ ಪ್ರಸಿದ್ಧರಾದ ಮಹಾತ್ಮರ ಚರಿತ ಗಳನ್ನೂ ಓದುತ್ತ ಬರಬೇಕೆಂಬುದು ನಮ್ಮ ಆಶಯವು ! ಅದಕ್ಕೆಂದೇ ಅದರಲ್ಲಿ ನಿಮಗೆ ಅಕ್ಕರೆಯುಂಟಾಗಲೆಂದೇ ಒಂದೆರಡು ರಸವತ್ತಾದ ವಿಚಾರಗಳನ್ನು ನಿಮ್ಮ ಮುಂದೆ ಇರಿಸುತ್ತ ಬರುವೆವು.

ವೃಷಪರ್ವನೆಂಬ ದಾನವರರಸನಿಗೆ ಸರ್ವಲಕ್ಷಣ ಸಂಪನ್ನೆಯಾದ ಶರ್ಮಿಷ್ಠೆಯೆಂಬ ಸುಕುಮಾರಿಯೋರ್ವಳಿದ್ದಳು. ವೃಷಪರ್ವನ— ದಾನವರ-ಗುರುವಾದ ಶುಕ್ರಾಚಾರ್ಯನಿಗೆ ದೇವಯಾನೆಯೆಂಬ ಕುವರಿ ಇದ್ದಳು. ಇವರೀರ್ವರೂ ಸಮಾನವಯಸ್ಕೆಯರೂ ಪರಸ್ಪರ ಸ್ನೇಹ ವುಳ್ಳವರೂ ಆಗಿದ್ದರು. ಶರ್ಮಿಷ್ಠೆಯು ಒಂದು ದಿನ ತನ್ನ ಸಖೀಜನ ರೊಡಗೂಡಿ ಗುರುಪುತ್ರಿಯಾದ ದೇವಯಾನೆಯೊಡನೆ ಜಲಕ್ರೀಡೆಗಾಗಿ ರಾಜೋದ್ಯಾನಕ್ಕೆ ಬಂದರು ; ಅಲ್ಲಿ ವನವಿಹಾರವು ನಡೆದ ಬಳಿಕ ಎಲ್ಲರೂ ಸ್ನಾನಾರ್ಥವಾಗಿ ತಮ್ಮ ತಮ್ಮ ವಸ್ತ್ರಾಭರಣಗಳನ್ನು ತೆಗೆ ದಿಟ್ಟು ಚಪಲೆಯರಾದ ಆ ನವತರುಣಿ (ಎಳೆ ಪ್ರಾಯದ ಹೆಂಗಸರು) ಯರು

ಒಬ್ಬರಮೇಲಿನ್ನೊಬ್ಬರು ಬೊಗಸೆಗಳಿಂದ ನೀರುತೆಗೆದುಹಾಕುವುದು. ಚೇರುಕೊಳವೆಗಳಲ್ಲಿ ನೀರನ್ನು ತುಂಬಿ ಸಖಿಯರಿಗೆ ಎರಚುವುದು, ಮೊದಲಾದ ಆಟಗಳಲ್ಲಿ ತೊಡಗಿರುವಾಗ ಗಗನದಲ್ಲಿ ವೀಣಾಗಾನವಾಗಲು ಅವರೆಲ್ಲರೂ ಗಾಬರಿಗೊಂಡು ಥಟ್ಟನೆದ್ದು ಬಂದು ತಮ್ಮ ವಸ್ತ್ರಾಭರಣಗಳನ್ನು ಧರಿಸಿದರು. ಅದರಲ್ಲಿ ದೇವಯಾನೆಯು, ಶರ್ಮಿಷ್ಠೆಯ ದಿವ್ಯವಸ್ತ್ರವನ್ನುಟ್ಟಳು. ಶರ್ಮಿಷ್ಠೆಯು ಬಂದು ನೋಡಿದಳು, ಆಗ್ರಹವುಂಟಾಯಿತು. ತನ್ನ ವಸ್ತ್ರವನ್ನು ಆಶೆಯಿಂದ, ತನಗೆ ಹೇಳದೆಯೇ, ತನ್ನನ್ನು ವಿವಸ್ತ್ರೆಯಾಗಿ ನಿಲ್ಲುವಂತೆ ಮಾಡಿ ಉಟ್ಟುಕೊಂಡಳೆಂದೇ ತಿಳಿದು, ಆ ವಸ್ತ್ರವನ್ನು ಸೆಳೆದು, ಅವಳನ್ನು ತಿರಸ್ಕರಿಸಿದಳು. ಆ ಬಳಿಕ ದೇವಯಾನೆಯೂ, ತಾನು ಗಾಬರಿಯಿಂದ ಬಂದು, ನೋಡದೆ ಉಟ್ಟೆನೆಂದೂ ಗುರುಪುತ್ರಿಯಾದ ತನ್ನನ್ನು ತಿರಸ್ಕರಿಸುವುದು ಸರಿಯಲ್ಲವೆಂದೂ ಇದಿರುವಾಸಿದಳು. ಶರ್ಮಿಷ್ಠೆಗೆ ಕೋಪವಿಮ್ಮಡಿಯಾಗಲು, ಬುದ್ಧಿಗೆಟ್ಟು, "ಗಾಬರಿಯಿಂದ ವಸ್ತ್ರವನ್ನು ತೆಗೆದುಕೊಂಡುದು ಸರಿ, ಆದರೆ ಉಡುವಾಗ ನಿನ್ನ ವಸ್ತ್ರಕ್ಕಿಂತಲೂ ಬಹು ಬೆಲೆಬಾಳುವುದಾಗಿಯೂ ಭಾರವಾಗಿಯೂ ಇರುವ ಇಂತಹ ವಸ್ತ್ರವು ಕಾಣದಿರುವುದೇ? ಬೇಕೆಂದೇ ನೀನು ರಾಜಪುತ್ರಿಯಾದ ನನ್ನನ್ನು ಲೆಕ್ಕಿಸದೆ, ನನ್ನನ್ನು ಕೇಳದೆ ಹೀಗೆ ಮಾಡಿದೆ! ಸಾಲದುದಕ್ಕೆ ನನಗೆ ಇದಿರುವಾದಿಸುವೆ? ಎಂದು ಹೇಳಿ ಮುಂದೇನಾಗುವುದೆಂದು ಗಣಿಸದೆ ಅವಳನ್ನು ತನ್ನ ದಾಸೀ ಜನರಿಂದ ಹಳ್ಳಕ್ಕೆ ತಳ್ಳಿಸಿ ತನ್ನ ಸಖೀ ದಾಸೀಜನರೊಡನೆ ಅರಮನೆಗೆ ಹೊರಟುಬಂದಳು. ಅರಮನೆಗೆ ಬಂದ ಮೇಲೆ ಶರ್ಮಿಷ್ಠೆಗೆ ಕೋಪವು ಕಡಿಮೆಯಾಗಿ, ತನ್ನ ಒಡನಾಡಿಯೂ ಕೆಳದಿಯೂ ಗುರುಪುತ್ರಿಯೂ ಆದ ದೇವಯಾನೆಯನ್ನು ತಾನು ನಿರ್ದಯೆಯಿಂದಲೂ ಮರ್ಯಾದೆಯಿಲ್ಲದೆಯೂ ಅಷ್ಟು ಜರಿದು, ನೋಯಿಸಿ ಹಳ್ಳಕ್ಕೆ ನೂಕಿ, ಒಬ್ಬಳನ್ನೇ ಬಿಟ್ಟುಬಂದುದಕ್ಕಾಗಿ ಪಶ್ಚಾತ್ತಾಪವೂ ದುಃಖವೂ ಉಂಟಾಗಿ ತನ್ನಲ್ಲಿಯೇ ಮರುಗುತ್ತಿದ್ದಳು; ತನ್ನ ತಿಳಿಗೇಡಿತನಕೂ ಅರಸನೈಸಿರಿಯ ಹೆಮ್ಮೆಗೂ ತನ್ನನ್ನು ತಾನೇ ಬಗೆಬಗೆಯಾಗಿ ಹಳಿದುಕೊಳ್ಳುತ್ತಲಿದ್ದಳು. ದೇವಯಾನೆಯು ಮನೆಗೆ ಬಾರದಿರಲು ಶುಕ್ರಾ

ಚಾರ್ಯನು, ರಾಜಕುಮಾರಿಯೊಡನೆ ವಿನೋದದಲ್ಲಿರಬಹುದೆಂದು ಸುಮ್ಮ ಸಿದ್ದನು.

ಇತ್ತ ಹಳ್ಳದಲ್ಲಿ ಬಿದ್ದ ದೇವಯಾನೆಯು ಒಬ್ಬಳೇ ಅಲ್ಲಿರಲಾರದೆ ಭಯದಿಂದಲೂ ಮೈಮೇಲೆ ಬಟ್ಟೆಯೂ ಇಲ್ಲದೆ, ಮೇಲಕ್ಕೆತ್ತುವರಾರನ್ನೂ ಕಾಣದೆ ದುಃಖದಿಂದಲೂ, ರಾಜಪುತ್ರಿಯು ತನಗೆ ಮಾಡಿದ ಅಪಮಾನ ದಿಂದಾದ ಕೋಪ ಮನಸ್ತಾಪದಿಂದಲೂ ಅಧಿಕವಾಗಿ ನೊಂದು, ಪರಿಪರಿ ಯಾಗಿ ಹಂಬಲಿಸುತ್ತ ಶರ್ಮಿಷ್ಠೆಯನ್ನು ಬಯ್ಯುತ್ತ ರಕ್ಷಕರನ್ನು ಕೂಗು ತ್ತಲಿದ್ದಳು. ಅದೇ ಸಮಯದಲ್ಲಿ ಮಾಹಿಷ್ಮತೀಪುರವರಾಧೀಶನೂ ಚಂದ್ರ ಕುಲಾವತಂಸನೂ ರೂಪಗುಣವಿಭವೈಶ್ವರ್ಯಸಂಪನ್ನನೂ ನಹುಷಮಹಾ ರಾಜನಪುತ್ರನೂ ಆದ ಯಯಾತಿರಾಯನು, ಮೃಗಯಾ ವಿಹಾರಕ್ಕಾಗಿ ಬಂದವನು ಬಾಯಾರಿಕೆಯಿಂದ ನೀರನ್ನರಸುತ್ತ ದಾರಿತಪ್ಪಿ ಇದೇ ದಾರಿ ಯಾಗಿ ಬಂದನು; ಬರುತ್ತಿರುವಾಗ ಆರ್ತಸ್ವರವನ್ನು ಕೇಳಿ ಕುತೂಹಲ ದಿಂದ ಹಳ್ಳದ ಬಳಿಗೆ ಬಂದು ನೋಡಿದಾಗ ದೇವಯಾನೆಯು ಬತ್ತಲೆಯಾಗಿ ದ್ದುದರಿಂದ ತನ್ನ ಮೈಯನ್ನು ಸಂಕೋಚಮಾಡಿಕೊಂಡು ಕುಳಿತಿದ್ದು ದನ್ನು ಕಂಡು ಯಯಾತಿಯು "ನೀನಾರು? ನಿನ್ನ ವೃತ್ತಾಂತವೇನು?" ಎಂದು ಕೇಳಲು, ದೇವಯಾನೆಯು "ನೀನಾರೆಂಬುದನ್ನು ಮೊದಲು ತಿಳಿ ಸಿದರೆ ನನ್ನ ವೃತ್ತಾಂತವನ್ನು ಬಳಿಕ ಹೇಳುವೆ" ನೆನಲು, ಯಯಾತಿಯು ತನ್ನ ಪರಿಚಯವನ್ನು ಕೊಟ್ಟ ಬಳಿಕ "ಮೊದಲು ನನಗೆ ನಿನ್ನ ಉತ್ತರೀ ಯವನ್ನಾದರೂ ಕೊಟ್ಟು ಕೃಪಾದೃಷ್ಟಿಯಿಂದ ನೋಡಿ ನನ್ನನ್ನು ಮೇಲಕ್ಕೆತ್ತಿದರೆ, ಆ ಬಳಿಕ ನಾನು ನನ್ನ ವೃತ್ತಾಂತವನ್ನು ಹೇಳು ವೆನು. ಈಗ ನಾನು ವಸ್ತ್ರಹೀನೆಯಾಗಿರುವುದರಿಂದ ಮಾತನಾಡಲಾ ರೆನು." ಎನಲು, ಯಯಾತಿಯು ತನ್ನ ಉತ್ತರೀಯವನ್ನು ಎಸೆದನು. ದೇವಯಾನೆಯು ಅದನ್ನು ಧರಿಸಿ, ಹಳ್ಳದಲ್ಲಿ ಎದ್ದು ನಿಂತಳು. ತನ್ನ ಕೈಯನ್ನು ಮೇಲಕ್ಕೆತ್ತಿದಳು. ಯಯಾತಿಯು ತನ್ನ ಕೈಗಳಿಂದ ಅವಳ ಕೈಯನ್ನು ಹಿಡಿದು ಮೆಲ್ಲಗೆ ಮೇಲಕ್ಕೆ ಕರೆದುಕೊಂಡು ಬಂದು ನಿಲ್ಲಿಸಿ ದನು. ಆ ಬಳಿಕ ದೇವಯಾನೆಯು—"ಎಲೈ ರಾಜನೇ! ಕೃಪಾಳು ವಾದ ಕಮಲಾಪತಿಯೇ ನನ್ನನ್ನು ಉದ್ಧರಿಸಲು ನಿನ್ನ ರೂಪದಿಂದ

ಬಂದನೆಂದು ನಾನು ಭಾವಿಸುವೆನು. ಅಸುರಗುರುವಾದ ಶುಕ್ರಾಚಾರ್ಯರ ಮಗಳು ನಾನು. ಗರ್ವಿಷ್ಠೆಯೂ ದಾನವನ ಮಗಳೂ ಆದ ಶರ್ಮಿಷ್ಠೆಯು ನನ್ನನ್ನು ಈ ರೀತಿಯಾದ ದುರವಸ್ಥೆಗೆ ಗುರಿಮಾಡಿ ಹೋದಳು. ಪೃಥ್ವೀಪತಿಯಾದ ನೀನು ನನ್ನ ಕೈಹಿಡಿದು ವಿವಸ್ತ್ರೆಯಾಗಿದ್ದ ನನಗೆ ವಸ್ತ್ರವನ್ನಿತ್ತು ಮೇಲಕ್ಕೆತ್ತಿ ಕಾಪಾಡಿದೆಯಾದುದರಿಂದ, ನಾನು ನಿನ್ನನ್ನು ಕೈಹಿಡಿದಂತಾದೆನು. ನೀನು ಹಿಡಿದ ಕೈಯನ್ನು ಮತ್ತಾರೂ ಮುಟ್ಟುವಂತಿಲ್ಲವಾದುದರಿಂದ ದಯೆಯಿಟ್ಟು ನನ್ನನ್ನು ನೀನು ಸ್ವೀಕರಿಸಬೇಕು." ಎನಲು ಯಯಾತಿರಾಯನು, ಎಲೈ ಶುಭಾಂಗಿಯೇ ಆರ್ತರನ್ನು ಕಾಪಾಡುವುದು ನನ್ನ ಧರ್ಮವಾದುದರಿಂದಲೂ ನೀನಾಗಿ ಮೇಲಕ್ಕೆತ್ತಬೇಕೆಂದು ಪ್ರಾರ್ಥಿಸಿದುದರಿಂದಲೂ ನಿನ್ನ ಕೈ ಹಿಡಿದು ಮೇಲಕ್ಕೆತ್ತಿದೆನೇ ಹೊರತು ಅನ್ಯಥಾ ಇಲ್ಲ! ನಾನು ನಿನ್ನನ್ನು ಕೇವಲ ಕನಿಕರದಿಂದ ನೋಡಿದೆನಲ್ಲದೆ, ವಿಷಯವಾಸನೆಯುಳ್ಳವನಾಗಿ ನಿನ್ನನ್ನು ನೋಡಿಲ್ಲ. ನಿನ್ನನ್ನು ಕೈಹಿಡಿದು ಮೇಲಕ್ಕೆತ್ತುವಾಗಲೂ ಈಗಲೂ ನನ್ನ ಮನಸ್ಸು ಸ್ವಲ್ಪವೂ ವಿಕಾರವಶವಾಗಿಲ್ಲ; ನಿಶ್ಚಲವೂ ಪರಿಶುದ್ಧವೂ ಆಗಿಯೇ ಇದೆ. ಆದುದರಿಂದ ನೀನು ನನ್ನನ್ನು ಇಂತಹ ನಿರ್ಬಂಧದಲ್ಲಿ ಸಿಲುಕಿಸಬೇಡ. ಈ ವಿಚಾರವು ನಿಮ್ಮ ತಂದೆಗೆ ತಿಳಿದರೆ ಆಗ್ರಹ ಮಾಡುವರು. ನಾವು ಕ್ಷತ್ರಿಯಕನ್ಯೆಯನ್ನು ಪರಿಗ್ರಹಿಸುವವರೇ ಹೊರತು, ಬ್ರಾಹ್ಮಣಕನ್ಯೆಯನ್ನು ಕ್ಷತ್ರಿಯರಾದ ನಾನು ಪರಿಗ್ರಹಿಸಲು ಯೋಗ್ಯರಲ್ಲ. ಬ್ರಾಹ್ಮಣಕನ್ಯೆಯಾದ ನಿನ್ನನ್ನು ನಾನು ಪರಿಗ್ರಹಿಸುವೆನೆಂದರೆ ನಾವು ಬ್ರಾಹ್ಮಣರಕೋಪಕ್ಕೂ ಮಹಾತ್ಮನಾದ ನಿನ್ನ ತಂದೆಯ ಶಾಪಕ್ಕೂ ಕಾರಣನಾಗಬಹುದು. ಆದುದರಿಂದ ನಾನು ನಿನ್ನೀಮಾತನ್ನು ಅನುಮೋದಿಸುವಂತಿಲ್ಲ" ಎಂದನು.

ದೇವಯಾನೆಯು ಕೈಜೋಡಿಸಿ,—" ಎಲೈ ! ಧರ್ಮಿಷ್ಠನಾದ ಅರಸನೇ! ನಿನ್ನ ಹಸ್ತದಲ್ಲಿ ಒಪ್ಪಿಸಿದ ಈ ಹಸ್ತವು ಮತ್ತಾರಿಗೂ ಸೇರತಕ್ಕುದಲ್ಲ. ಬ್ರಾಹ್ಮಣಕನ್ಯೆಯೆಂದು ನೀನು ನನ್ನನ್ನು ನಿರಾಕರಿಸಿದೆಯಾದರೆ ನಾನು ಅವಿವಾಹಿತೆಯಾಗಿಯೇ ಇರಬೇಕಾಗುತ್ತದೆ. ನೀನಾಗಿ ನನ್ನ ತಂದೆಯನ್ನು ಪ್ರಾರ್ಥಿಸಬೇಕಾಗಿಲ್ಲ. ನಾನೇ ನನ್ನ ಇಷ್ಟವನ್ನಾತನಿಗೆ

ಹೇಳಿ ಆತನೇ ನಿನ್ನನ್ನು ಕರಸಿ ನಿನಗೆ ನನ್ನನ್ನು ಧಾರೆಯೆರೆವಂತೆ ಮಾಡುವೆನು. ಮತ್ತು, ನನಗೆ ದೇವಗುರುವಾದ ಕಚನು "ಕ್ಷತ್ರಿಯನ ಪತ್ನಿಯಾಗೆಂದು ಶಾಪವನ್ನು ಕೊಟ್ಟಿರುವುದರಿಂದ ನಾನು ಕ್ಷತ್ರಿಯ ಮಹಿಷಿಯೇ ಆಗಬೇಕಾಗಿರುವುದು. ನೀನೇನೂ ಸಂದೇಹ ಪಡಬೇಕಾಗಿಲ್ಲ." ಎಂದಳು. ಯಯಾತಿಯು ಅವಳ ಪ್ರಾರ್ಥನೆಯನ್ನು ನಿರಾಕರಿಸಲಾರದೆ, "ನಿನ್ನ ತಂದೆಯು ಕರಯಿಸಿದಾಗ ನೋಡುವೆನು. ಈಗ ನಾನು ನಿಲ್ಲುವಂತಿಲ್ಲ, ನೀನಿನ್ನು ಪಿತೃಸನ್ನಿಧಿಗೆ ತೆರಳು." ಎಂದವಳನ್ನು ಕಳುಹಿಸಿ, ತಾನೂ ಹೊರಟುಹೋದನು.

ದೇವಯಾನೆಯು ತಂದೆಯ ಬಳಿಗೆ ಬಂದು ಶರ್ಮಿಷ್ಠೆಯು ಮಾಡಿದ, ಅವಮಾನವನ್ನು ಅತಿಶಯೋಕ್ತಿಯಿಂದ ವಿವರಿಸಿ, ಆಕ್ರೋಶಮಾಡುತ್ತ, ಯಯಾತಿರಾಯನು ಬಂದು ತನ್ನನ್ನು ಉದ್ಧರಿಸದಿದ್ದರೆ ತಾನು ಅಲ್ಲಿಯೇ ಸಾಯಬೇಕಾಗುತ್ತಿದ್ದಿತೆಂದು ಹೇಳುತ್ತ, ತಂದೆಗೆ ಕೋಪವುಂಟುಮಾಡಿದಳು, ಶುಕ್ರಾಚಾರ್ಯನು ವೃಷಪರ್ವನನ್ನು ಕರೆಯಿಸಿ ನಡೆದ ಸಂಗತಿಯನ್ನೆಲ್ಲಾ ತಿಳಿಸಿ, ಆಗ್ರಹದಿಂದ ಶಾಪವನ್ನು ಕೊಡುವೆವೆಂದೂ—ದಾನವರ ಪೌರೋಹಿತ್ಯವನ್ನೇ ತ್ಯಜಿಸಿ ಹೊರಟುಹೋಗುವೆವೆಂದೂ ಹೇಳಲು ವೃಷಪರ್ವನು ಬಹು ಬಗೆಯಾಗಿ ಪಿತಾ ಪುತ್ರಿಯರನ್ನು ಪ್ರಾರ್ಥಿಸಿ, ಸಾಂತ್ವ ವಚನಗಳಿಂದ ಸಂತೈಸಿ, ಕ್ಷಮೆಯನ್ನು ಯಾಚಿಸಿದನು. ದೇವಯಾನೆಯು "ನನ್ನನ್ನು ಅಪಮಾನ ಮಾಡಿದ ಆ ಶರ್ಮಿಷ್ಠೆಯನ್ನು ನನಗೆ ದಾಸಿಯಾಗಿರಿಸಿದರೆ ಮಾತ್ರ, ನಾನು ಸಮಾಧಾನ ಪಡುವೆನಲ್ಲದೆ ಸುಮ್ಮನೆ ಶಾಂತಳಾಗಲಾರೆನು." ಎಂದು ಹಟಹಿಡಿಯಲು ಶುಕ್ರಾಚಾರ್ಯನೂ-ಮಗಳ ಮನಸ್ಸಿಗೆ ಸಮಾಧಾನವಾಗದೆ ತಾನು ನಿಲ್ಲುವಂತಿಲ್ಲವೆಂದು ಹೇಳಿದನು. ವೃಷಪರ್ವನು ಹಾಗೆಯೇ ಆಗಲೆಂದು ತನ್ನ ಅರಮನೆಗೆ ಹೊರಟುಬಂದನು.

ದೇವಯಾನೆಯ ಹಟವೂ ಶುಕ್ರಾಚಾರ್ಯನ ಆಗ್ರಹವೂ ಶರ್ಮಿಷ್ಠೆಯು ದೇವಮಾನೆಗೆ ದಾಸಿಯಾಗಬೇಕಾಗಿ ಬಂದ ಅನಿಷ್ಟವೂ ವೃಷಪರ್ವನ ರಾಣಿವಾಸಕ್ಕೆ ಮುಟ್ಟಿತು. ಹರಕೆಯೆತ್ತಿ ಪಡೆದ ಹೆಣ್ಣು ಮಗು

ವನ್ನು ಆಸೆ, ಅಕ್ಕರೆಗಳೇನೊಂದೂ ಇಲ್ಲದೆ, ತೊತ್ತಾಗಿ ಗೊತ್ತುಮಾಡಿ ಮನೆಯಿಂದ ಬಿಟ್ಟು ಕಳುಹಲಿಕ್ಕೆ ಹೆತ್ತವರ ದುಃಖವೆಷ್ಟಾಗಬೇಡ? ಹೇಳಿರಿ. ಶರ್ಮಿಷ್ಠೆಯನ್ನು ಕಳುಹಬೇಕೆಂದು ತಿಳಿದ ಕೂಡಲೆ, ಅವಳ ತಾಯ್ತಂದೆಗಳು ಎಷ್ಟು ಪರಿಯಿಂದ ಅತ್ತಿರಬೇಕು ? ಎಷ್ಟು ಅತ್ತರೇನು ? ಏನು ಮಾಡಿದರೇನು ? ಮಗಳ ಮೇಲಿನ ಮೋಹಕ್ಕೆ ಮನಸ್ಸುಕೊಟ್ಟರೆ. ಗುರುಶಾಪಕ್ಕೂ ಬ್ರಾಹ್ಮರ ಆಗ್ರಹಕ್ಕೂ ಗುರಿಯಾಗಬೇಕು. ಗುರುವಿನ ಮನಸ್ಸಂತೋಷಪಡಿಸಬೇಕಾದರೆ, ರಾಜಕನ್ಯೆಯೆನಿಸಿ, ಕಷ್ಟ ಕೋಟಲೆಗಳೇನೊಂದನ್ನೂ ಕಂಡವಳಲ್ಲದೆ, ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ತೊತ್ತುಮಾಡಿಬಿಡಬೇಕು. ಈ ಅಪ್ರಿಯವಾರ್ತೆಯನ್ನು ಮಗಳಿಗೆ ಹೇಗೆ ಹೇಳಬೇಕು ?

ಇದೇ ಶಂಕೆಯಿಂದಲೇ ಪೇಚಾಡುತ್ತಲಿದ್ದ ಶರ್ಮಿಷ್ಠೆಗೆ, ತನ್ನ ಬಾಲ್ಯಚಾಪಲ್ಯ ದೋಷದಿಂದ ಉಂಟಾಗಿರುವ ಸಂಕಟವು ತಿಳಿದುಬಂದಿತು ; ಅತ್ಯಂತ ದುಃಖವಾಯಿತು! ಆದರೂ ವಿಚಾರಶೀಲೆಯಾದ ಶರ್ಮಿಷ್ಠೆಯು ಮನಸ್ಸನ್ನು ತನ್ನ ಹತೋಟಿಯಲ್ಲಿರಿಸಿಕೊಂಡು, ತಾಯ್ತಂದೆಯರನ್ನು ತಾನೇ ಪರಿಪರಿಯಾಗಿ ಸಂತವಿಟ್ಟಳು, "ದೇವಯಾನೆಗೆ ತಾನು ಅಪರಾಧಿಯಾಗಿರುವುದರಿಂದ ಅವಳಲ್ಲಿ ಕ್ಷಮೆಯನ್ನು ಬೇಡಿ, ಅವಳ ದಾಸಿಯಾಗಿರಲು ಒಪ್ಪಿ, ನಿಮಗೂ ರಾಷ್ಟ್ರಕ್ಕೂ ಉಂಟಾಗಿರುವ ವಿಪತ್ತನ್ನು ಪರಿಹರಿಸುವೆನು," ಎಂದು ಹೇಳಿದಳು, ಶರ್ಮಿಷ್ಠೆಯು ಒಪ್ಪಿರುವಳೆಂಬುದು ತಂದೆ ಮಗಳಿಬ್ಬರಿಗೂ ತಿಳಿದು ಸಂತೋಷಪಟ್ಟರು. ಅವರಮಾತಿನಂತೆ ತನ್ನ ಪರಿವಾರ ಸಹಿತ ಶರ್ಮಿಷ್ಠೆಯು, ದೇವಯಾನೆಗೆ ಅಧೀನೆಯಾದಳು. ದೇವಯಾನೆಗೆ ಅಭಿಮಾನವೆಷ್ಟಾಯಿತೆಂಬುದನ್ನು ಹೇಳಬೇಕೆ?

ದೇವಯಾನೆಗೆ ವಯಸ್ಸಾಯಿತು, ಅನುರೂಪನಾದ ವರನನ್ನು ನೋಡಿ ಕನ್ಯಾದಾನಮಾಡಿ ಬಿಡಬೇಕೆಂದು ಶುಕ್ರಾಚಾರ್ಯನು ಯೋಚಿಸಿದನು. ದೇವಯಾನೆಯದಕ್ಕೆ ಒಪ್ಪಲಿಲ್ಲ. ತಾನು ಯಯಾತಿಯ ಕೈಯಲ್ಲಿ ತನ್ನ ಕೈಕೊಟ್ಟಿರುವುದರಿಂದ ಆತನನ್ನು ವಿನಾ ಮತ್ತಾರನ್ನೂ ಮದುವೆ

ಯಾಗುವುದಿಲ್ಲವೆಂದು ಹಟವಿಡಿದಳು. ಶುಕ್ರಾಚಾರ್ಯನು ಸಿಟ್ಟುಮಾಡಿದನು; ಆದರೂ ದೇವಯಾನೆಯ ಮನಸ್ಸು ಬದಲಾಗಲಿಲ್ಲ, ತಂದೆಗೆ, ಕಚನಿಂದ ತಾನು ಪಡೆದಿರುವ ಶಾಪವೃತ್ತಾಂತವನ್ನು ಹೇಳಿ, ಸಮ್ಮತಿ ಪಡಿಸಿದಳು. ಶುಕ್ರಾಚಾರ್ಯನು ಯಯಾತಿಯನ್ನು ಕರಸಿ ತನ್ನ ಅಭಿಪ್ರಾಯವನ್ನು ತಿಳಿಸಿದನು. ಯಯಾತಿಯೂ ಸನ್ಮತಿಸಿದನು.

ದೇವಯಾನೆಯು ಯಯಾತಿಯ ಮಹಿಷಿಯಾದಳು. ಯಯಾತಿಯು ಪತ್ನೀಸಮೇತನಾಗಿ ಹೊರಡಲು, ಶುಕ್ರಾಚಾರ್ಯನು ದಾಸೀಜನ ಪರಿವೃತೆಯಾದ ಶರ್ಮಿಷ್ಠೆಯನ್ನು ಯಯಾತಿಗೆ ರಹಸ್ಯವಾಗಿ ಒಪ್ಪಿಸಿ, "ಎಲೈ, ರಾಜೋತ್ತಮ! ನನ್ನ ಮಗಳು ತುಂಬ ಅಭಿಮಾನಿ; ತನ್ನ ಇಚ್ಛೆಗೆ ವಿರುದ್ಧವಾದರೆ ಸಹಿಸಲಾರಳು. ಪ್ರಾಣಾಧಿಕವಾಗಿರುವ ಆ ಮಗಳಿಗೆ ಸ್ವಲ್ಪಮಟ್ಟಿಗೆ ಕ್ಲೇಶವಾದರೂ ನಾನು ನೋಡಲಾರೆನು. ಆದುದರಿಂದ ನೀನು ಅವಳ ಮನಸ್ಸಿಗೆ ಅಸುಖವಾಗದಂತೆ ಜಾಗರೂಕನಾಗಿ ವರ್ತಿಸಬೇಕು. ಈ ಶರ್ಮಿಷ್ಠೆಯು ರಾಜಕನ್ಯೆ. ಇವಳ ಮರ್ಯಾದೆಗೆ ಲೋಪಬಾರದಂತೆ ಇವಳನ್ನು ಸರಿಯಾದ ರೀತಿಯಲ್ಲಿರಿಸಿ ಕಾಪಾಡಬೇಕು. ಆದರೆ ನನ್ನ ಮಗಳಿಗೆ ಅಸಂತೋಷವನ್ನುಂಟು ಮಾಡುವಂತೆ ಮಾತ್ರ ನಡೆಯಿಸಬೇಡ" ಹೀಗೆ ಹೇಳಿ ಮಗಳನ್ನು ಕಳುಹಿಸಿದನು.

ಶರ್ಮಿಷ್ಠೆಯು ದೇವಯಾನೆಗೆ ಒಪ್ಪಿಸಲ್ಪಟ್ಟರೂ ಊಳಿಗಕ್ಕೆಂದು ಒಪ್ಪಿಸಲ್ಪಡಲಿಲ್ಲ. ಊಳಿಗಕ್ಕೆ ಅವಳ ದಾಸೀಜನರೇ ಇದ್ದರು. ಆದುದರಿಂದ ಶರ್ಮಿಷ್ಠೆಗೆ ಕೆಲಸಮಾಡಬೇಕಾದ ಕಷ್ಟವಿರಲಿಲ್ಲ, ಆದರೂ ಅವಳ ಮಾತಿನಂತೆ ನಡೆದುಕೊಳ್ಳಬೇಕಾದ ನಿರ್ಬಂದಮಾತ್ರವಿದ್ದಿತು.

ದೇವಯಾನೆಯು ಮಾಹಿಷ್ಮತಿಗೆ ಬಂದಬಳಿಕ ತಾನೇ ರಾಣಿಯಾದೆನೆಂಬ ಆನಂದವುಂಟಾಗಿ ಅಭಿಮಾನವಿಮ್ಮಡಿಯಾಯಿತು. ಅದರೊಡನೆ ಶರ್ಮಿಷ್ಠೆಯು ತನ್ನ ಬಳಿಯಲ್ಲಿದ್ದರೆ ಪದೇಪದೇ ರಾಜನ ದೃಷ್ಟಿಗೆ ಬೀಳುವುದರಿಂದ ರಾಜನು ಅವಳಲ್ಲಿ ಅನುರಕ್ತನಾಗಿ ತನ್ನನ್ನು ಉಪೇಕ್ಷಿಸುವನೆಂಬ ಅಸೂಯೆಯೂ ಉಂಟಾಗಲು ಪರಿವಾರಸಹಿತಳಾದ ಶರ್ಮಿಷ್ಠೆಯನ್ನು ಪ್ರತ್ಯೇಕವಾಗಿರಿಸುವಂತೆ ಏರ್ಪಡಿಸಿದಳು. ರಾಜನೂ

ಅವಳ ಮರ್ಯಾದೆಗೆ ಕುಂದಕ ಬಾರದಂತೆ ಸರಿಯಾದ ವ್ಯವಸ್ಥೆಯಿಂದ ಪ್ರತ್ಯೇಕವಾದೆಡೆಯಲ್ಲಿರಿಸಲು ಅನುಕೂಲಪಡಿಸಿಕೊಟ್ಟನು.

ಹೀಗೆಯೇ ಕೆಲವುಕಾಲ ಕಳೆಯಲು ಬಳಿಕ ದೇವಯಾನೆಗೆ ಯದು, ತುರ್ವಸು ಎಂಬ ಮಕ್ಕಳಾದರು. ಶರ್ಮಿಷ್ಠೆಯು ವ್ರತಸ್ಥೆಯಾಗಿ ತಾಯಿತಂದೆಯರ ಶ್ರೇಯಸ್ಸನ್ನೇ ಚಿಂತಿಸುತ್ತಾ, ತನ್ನ ಗುರುವಾದ ಶುಕ್ರಾಚಾರ್ಯನು ತನ್ನನ್ನೂ ರಾಜನಿಗೆ ಒಪ್ಪಿಸಿದುದರಿಂದ ಆತನೇ ತನ್ನ ಪತಿಯೆಂದು ಭಾವಿಸಿ, ಪತಿಯ ಅಭ್ಯುದಯ, ಪ್ರೇಮ, ಸುಖಗಳನ್ನು ಹಾರೈಸುತ್ತಾ, ರಾಜಸಂದರ್ಶನಾಭಿಲಾಷೆಯಲ್ಲಿರಲು ರಾಜನೂ ಆ ಕಡೆ ಅಕಸ್ಮಾತ್ತಾಗಿ ಬಂದನು. ಶರ್ಮಿಷ್ಠೆಯು ರಾಜನನ್ನು ಬಹುಪರಿಯಿಂದ ಪ್ರಾರ್ಥಿಸಲು ಯಯಾತಿರಾಜನು ಅವಳನ್ನು ಪ್ರೀತಿಯಿಂದ ಪರಿಗ್ರಹಿಸಿದನು. ಬಳಿಕ ಅವಳಿಗೂ ದ್ರುಹ್ಯ, ತುರ್ವಸು, ಪೂರು ಎಂಬ ಮೂವರು ಪುತ್ರರಾದರು. ಅವರಲ್ಲಿ ಪಿತೃಭಕ್ತನಾದ "ಪೂರು" ಮಹಾರಾಜನ ಕಥೆಯನ್ನು ನಿಮಗೆ ಮೊದಲೇ ಹೇಳಿರುವುದರಿಂದ, ಶರ್ಮಿಷ್ಠೆಯ ಮುಂದಿನ ಚರಿತೆಯನ್ನು ಕುರಿತು ಹೇಳಬೇಕಾದಂತೆ ಕಾಣಲಿಲ್ಲ.

ಸುಶೀಲೆಯರಾದ ಬಾಲೆಯರೇ !

ಹೇಳಿರಿ, ಶರ್ಮಿಷ್ಠೆಯ ಪಿತೃಭಕ್ತಿ, ಗೌರವ, ದೇಶಹಿತೇಚ್ಛೆಗಳು ಎಷ್ಟುಮಟ್ಟಿಗಿದ್ದವು ? ಶರ್ಮಿಷ್ಠೆಯಲ್ಲದೆ ಮತ್ತೊಬ್ಬಳಾಗಿದ್ದರೆ ತನ್ನ ಕೆಳದಿಯಲ್ಲಿ ರಾಜಪುತ್ರಿಯಾದ ತಾನು ಅಧೀನವೃತ್ತಿಯಲ್ಲಿರಲು ಒಪ್ಪುತ್ತಿದ್ದಳೇ ? ತನ್ನಿಂದ ತಪ್ಪಾಯಿತೆಂದು ಕೇಳಿಕೊಳ್ಳಬೇಕೆಂದರೆ ಕೂಡ ಒಪ್ಪುವಂತಿಲ್ಲ. ಅಂತಹರು ಮತ್ತೇನುಮಾಡುವರು? ನೀವೇ ಹೇಳಿರಿ! ಹಾಗಾದರೆ ನಿಮ್ಮಲ್ಲಿ ಶರ್ಮಿಷ್ಠೆಯಂಥ ಮಾತಾಪಿತೃಭಕ್ತಿಯುತರೂ ದೇಶಹಿತೈಷಿಣಿಯರೂ ಆದವರು ಎಷ್ಟುಮಂದಿ ಇರಬಹುದು? ಹೇಳಿರಿ! ತಾಯಿತಂದೆಗಳ, ತಾನು ಹುಟ್ಟಿದ ದೇಶದ, ಹಿತಕ್ಕಾಗಿ ರಾಜಭೋಗವೈಭವಗಳನ್ನು ಕಡೆಗಿಟ್ಟು ಒಡೆತನದ ಆಸೆಯನ್ನು ಬಿಟ್ಟು ಅಡಿಯಾಳಾಗಿರಲು ಒಪ್ಪುವಂಥವರಿರುವರೋ ? ಶರ್ಮಿಷ್ಠೆಯು ಒಲ್ಲೆನೆಂದಿದ್ದರೆ ತಾಯಿತಂದೆಯರು ಬಲವಂತಪಡಿಸುತ್ತಿದ್ದರೇ ? ಹೇಳಿರಿ, ಸ್ವಸಂತೋಷದಿಂದ ಸ್ವಸುಖಾಭಿಲಾಷೆಯನ್ನು ಕಟ್ಟಿಟ್ಟು, ತನ್ನ ಕೆಳದಿ

ಯೊಬ್ಬಳಿಗೆ ಒಳಪಟ್ಟಿರಲು ಒಪ್ಪಿದ ಅವಳ ಮನಸ್ಸು ಎಷ್ಟು ಕೋಮಲ ವಾಗಿರಬಹುದು? ಆವದಾದರೂ ಒಂದು ಕೆಟ್ಟಕೆಲಸವನ್ನು ನೀವು ಮಾಡುತ್ತಿದ್ದರೆ, ನಿಮ್ಮ ಹಿರಿಯರು ನಿಮ್ಮನ್ನು ಕುರಿತು, ಆ ಕೆಲಸ ವನ್ನು ಮಾಡಬಾರದು, ಮಾಡಿದರೆ ಕೇಡು ತಪ್ಪದು, ಎಂದು ಹೇಳಿ ದರೂ ನೀವು ಕೇಳಲೊಲ್ಲಿರಿ, ಮಾಡಿಯೇಮಾಡುವಿರಿ. ಅದರದೆಸೆ ಯಿಂದ ನೀವೂ ಕೇಡಿಗೀಡಾಗಿ, ನಿಮ್ಮ ಹಡೆದವರನ್ನೂ ಗೋಳಡಿಸು ವಿರಿ. ನಿಮ್ಮಲ್ಲಿ ಕೆಲವರಂತೂ ತಾಯಿತಂದೆಗಳ ಮನಸ್ಸಿಗೆ ತಮ್ಮ ಹಟ, ಹೋರಾಟ, ಗೋಳಾಟಗಳೆಂಬ ಕೆಟ್ಟನಡತೆಗಳಿಂದ ಎಷ್ಟುತಾಪ ವನ್ನುಂಟುಮಾಡುವರೋ ಹೇಳಲಳವೇ? ನೀವೇ ಇಷ್ಟುಮಟ್ಟಿಗಿರು ವಾಗ ಇನ್ನು ನಿಮ್ಮಲ್ಲಿ ಹುಟ್ಟುವ ಮಕ್ಕಳು ಮತ್ತೆ ಹೇಗಾಗಬಹುದೋ? ಶರ್ಮಿಷ್ಠೆಯಲ್ಲಿ ಮಾತಾಪಿತೃಭಕ್ತಿ ದೇಶಹಿತೇಚ್ಛೆ ದೃಢಮನಸ್ಥೈರ್ಯ ಗಳಿದ್ದುದರಿಂದಲೇ ಅವಳ ಮಗನಾದ ಪೂರುವೂ ಕೌರವ – ಪಾಂಡವರ ಮೂಲಪುರುಷನಾಗಿ ಸುಪ್ರಸಿದ್ಧನಾದ ಮಹಾಪುರುಷನೆನಿಸಿ ಪ್ರಕಾ ಶಿಸಿದನು. ಭೂಮಿಯು ಸಾರವತ್ತಾಗಿದ್ದರೆ, ಬೆಳೆಯು ಉತ್ತಮ ವಾಗಿ ಆಗುವುದು. ಭೂಮಿಯು ಸಾರಹೀನವೂ ಕ್ರಿಮಿ ಕೀಟಗಳಿಂದ ಆವೃತವೂ ಆಗಿದ್ದರೆ ಅಂತಹ ಭೂಮಿಯಲ್ಲಿ ಬೆಳೆ ಚೆನ್ನಾಗಿ ಆಗು ವುದೇ? ಹಾಗೆಯೇ, ತಾಯಿಯು ಗುಣವತಿಯೂ, ಶೀಲವತಿಯೂ ಆಗಿದ್ದರೆ ಮಕ್ಕಳೂ ಅವಳಂತೆಯೇ ಆಗುವರು. ಆದುದರಿಂದ ಬಾಲೆ ಯರೇ! ನೀವು ಕೂಡ ಆರ್ಯನಾರಿ, ಆರ್ಯಮಾತೆಯರೆನ್ನಿಸಲು ಆರ್ಯ ಮಹಿಳೆಯರ ಆದರ್ಶವನ್ನೇ ಅನುಕರಣಮಾಡಿರಿ! ಏನೆಂದಿರಿ? ಆಗಬಹುದೋ? ತಥಾಸ್ತು!

ತೃತೀಯಲಹರಿ.

iii

ಬಾಲೆಯರೆ !

ಹಿಂದಿನಲಹರಿಯಲ್ಲಿ ನೀವು ಶರ್ಮಿಷ್ಠೆಯ ಚರಿತೆಯನ್ನು ಕೇಳಿದಿರಷ್ಟೆ? ಈಗ ಲೋಪಾಮುದ್ರೆಯ ಕಥೆಯನ್ನಿಷ್ಟು ಕೇಳಿರಿ.

ವಿದರ್ಭರಾಜನಿಗೆ ಬಹುಕಾಲದವರೆಗೆ ಸಂತಾನವಾಗದೆ ಇರಲು ಬಹು ದುಃಖಪಟ್ಟು, ಸಂತಾನಾರ್ಥವಾಗಿ ಬಹು ಕಠಿಣತರವಾದ ತಪಸ್ಸಿಗೆ ತೊಡಗಿದನು. ಅಗಸ್ತ್ಯಮಹರ್ಷಿಯು ಪ್ರಸನ್ನನಾಗಿ ವಿದರ್ಭರಾಜನಿಗೆ ಸಂತಾನವಾಗುವಂತೆ ಅನುಗ್ರಹಿಸಿದನು. ವಿದರ್ಭರಾಜನು ಅಗಸ್ತ್ಯಮಹರ್ಷಿಯ ಅನುಗ್ರಹದಿಂದ ಸಂತುಷ್ಟನಾಗಿ ರಾಜಧಾನಿಗೆ ಬಂದು ದೇವಗುರುಬ್ರಾಹ್ಮಣರನ್ನು ಸೇವಿಸಿ ಸಂತೋಷಪಡಿಸಿದನು. ಸ್ವಲ್ಪಕಾಲದೊಳಗೆ ಸರ್ವಲಕ್ಷಣಸಂಪನ್ನೆಯೂ ಲೋಕೋತ್ತರ ಗುಣಯುತೆಯೂ ಆದ ಕನ್ಯೆಯೊಬ್ಬಳು ಹುಟ್ಟಿದಳು. ಅನ್ಯೂನವಾದ (ಯಾವಭಾಗದಲ್ಲಿಯೂ ಕೊರತೆ ಇಲ್ಲದಂಥ) ದಿವ್ಯಲಕ್ಷಣಯುತೆಯಾದ ಮಗಳನ್ನು ನೋಡಿ ವಿದರ್ಭರಾಜನು ಲೋಪಾಮುದ್ರೆಯೆಂದು ಹೆಸರಿಟ್ಟು ಸಂತಾನಲಾಭವಾದುದಕ್ಕಾಗಿ ಉತ್ಸವಗಳನ್ನು ನಡೆಯಿಸಿ, ಬ್ರಾಹ್ಮಣರನ್ನು ಯಥೇಷ್ಟವಾದ ದಾನಧರ್ಮಗಳಿಂದ ತೃಪ್ತಿಪಡಿಸಿ, ಮಗಳನ್ನು ಜಾಗರೂಕತೆಯಿಂದ ಪೋಷಿಸುತಿದ್ದನು.

ತಂಗಿಯರೆ ! ಶಿಶುಪೋಷಣ, ಬಾಲಶಿಕ್ಷಣಗಳು ಸುಲಭವಾದ ಕೆಲಸವಲ್ಲ. ಅವರು ಅನಾರೋಗ್ಯಕ್ಕೆಡೆಯಾಗದಂತೆಯೂ ಅವಿಧೇಯರಾಗಿ ಹಿರಿಯರ ಆಚಾರ ವಿಚಾರಗಳನ್ನು ಲಕ್ಷಿಸದೆ ಕೆಟ್ಟುಹೋಗುವಂಥ ಅಭಿಮಾನ, ಅಹಂಕಾರ, ಆಲಸ್ಯ, ಅಶ್ರದ್ಧೆಗಳನ್ನು ಪಡೆಯದಂತೆಯೂ ಕಾಲವರಿತು, ತಕ್ಕ ಪೋಷಣ ಶಿಕ್ಷಣಗಳನ್ನು ಕೊಟ್ಟರೆ ಮಾತ್ರ, ಅವರನ್ನು ಪಡೆಯಲು ತಾವು ಪಟ್ಟಪಾಡು ಸಫಲವಾಗುವುದು. ಇಲ್ಲವಾದರೆ ಮಕ್ಕಳನ್ನು ಪಡೆದೂ ದುಃಖಸಾಗರದಲ್ಲಿ ಮುಳುಗಬೇಕಾಗುವುದು, ಇದಕ್ಕೆ ತಕ್ಕ ನಿದರ್ಶನಗಳು ನಿಮಗೆ ಎಷ್ಟೋ ಸಿಕ್ಕಬಹುದು ! ಎಷ್ಟೋ ತಾಯಿತಂದೆಯರು ತಮ್ಮ ಮಕ್ಕಳಿಂದ

ಹೇಳ, ಕೇಳ, ತಾಳಲಾರದಷ್ಟು ಗೋಳಾಟದಲ್ಲಿರುವುದನ್ನು ನೀವೂ ನೋಡಿರಬಹುದು; ಅಥವಾ ನೋಡಬಹುದು.

ಲೋಪಾಮುದ್ರೆಯನ್ನು ವಿದರ್ಭರಾಯನು ಉತ್ತಮರೀತಿಯಿಂದ ಬೆಳೆಯಿಸಿದನು. ಪ್ರಾಪಂಚಿಕಜ್ಞಾನವನ್ನು ಪಡೆದು, ಧರ್ಮಸೂಕ್ಷ್ಮವನ್ನೂ ಸ್ವಕರ್ತವ್ಯವನ್ನೂ ಅರಿತು ಪ್ರಬುದ್ಧಸ್ಥಿತಿಗೆ ಬಂದ ಮಗಳಿಗೆ ತಕ್ಕ ವರನನ್ನು ಸಂಪಾದಿಸಿ ಮದುವೆಮಾಡಬೇಕೆಂದು ವಿದರ್ಭರಾಜನು ಆಲೋಚಿಸಿದನು. ಆದರೆ ಅಗಸ್ತ್ಯಮಹರ್ಷಿಯ ಅಪ್ಪಣೆಯಿಲ್ಲದೆ, ಆ ಕನ್ಯೆಯನ್ನು ವರಿಸುವಷ್ಟು ಸಾಹಸ, ಧೈರ್ಯಗಳು ಯಾವ ರಾಜಕುಲಕ್ಕೂ ಉಂಟಾಗಲಿಲ್ಲವಾಗಿ ಅವಳು, ಕುಮಾರಿಯಾಗಿಯೇ ತಂದೆಯ ಬಳಿಯಲ್ಲೇ, ತಾಯಿತಂದೆಯರ ಸೇವೆಯಲ್ಲಿ ನಿರತೆಯಾಗಿರುತ್ತಿದ್ದಳು.

ಅಗಸ್ತ್ಯಮಹರ್ಷಿಯು ಪಿತೃಕುಲವನುದ್ಧರಿಸಿ, ಪಿತೃಋಣದಿಂದ ಮುಕ್ತನಾಗಲು, ಪುತ್ರಪ್ರಾಪ್ತಿಗಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕೆಂದು ಸಂಕಲ್ಪಿಸಿ, ಕನ್ಯಾರ್ಥಿಯಾಗಿ ವಿದರ್ಭರಾಜನಬಳಿಗೆ ಬಂದನು. ವಿದರ್ಭರಾಜನು ಅಗಸ್ತ್ಯಮಹರ್ಷಿಯನ್ನು ಸನ್ಮಾನಿಸಿ, ಸತ್ಕರಿಸಿದ ಬಳಿಕ ವಿನಯದಿಂದ, "ಪೂಜ್ಯರೇ! ಆಗಮನದ ಉದ್ದೇಶವೇನು? ನನ್ನಿಂದಾಗಬೇಕಾದ ಕಾರ್ಯವಾವುದು, ದಯೆಯಿಟ್ಟು ಅಪ್ಪಣೆಯಾದರೆ ಅದರಂತೆ ಆಚರಿಸುವೆನು." ಎಂದು ಕೇಳಿದನು. ಅಗಸ್ತ್ಯಋಷಿಯು ನಗುತ್ತಾ; ಎಲೈ ವಿದರ್ಭರಾಯನೇ! ನಿನ್ನ ವಾಕ್ಯವು ಮಾತ್ರ ದೃಢವಾಗಿರಬೇಕು! ಆ ಬಳಿಕ ಮಾತಿಗೆ ಹಿಂತೆಗೆಯುವದು ಕೂಡದು. ನಾನು ಈಗ ಪಿತೃಋಣದಿಂದ ಮುಕ್ತನಾಗುವುದಕ್ಕೆ ಪುತ್ರಸಂತಾನವನ್ನು ಪಡೆಯಬೇಕಾಗಿದೆ, ಆದಕಾರಣ ಗೃಹಸ್ಥಾಶ್ರಮಸ್ವೀಕಾರೇಚ್ಛೆಯಿಂದ ಕನ್ಯಾರ್ಥಿಯಾಗಿ ನಿನ್ನ ಬಳಿಗೆ ಬಂದಿರುವೆನು. ನೀನು ವಿಳಂಬಿಸದೆ ನಿನ್ನ ಪುತ್ರಿಯಾದ ಲೋಪಾಮುದ್ರೆಯನ್ನು ನನಗೆ ದಾನಮಾಡು" ಎಂದನು.

ಈ ಮಾತನ್ನು ಕೇಳಿ ವಿದರ್ಭರಾಜನು ಸ್ತಬ್ಧನಾದನು. ಅವನ ಬಾಯಿಂದ ಮಾತೇ ಹೊರಡದಂತಾಯಿತು. ಋಷಿಯು,—"ಏಕೆ, ರಾಜನೇ! ಇಷ್ಟವಿಲ್ಲವೇನು? ಮಾತನಾಡಲೊಲ್ಲೆ ಏಕೆ?" ಎಂದನು

ರಾಜನು ಯಾವುದೊಂದು ಮಾತನ್ನೂ ಹೇಳಲಾರದವನಂತಾಗಿ, "ಪೂಜ್ಯರೇ! ಸ್ವಲ್ಪ ಕುಳಿತಿದ್ದರೆ ಅಂತಃಪುರಕ್ಕೆ ಹೋಗಿ ಬೇಗ ಬರುವೆನು" ಎಂದು ಹೇಳಿ ಪತ್ನಿಯಬಳಿಗೆ ಹೋಗಿ ಪತ್ನಿಗೆ ವಿಚಾರವನ್ನು ತಿಳಿಸಿದನು. ಅವಳು ದುಃಖಸಂತಪ್ತೆಯಾದಳು. ಈ ವಿಚಾರವು ರಾಜಕುಮಾರಿಗೆ ಮುಟ್ಟಿತು. ತಾಯಿತಂದೆಯರು ದುಃಖಿಸುತ್ತಿರುವಲ್ಲಿಗೆ ಬಂದು ನಮಸ್ಕರಿಸಿ, ಬಹುಪರಿಯಾಗಿ ಹೇಳಿ ಸಂತೈಸಿದಳು. ಬಳಿಕ,- "ಅಪ್ಪಾ! ನನ್ನನ್ನು ಮಹಾಮಹಿಮನಾದ ಅಗಸ್ತ್ಯಋಷಿಗೆ ಧಾರಾಪೂರ್ವಕವಾಗಿ ಒಪ್ಪಿಸು. ಸಂತೋಷದಿಂದ ನಾನಾತನನ್ನು ಪತಿಯಾಗಿ ವರಿಸುವೆನು. ನೀವು ಎಳ್ಳಷ್ಟೂ ಚಿಂತೆಮಾಡಬೇಡಿರಿ". ಎಂದು ಸಂತೋಷದಿಂದ ಸಮ್ಮತಿಸಿದಳು.

ಲೋಪಾಮುದ್ರೆಯು ತಾನಾಗಿ ಸಮ್ಮತಿಸಿದಬಳಿಕ ವಿದರ್ಭರಾಜನು ಸಮಾಧಾನಪಟ್ಟು, ಅಗಸ್ತ್ಯಮುನಿಗೆ ಮಗಳ ಸಮ್ಮತಿಯನ್ನು ನಿವೇದಿಸಿ, ವಿಧಿಪೂರ್ವಕವಾಗಿ ಮಗಳನ್ನು ಧಾರೆಯೆರೆದುಕೊಟ್ಟನು.

ಅಗಸ್ತ್ಯನು ವಿವಾಹವಾದಕೂಡಲೇ ತನ್ನ ಆಶ್ರಮಕ್ಕೆ ತೆರಳಲು ಸಿದ್ಧನಾದನು, ಲೋಪಾಮುದ್ರೆಯೂ ಪತಿಯನ್ನು ನೆರಳಿನಂತೆ ಅನುವರ್ತಿಸಿ ನಿಂತಳು. ವಿದರ್ಭರಾಜನು ಮಗಳಿಗೆ ಬಳುವಳಿಯನ್ನು ಕೊಡಬೇಕೆಂದರೂ ಮಗಳು, ತನ್ನ ಪತಿಯ ಇಷ್ಟವನ್ನರಿತು, ತಾಪಸವೃತ್ತಿಯಲ್ಲಿರುವ ತನ್ನ ಪತಿಗೆ ಈ ರಾಜಭೋಗವೈಭವಗಳು ಅಸಹ್ಯವಾದವುಗಳೆಂದು ನಿರಾಕರಿಸಿ, ತಾನೂ ನಾರುಸೀರೆಯನ್ನೇ ಉಟ್ಟು ತನ್ನ ಸದ್ಗುಣ, ಸದ್ವರ್ತನಗಳೆಂಬ ಆಭರಣಗಳಿಂದಲೇ ಅಲಂಕೃತೆಯಾಗಿ ಪತಿಯೊಡನೆ ತಪೋವನಕ್ಕೆ ತೆರಳಿದಳು

ತಪೋವನಕ್ಕೆ ತೆರಳಿದಬಳಿಕಲಾದರೂ, ಲೋಪಾಮುದ್ರೆಯು ತನ್ನ ತಂದೆತಾಯಿಗಳಮೇಲಾಗಲೀ ಪತಿಯಮೇಲಾಗಲಿ ಕೋಪಿಸಲಿಲ್ಲ; ಅವರನ್ನು ಕುರಿತು ಬಿಡಿನುಡಿಯಾಡಿದವಳಲ್ಲ. ರಾತ್ರಿ ಹಗಲು ತನ್ನ ಪತಿಗೆ ಹಿತವಾಗುವಂತೆಯೂ, ತನ್ನ ಸದಾಚಾರದಿಂದ ತನ್ನ ತಾಯಿ-ತಂದೆಯರ ವೈಭವ, ಕೀರ್ತಿ, ಸಮಾಧಾನಗಳು ಹೆಚ್ಚುವಂತೆಯೂ ನಡೆಯುತ್ತಿದ್ದಳು.

ಪತ್ನಿಯ ಮನಶ್ಶುದ್ಧಿಗೂ ಸೇವಾತತ್ಪರತೆಗೂ ಅಗಸ್ತ್ಯಮುನಿಯು ಸುಪ್ರೀತನಾಗಿ ಕೇವಲ ತಪೋವೃತ್ತಿಯಲ್ಲಿಯೇ ಇರುವ ಪತ್ನಿಯಲ್ಲಿ ಕನಿಕರಗೊಂಡು, ಪುತ್ರಾರ್ಥಿಯಾದ ಆತನು, ಅವಳ ಕೂಡ ಕೆಲವು ಕಾಲ ವಿಷಯೋಪಭೋಗದಲ್ಲಿರಲು ಮನಸ್ಸುಮಾಡಿ, ಪತ್ನಿಗೆ ತನ್ನ ಇಷ್ಟವನ್ನು ತಿಳಿಸಿದನು. ಲೋಪಾಮುದ್ರೆಯು ತಪೋವೃತ್ತಿಗೆ ಭಂಗ ಬಾರದಂತೆಯೂ ಪವಿತ್ರವಾದ ಆಶ್ರಮವಾಸ, ಚೀರವಲ್ಕಲಗಳು ಅಲ್ಪವಾದ ವಿಷಯೋಪಭೋಗಗಳಿಗೆ ಉಪಯೋಗವಾಗುವದಾದರೆ ಅಪವಿತ್ರವಾಗುವುದರಿಂದ, ವಿಷಯೋಪಭೋಗಕ್ಕೆ ಅನುಕೂಲವಾದ ಸಂಪತ್ತನ್ನು ಪಡದು ಭೋಗಿಸಬೇಕೆಂದೂ ನಿವೇದಿಸಲು, ಮಹಾತ್ಮನಾದ ಅಗಸ್ತ್ಯಮುನಿಯು ಪತ್ನಿಯ ಇಷ್ಟವನ್ನು ಯುಕ್ತವೆಂದು ತಿಳಿದು, ದ್ರವ್ಯಾರ್ಜನೆಗಾಗಿ ತೆರಳಿ, ಬ್ರಾಹ್ಮಣದ್ವೇಷಿಗಳಾಗಿ, ಲೋಕಕಂಟಕರಾಗಿದ್ದ ಇಲ್ವಲವಾತಾಪಿಗಳಲ್ಲಿ ವಾತಾಪಿಯನ್ನು ನಿಗ್ರಹಿಸಿ, (ಇದನ್ನು ಮಹಾಭಾರತದ ಅರಣ್ಯಪರ್ವವನ್ನೋದಿ ವಿವರವಾಗಿ ತಿಳಿದುಕೊಳ್ಳಿರಿ.) ಇಲ್ವಲನಲ್ಲಿ ಅನುಗ್ರಹಬುದ್ಧಿಯನ್ನು ತೋರಿಸಿ, ಅವನಿಂದ ತನಗೆ ಬೇಕಾದ ಸುಖಸಾಮಗ್ರಿಗಳನ್ನು ಪಡೆದುಕೊಂಡು ಬಂದು ಪತ್ನಿಯಲ್ಲಿ ಭೋಗಿಸಿ, ಅವಳಿಂದ "ದೃಢದಸ್ಯು" ಎಂಬ ಹೆಸರಿನ ಲೋಕೋತ್ತರ ಗುಣಸಂಪನ್ನನಾದ ಪುತ್ರನನ್ನು ಪಡೆದು ಬಳಿಕ ತಾನು ಎಂದಿನಂತೆ ತಪಸ್ಸಿಗೆತೊಡಗಿದನು.

ಲೋಪಾಮುದ್ರೆಯೂ ಪುತ್ರಾರ್ಥಿಯಾಗಿದ್ದ ಪತಿಯ ಅಭೀಷ್ಟ ಸಿದ್ಧಿಯಾದಬಳಿಕ ಪತಿಯ ತಪೋವೃತ್ತಿಯನ್ನೇ ತಾನೂ ಅನುಸರಿಸಿದಳು. ಅಂದಿನಿಂದ ಲೋಪಾಮುದ್ರೆಯ ಖ್ಯಾತಿ ದಿಗಂತವಿಶ್ರಾಂತವಾಗಿ ಆಚಂದ್ರಾರ್ಕವಾಗಿ ಪ್ರಕಾಶಿಸುತ್ತಿರುವುದು.

ಬಾಲೆಯರೇ! ಕೇಳಿದಿರೇನು?

ತಾಯಿತಂದೆಗಳು ವಿಪತ್ತಿಗೆ ಗುರಿಯಾಗಬಾರದೆಂದು ತಾನು ಕೃಶಾಂಗನೂ ತಪಸ್ವಿಯೂ ಆದ ಅಗಸ್ತ್ಯನಿಗೆ ಆತ್ಮಸಮರ್ಪಣಮಾಡಿದಳು. ಪಿತನು ಒಲಿದು, ಕೊಡಬಂದ ಬಳುವಲಿಗಳನ್ನು ಒಲ್ಲೆನೆಂದು ಬಿಟ್ಟುಬಂದಳು. ಅನುದಿನವೂ ಮಾತಾಪಿತರಿಗೆ ಹಿತವಾಗುವಂತೆ

ಆಚರಿಸಿದಳು. ನೀವಾದರೇನುಮಾಡುವಿರಿ ? ಪತಿಯು ಬಡವರ ಮ
ನಾಗಿದ್ದರೆ, ಅವನನ್ನೂ, ಅತ್ತೆಮಾವಂದಿರನ್ನೂ ದುರ್ಲಕ್ಷಿಸುವಿ
ಗಂಡನನ್ನು ಪರಿಪರಿಯಾಗಿ ಕಾಡುವಿರಿ,ಇಂತಹ ದಿಕ್ಕೆಟ್ಟಮನೆಗೆ ತನ್ನನ್ನು
ಕೊಟ್ಟರೆಂದು ತಾಯಿತಂದೆಯರನ್ನು ಸಹಸ್ರನಾಮಗಳಿಂದ ಹಗಲಿರಳು
ಎಳೆದಾಡುವಿರಿ. ಅಹುದೋ–ಅಲ್ಲವೊ ? ಹೇಳಿರಿ, ನೀವು ಎಂದ
ದರೂ ಒಮ್ಮೆಯಾದರೂ ನಿಮ್ಮ ಸುಖವನ್ನು ಕಟ್ಟಿಟ್ಟು ಹೆತ್ತತಾಯಿ
ತಂದೆಯರ ಕ್ಷೇಮವನ್ನೂ, ನಿಮ್ಮ ಜನ್ಮಭೂಮಿಯ ಮೇಲ್ಮೆಯನ್ನೂ
ನೀವೇನಾದರೂ ಮನಸ್ಸಿಗೆ ತಂದುಕೊಳ್ಳುವಿರೋ ? ಪಾಪ ! ಆ ತಾಯಿ
ತಂದೆಯರು, ಎಷ್ಟೇಕಷ್ಟದಲ್ಲಿರಲಿ, ನೀವು ನಿಮಗೆ ಬೇಕಾದವಸ್ತು
ಗಳನ್ನು ಅವರಿಂದ ತೆಗೆಯಿಸಿಕೊಳ್ಳಲಿಕ್ಕೇನಾದರೂ ಹಿಂತೆಗೆಯುವಿರೋ
(ಒಬ್ಬಿಬ್ಬರು ತಾಯಿತಂದೆಯರಲ್ಲಿ ಮಮತೆ, ಕನಿಕರ, ಕೃತಜ್ಞತೆ
ಯುಳ್ಳವರಾಗಿರಬಹುದು. ಅವರಮಾತು ಇಲ್ಲಿ ಬೇಕಾಗಿಲ್ಲ.) ಹಾ
ರುವ ನಿಮಗೆ ಎಷ್ಟು ಸಮಾಧಾನವಾಗಬಹುದು ? ನಿಮ್ಮಿಂದ ನಿಮ್ಮ
ಹೆತ್ತವರಿಗೆಷ್ಟು ಸಂತೋಷವಾಗಬಹುದು ? ಲೋಪಾಮುದ್ರೆಯು
ತಂದೆತಾಯಿಯರಲ್ಲಿ ತೋರಿಸಿದ ಭಕ್ತಿ, ಪ್ರೀತಿ, ಗೌರವಗಳಿಗೆ ಅನು
ಗುಣವಾದ ಕೀರ್ತಿ, ಸಂಪತ್ತು ವೈಭವಗಳನ್ನು ಪಡೆದಳಲ್ಲದೆ ನಮ್ಮ
ನಿಮ್ಮೆಲ್ಲರಿಗೂ ಮಾರ್ಗದರ್ಶಿನಿಯರಾಗಿ ನಿಂತು ಪ್ರಕಾಶಿಸುವಂತಾದಳು
ಹಾಗಾದರೆ ನೀವು ಏನುಮಾಡಬೇಕು ? ಯಾರನ್ನು ಅನುಕರಿಸಬೇ
ಕು. ವಿಚಾರಮಾಡಿ, ನಿಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳುವಿರಷ್ಟೆ
(ಹಾಗಾಗಲಿ).